01 January 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅತಿಯಾದ ತಾಳ್ಮೆ ವ್ಯಕ್ತಿಯ ವ್ಯಕ್ತಿತ್ವಕ್ಕೆ ಧಕ್ಕೆ ತಂದರೆ,
ಮಿತಿ ಮೀರಿದ ಸಿಟ್ಟು ಜೀವನಕ್ಕೆ ಹಾನಿ ತರುತ್ತದೆ!
-ಸ್ನೇಹಾ ಆನಂದ್

info.varthaman@gmail.com

**ಒಂದೊಳ್ಳೆ ಮಾತು**

ಸಮಯ ಬರುವ ತನಕ ಮಾತ್ರ ಸುಳ್ಳು ತುಂಬಾ ಪ್ರಬಲವಾಗಿರುತ್ತದೆ, ಬಲಿಷ್ಠವಾಗಿರುತ್ತದೆ, ಸಮಯ ಬಂದ ಮೇಲೆ ಆ ಸತ್ಯದ ಪ್ರಭಾವದಿಂದ ಸುಳ್ಳು ಸುಟ್ಟು ಹೋಗುತ್ತದೆ
ಮೈಲಾರ ಸಾವಿತ್ರಿಬಾಯಿ

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 67 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಅದ್ದೂರಿ ಹೊಸ ವರ್ಷಾಚರಣೆ

## ಅರಮನೆ ಆವರಣದಲ್ಲಿ ಸಂಭ್ರಮ | ರಂಗೇರಿದ ಪಬ್ಬು, ಕ್ಲಬ್ಬುಗಳು

**ಮೈಸೂರು:** ಹೊಸ ವರ್ಷಕ್ಕೆ ಅದ್ದೂರಿ ಸ್ವಾಗತ ಕೋರಲಾಯಿತು. ಯುವಜನರು ಕ್ಲಬ್ಬು, ಪಬ್ಬುಗಳಿಗೆ ಕುಡಿದು, ಕುಣಿದು ಕುಪ್ಪಳಿಸಿ ರಂಗು ತುಂಬಿದರು. ಹಿರಿಯರು, ಗೃಹಿಣಿಯರು ದೇವಾಲಯಗಳಿಗೆ ಭೇಟಿ ನೀಡಿ ಹೊಸ ವರ್ಷದಲ್ಲಿ ನಮ್ಮೆಲ್ಲಾ ಆಕಾಂಕ್ಷೆಗಳನ್ನು ಈಡೇರಿಸುವಂತೆ ದೇವರನ್ನು ಬೇಡುವ ಮೂಲಕ ಹೊಸ ವರ್ಷವನ್ನು ಸ್ವಾಗತಿಸಿದರು.

ನಗರದ ಅರಮನೆ ಆವರಣದಲ್ಲಿ ಸಾವಿರಾರು ಜನರು ಹೊಸ ವರ್ಷಾಚರಣೆ ನಡೆಸಿದರು. ಕಳೆದ ಒಂದು ವಾರದಿಂದ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನದ ಕೊನೆಯ ದಿನವಾದ ಬುಧವಾರ ಮಧ್ಯ ರಾತ್ರಿ ವರೆಗೂ ವಿವಿಧ ಸಾಂಸ್ಕೃತಿಕ ಮತ್ತು ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾತ್ರಿ 12ಕ್ಕೆ ಸರಿಯಾಗಿ ಅರಮನೆ ಆವರಣದಲ್ಲಿ ಹಸಿರು ಪಟಾಕಿ ಹಾರಿಸಿ ಸಂಭ್ರಮಿಸಿದರು.

ನಗರದ ಪಬ್ಬು, ಕ್ಲಬ್ಬುಗಳು ಕಿಕ್ಕಿರಿದು ತುಂಬಿದ್ದವು. ಎಲ್ಲೆಡೆ ರಂಗೇರಿತ್ತು. ಅಲ್ಲದೆ, ಜನರು ತಮ್ಮ ಮನೆಯಲ್ಲಿಯೇ ಕೇಕ್ ಕತ್ತರಿಸುವ ಮೂಲಕ ಸಂಭ್ರಮಿಸಿದರು. ಒಟ್ಟಾರೆ 2025ಕ್ಕೆ ಬೈ ಬೈ ಹೇಳಿ, 2026ನ್ನು ಸ್ವಾಗತಿಸಿ ಸಂಭ್ರಮಿಸಿದರು.







### ಫುಲ್ ಟೈಟ್ ಆದವರಿಗಷ್ಟೇ ಪೊಲೀಸ್ ಡ್ರಾಪ್!: ಪರಮೇಶ್ವರ್



**ಬೆಂಗಳೂರು:** ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಡ್ರಿಂಕ್ಸ್ ಮಾಡಿರುವ ಎಲ್ಲರನ್ನೂ ಮನೆಗೆ ಕರೆದುಕೊಂಡು ಹೋಗಿ ಬಿಡುವುದಿಲ್ಲ ಎಂದು ಗೃಹ ಪರಮೇಶ್ವರ್ ಸ್ಪಷ್ಟನೆ ನೀಡಿದರು.

ಮಾಧ್ಯಮದವರೊಂದಿಗೆ ಬುಧವಾರ ಮಾತನಾಡಿದ ಅವರು, ತುಂಬಾ ಕುಡಿದು ನಡೆಯಲು ಆಗದಿರುವವರನ್ನ ವಿಶ್ರಾಂತಿ ಸ್ಥಳಕ್ಕೆ ಬಿಡುತ್ತೇವೆ. ಕೆಲವರು ಪ್ರಜ್ಞೆ ಇರದ ಮಟ್ಟಕ್ಕೆ ಹೋಗುತ್ತಾರೆ. ಅಂತಹವರಿಗಾಗಿ 15 ಕಡೆ ರೆಸ್ಟಿಂಗ್ ಪ್ಲೇಸ್ ಮಾಡಿದ್ದೇವೆ. ನಶೆ ಇಳಿಯುವವರೆಗೂ ಇಟ್ಟುಕೊಂಡು ನಂತರ ಕಳಿಸುತ್ತೇವೆ

### ಕಾವೇರಿ ಪ್ರವಾಸಿ ತಾಣಗಳಲ್ಲಿ ಮೋಜು, ಮಸ್ತಿಗೆ ನಿಷೇಧ



**ಮಂಡ್ಯ:** ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಸಕ್ಕರೆ ನಾಡು ಮಂಡ್ಯ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆ ಹದ್ದಿನ ಕಣ್ಣಿಟ್ಟಿದೆ. ಅಲ್ಲದೆ, ಹಲವು ಬಿಗಿ ನಿಯಮಗಳನ್ನು ಜಾರಿ ಮಾಡಿದೆ. ಪ್ರಮುಖವಾಗಿ ಕಾವೇರಿ ನದಿ ತೀರದಲ್ಲಿ ಪೊಲೀಸ್ ಇಲಾಖೆ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದೆ.

ಪ್ರತಿ ವರ್ಷ ಹೊಸ ವರ್ಷದ ಸಂಭ್ರಮಾಚರಣೆಯ ನೆಪದಲ್ಲಿ ಜನರು ಕಾವೇರಿ ನದಿಗೆ ಇಳಿದು ಮೋಜು ಮಸ್ತಿ ಮಾಡುತ್ತಿದ್ದರು. ಈ ವೇಳೆ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆಯೂ ಸಹ ಹೆಚ್ಚಾಗುತ್ತಿತ್ತು. ಈ ಸಾವು ನೋವುಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಕಾವೇರಿ ತೀರದಲ್ಲಿ ಬುಧವಾರ ಬೆಳಗ್ಗೆ 6 ಗಂಟೆಯಿಂದ ಜನವರಿ 2ರ ಬೆಳಗ್ಗೆ 6 ಗಂಟೆಯವರೆಗೆ ನಿಷೇಧಾಜ್ಞೆ ಜಾರಿ ಮಾಡಿದೆ. ಕಾವೇರಿ ತೀರದಲ್ಲಿ ಯಾರೂ ಅಡಿಗೆ

## ಹುಡುಕಿದ್ದು ತಾಯಿ, 4 ಮರಿ ಹುಲಿಗಳಿಗೆ: ಸಿಕ್ಕಿದ್ದು ಗಂಡು ಹುಲಿ

**ಚಾಮರಾಜನಗರ:** ತಾಲ್ಲೂಕಿನ ನಂಜೇದೇವನಪುರ ಸಮೀಪದಲ್ಲಿ ಗಂಡು ಹುಲಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದಾರೆ.

ಗ್ರಾಮದಲ್ಲಿ 4 ಮರಿಗಳೊಂದಿಗೆ ಬೀಡು ಬಿಟ್ಟಿರುವ ತಾಯಿ ಹುಲಿಯನ್ನು ಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ಕೋಬಿಂಗ್ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಆಶ್ಚರ್ಯಕರ ರೀತಿಯಲ್ಲಿ ಗಂಡು ಹುಲಿಯೊಂದು ಮಂಗಳವಾರ ತಡ ರಾತ್ರಿ ಸೆರೆಯಾಗಿದೆ.


ತಾಲ್ಲೂಕಿನ ನಂಜೇದೇವನಪುರ, ವೀರನಪುರ, ಆನೆ ಮಡುವಿನ ಕೆರೆ ಬಳಿ 5 ಹುಲಿಗಳಿವೆ ಎಂದು ಗುರುತಿಸಿ, ಕಾರ್ಯಾಚರಣೆ ನಡೆಸಲಾಗುತ್ತಿತ್ತು. ನಿನ್ನೆ ರಾತ್ರಿ ಗಂಡು ಹುಲಿ ಕಾಣಿಸಿಕೊಂಡ ಕೂಡಲೇ ಸಾಕಾನೆಗಳ ಸಹಾಯದಿಂದ ಅರಿವಳಿಕೆ ಮದ್ದು ಕೊಟ್ಟು ಸೆರೆ ಹಿಡಿಯಲಾಗಿದೆ. ಕೂಂಬಿಂಗ್ ಎಕ್ಸ್ ಪರ್ಟ್ ಸುಗ್ರೀವ ಕರಾರುವಕ್ಕಾಗಿ ಹುಲಿಯ ವಾಸನೆ ಪತ್ತೆ ಹಚ್ಚಿ ತನ್ನ ಮಾವುತ ಶಂಕರ್‌ಗೆ ಸೂಚನೆ ನೀಡಿತ್ತು. ತಕ್ಷಣ ಸುಗ್ರೀವ ಆನೆಯ ಸಹಾಯದಿಂದ ಆನೆಮಡುವಿನ ಕೆರೆ ಪಕ್ಕ ನೀರು ಕುಡಿಯಲು ಬಂದ ಹುಲಿಗೆ ಪಶು ವೈದ್ಯರು ಅರಿವಳಿಕೆ ಕೊಟ್ಟರು. ಬಳಿಕ ಸೆರೆ ಹಿಡಿಯಲಾಯಿತು.

ಒಂದು ತಾಯಿ ಹುಲಿ ಮತ್ತು ನಾಲ್ಕು ಮರಿಗಳು ಒಂದೆಡೆ ಇದ್ದವು. ಈ ಗಂಡು ಹುಲಿ ಪ್ರತ್ಯೇಕವಾಗಿತ್ತು. ಇದರಿಂದ ನಂಜೇದೇವನಪುರದಲ್ಲಿ ಇದ್ದದ್ದು 5 ಅಲ್ಲ 6 ಹುಲಿ ಎಂದು ಗುರುತಿಸಲಾಗಿದೆ.



ಕಲ್ಪುರದಲ್ಲಿ ಕಳೆದ ತಿಂಗಳು ಕ್ಯಾಮರಾ ಆಪ್ ನಲ್ಲಿ ಸೆರೆಹಿಡಿಯಲಾಗಿದ್ದ ದೊಡ್ಡ ಗಾತ್ರದ ಹುಲಿ ಇದಾಗಿದೆ ಎನ್ನಲಾಗಿದೆ.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ 100ಕ್ಕೂ ಅಧಿಕ ಸಿಬ್ಬಂದಿ ಒಂದು ಹುಲಿಯನ್ನು ಸೆರೆ ಹಿಡಿದಿದ್ದು ಆಪರೇಷನ್ 5 ಟೈಗರ್ಸ್ (ತಾಯಿ ಹುಲಿ ಜೊತೆ ನಾಲ್ಕು ಮರಿ ಹುಲಿಗಳು) ಕಾರ್ಯಾಚರಣೆ ಮುಂದುವರೆದಿದೆ.



## ಕೋಗಿಲು ಜಟಾಪಟಿ ನಂತರ ಸಿದ್ದು-ಪಿಣರಾಯಿ ಕುಶಲೋಪರಿ

**ತಿರುವನಂತಪುರಂ:** ಬೆಂಗಳೂರಿನ ಕೋಗಿಲು ಲೇಔಟ್‌ನಲ್ಲಿ ಅಕ್ರಮ ನಿವಾಸಗಳ ತೆರವು ವಿಚಾರವಾಗಿ ಕರ್ನಾಟಕ ಮತ್ತು ಕೇರಳ ಸರ್ಕಾರಗಳ ನಡುವೆ ಜಟಾಪಟಿ ನಡೆದಿತ್ತು. ಆದರೆ, ಇದರ ಮಧ್ಯೆ, ಕೇರಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಸಿಎಂ ಸಿದ್ದರಾಮಯ್ಯ ಹಾಗೂ ಕೇರಳ ಸಿಎಂ ಇಬ್ಬರೂ ಪರಸ್ಪರ ಅಪ್ಪಿಕೊಂಡು ಕುಶಲೋಪರಿ ವಿಚಾರಿಸಿದರು.

ವರ್ಕಲಾದ ಶಿವಗಿರಿ ಮಠದಲ್ಲಿ ಬುಧವಾರ ನಡೆದ ಶಿವಗಿರಿ ತೀರ್ಥಯಾತ್ರೆಯಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದರು. ಕೋಗಿಲು ಅಕ್ರಮ ಒತ್ತುವರಿ ಧ್ವಂಸ ಪ್ರಕರಣದ ರಾಜಕೀಯ ಘರ್ಷಣೆ ನಂತರ, ಸಿದ್ದರಾಮಯ್ಯ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮುಖಾಮುಖಿ ಇದೇ ಮೊದಲು. ಸಿದ್ದರಾಮಯ್ಯ ಅವರ ಭಾಷಣಕ್ಕೂ ಮೊದಲೇ ವಿಜಯನ್ ಕಾರ್ಯಕ್ರಮದಿಂದ ನಿರ್ಗಮಿಸಿದರು. ಆದರೆ, ಹೊರಡುವ ಮೊದಲು ಕೇರಳ ಮುಖ್ಯಮಂತ್ರಿ, ಸಿದ್ದರಾಮಯ್ಯ ಅವರ ಬಳಿಗೆ ಹೋಗಿ ಆತ್ಮೀಯವಾಗಿ ಮಾತನಾಡಿದರು. ಸಚಿವ ಸಂಪುಟ ಸಭೆ



ಯಲ್ಲಿ ಭಾಗವಹಿಸಲು ತಾವು ಹೊರಡಬೇಕಾದ ತುರ್ತು ಪರಿಸ್ಥಿತಿಯನ್ನು ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿ ಹೊರಟರು ಎನ್ನಲಾಗಿದೆ.

ಬೆಂಗಳೂರಿನ ಕೋಗಿಲು ಲೇಔಟ್‌ನಲ್ಲಿ ಅಕ್ರಮ ನಿವಾಸಗಳ ತೆರವನ್ನು ಕೇರಳ ಸಿಎಂ ಪಿಣರಾಯಿ ವಿಜಯನ್ ಖಂಡಿಸಿದ್ದರು. ಉತ್ತರ ಪ್ರದೇಶದಂತೆ ಪುಟ 2ಕ್ಕೆ

## ವಿಧಾನ ಪರಿಷತ್ ಚುನಾವಣೆ: ಲಿಂಗಾಯತರಿಗೆ ಕಾಂಗ್ರೆಸ್ ಮಣೆ

**▸▸ ನಾಲ್ಕರಲ್ಲಿ ಮೂರು ಎಂಎಲ್ಸಿ ಟಿಕೆಟ್ ಅನ್ನು ಒಂದೇ ಜಾತಿ ನೀಡಿ ಕಾರ್ಯತಂತ್ರ**

**ಬೆಂಗಳೂರು:** ರಾಜ್ಯ ವಿಧಾನ ಪರಿಷತ್‌ಗೆ ನಡೆಯಲಿರುವ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳ ನಾಲ್ಕು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಈ ಬಾರಿ ಲಿಂಗಾಯತ ಅಭ್ಯರ್ಥಿಗಳಿಗೆ ಮಣೆ ಹಾಕಿರುವುದು ಅಚ್ಚರಿಗೆ ಕಾರಣವಾಗಿದೆ. ನಾಲ್ಕರಲ್ಲಿ ಮೂರು ಸ್ಥಾನವನ್ನು ಲಿಂಗಾಯತ್ತರಿಗೆ ನೀಡಲಾಗಿದೆ.

2026ರ ನವೆಂಬರ್ ವೇಳೆಗೆ ತೆರವಾಗಲಿರುವ ನಾಲ್ಕು ಸ್ಥಾನಗಳಿಗೆ ಕೈ ಅಭ್ಯರ್ಥಿಗಳನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಕಟಿಸಿದ್ದಾರೆ. ಇವರಲ್ಲಿ ಮೂರು ಮಂದಿ ಮಾಜಿ ವಿಧಾನ ಪರಿಷತ್ ಸದಸ್ಯರಿಗೆ ಟಿಕೆಟ್ ನೀಡಲಾಗಿದೆ. ಒಂದು ಕ್ಷೇತ್ರದಲ್ಲಿ ಮಾತ್ರ ಹೊಸಬರಿಗೆ ಮಣೆ ಹಾಕಲಾಗಿದೆ.

ಮಾಜಿ ಎಂಎಲ್‌ಸಿ ಮೋಹನ್ ಲಿಂಬಿಕಾಯಿ (ಪಶ್ಚಿಮ ಪದವೀಧರ), ಶಶಿ ಹುಲಿಕುಂಟೆಮಠ (ಆಗ್ನೇಯ ಪದವೀಧರ), ಮಾಜಿ ಎಂಎಲ್‌ಸಿ ಶರಣಪ್ಪ ಮಾಥುರ್ (ಈಶಾನ್ಯ ಶಿಕ್ಷಕರು) ಮತ್ತು ಬೆಂಗಳೂರು ಶಿಕ್ಷಕರ ಪುಟ 2ಕ್ಕೆ



### ರಾಜಣ್ಣ ಬೆಂಬಲಿಗನಿಗೆ ಮಣೆ!

ಆಗ್ನೇಯ ಪದವೀಧರ ಕ್ಷೇತ್ರದಿಂದ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರ ಬೆಂಬಲಿಗ ಶಶಿ ಹುಲಿಕುಂಟೆಮಠ ಅವರನ್ನು ಆಯ್ಕೆ ಮಾಡಲಾಗಿದೆ. ಈ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾರ್ಯತಂತ್ರ ರೂಪಿಸಿದ್ದಾರೆ. ರಾಜಣ್ಣ ಅವರಿಂದ ಶಶಿ ಹುಲಿಕುಂಟೆಮಠ ದೂರವಾಗಿದ್ದಾರೆ ಪುಟ 2ಕ್ಕೆ

### ಕ್ಷೇತ್ರವಾರು ಮಾಹಿತಿ

**ಪಶ್ಚಿಮ ಪದವೀಧರ ಕ್ಷೇತ್ರ: 74,311 ಮತದಾರರು**

▸▸ ಉತ್ತರ ಕನ್ನಡ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಎಲ್ಲಾ ವಿಧಾನಸಭಾ ಕ್ಷೇತ್ರಗಳ ನೋಂದಾಯಿತ ಪದವೀಧರ ಮತದಾರರು ಒಳಗೊಂಡಿದೆ

**ಆಗ್ನೇಯ ಪದವೀಧರ ಕ್ಷೇತ್ರ: 1,51,374 ಮತದಾರರು**

▸▸ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳು (ದಾವಣಗೆರೆಯಲ್ಲಿ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕು ಹೊರತುಪಡಿಸಿ)

**ಈಶಾನ್ಯ ಶಿಕ್ಷಕರ ಕ್ಷೇತ್ರ: 31,214 ಮತದಾರರು**

▸▸ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳು

**ಬೆಂಗಳೂರು ಶಿಕ್ಷಕರ ಕ್ಷೇತ್ರ: 21,496 ಮತದಾರರು** ಪುಟ 2ಕ್ಕೆ

## ಗ್ರಾಪಂ ವ್ಯಾಪ್ತಿಯ ವಸತಿ ಕಟ್ಟಡಗಳಿಗೆ ಒ.ಸಿ ವಿನಾಯಿತಿ

ಬೆಂಗಳೂರು: ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಇಲ್ಲದೆ 1,200 ಚದರ ಅಡಿ ವಿಸ್ತೀರ್ಣದ ಒಳಗಿನ ನಿವೇಶನಗಳಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಪಡೆಯುವುದರಿಂದ ವಿನಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ನೆಲ +2 ಅಂತಸ್ತು ಅಥವಾ ಸ್ಟಿಲ್ಟ್+3 ಅಂತಸ್ತಿನವರೆಗಿನ ವಸತಿ ಕಟ್ಟಡಗಳಿಗೆ ಮಾತ್ರ ಇದು ಅನ್ವಯವಾಗಲಿದೆ. ಇದರಿಂದಾಗಿ ಈಗಾಗಲೇ ನಿರ್ಮಾಣವಾಗಿರುವ ಹಾಗೂ ಇನ್ನು ಮುಂದೆ ನಿರ್ಮಾಣ ಆಗಲಿರುವ ಕಟ್ಟಡಗಳಿಗೆ ವಿದ್ಯುತ್ ಹಾಗೂ ನೀರಿನ ಸಂಪರ್ಕ ಪಡೆಯುವುದು ಸುಲಭವಾಗಲಿದೆ. ಡಿಸೆಂಬರ್ 12ರಂದು ನಡೆದ ಪುಟ 2ಕ್ಕೆ

## ಸಿದ್ದರಾಮಯ್ಯ ದಾಖಲೆ ಸಿಎಂ: 6ಕ್ಕೆ ನಾಟಿ ಕೋಳಿ ಔತಣಕೂಟ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನವರಿ 6ರಂದು ರಾಜ್ಯದಲ್ಲಿ ಸುದೀರ್ಘ ಅವಧಿಯ ಆಡಳಿತ ನಡೆಸಿದ ಮುಖ್ಯಮಂತ್ರಿ ಎಂಬ ದೇವರಾಜ ಅರಸು ಅವರ ದಾಖಲೆ ಮುರಿಯುವ ಮೂಲಕ ಹೊಸ ದಾಖಲೆ ನಿರ್ಮಿಸಲಿದ್ದಾರೆ. ಈ ಸಂಭ್ರಮವನ್ನು ವಿಭಿನ್ನವಾಗಿ ನಾಟಿ ಕೋಳಿ ಔತಣಕೂಟ ಆಯೋಜಿಸಿ ಸಂಭ್ರಮಿಸಲು ಅಭಿಮಾನಿಗಳು ಮುಂದಾಗಿದ್ದಾರೆ.



ಡಿ.ದೇವರಾಜ್ ಅರಸ್ ಸುಮಾರು 7.6 ವರ್ಷಗಳ ಕಾಲ ಅಂದರೆ 2,792 ದಿನಗಳು ಅಧಿಕಾರದಲ್ಲಿದ್ದರು. ಸಿದ್ದರಾಮಯ್ಯ ಈಗ ಆ ದಾಖಲೆ ಮುರಿಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೆಲಮಂಗಲದ ಭಕ್ತನ ಪಾಳ್ಯದಲ್ಲಿ ಜ.6ರಂದು ನಾಟಿ ಕೋಳಿ ಔತಣಕೂಟ ನಡೆಯಲಿದೆ. ನಾಟಿಕೋಳಿ ಸಾಂಬಾರ್, ಪುಟ 2ಕ್ಕೆ

## ಪೊಲೀಸರ ನಿರ್ಲಕ್ಷ್ಯ: ವಿಜಯಲಕ್ಷ್ಮಿ ಅಸಮಾಧಾನ

**ಬೆಂಗಳೂರು:** ಸಾಮಾಜಿಕ ಜಾಲತಾಣಗಳ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿರುವ ಕಿಡಿಗೇಡಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆ ಬಗ್ಗೆ ಪೊಲೀಸರು ಯಾವುದೇ ಕ್ರಮಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನಮ್ಮ ದೇಶದಲ್ಲಿ ಎಲ್ಲರಿಗೂ ವ್ಯವಸ್ಥೆ ಮತ್ತು ಕಾನೂನು ಒಂದೇ ಎಂದು ನಾನು ಯಾವಾಗಲೂ ನಂಬಿದ್ದೇನೆ. ಆದರೆ ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಈ ಅನುಭವವು ಆ ನಂಬಿಕೆಯನ್ನು ಪ್ರಶ್ನಿಸುವಂತೆ ಮಾಡಿದೆ ಎಂದು ಟೀಕಿಸಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.




ನನಗೆ ಆಶ್ಚರ್ಯವಾಗಿದ್ದೇನೆಂದರೆ, ನಾನು ಸಲ್ಲಿಸಿದ ದೂರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಆದರೆ ಮತ್ತೊಬ್ಬ ಮಹಿಳೆ ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿ ಒಂದು ದಿನದೊಳಗೆ ಕ್ರಮ ಕೈಗೊಳ್ಳಲಾಗಿದೆ. ಇದು ನಿಜವಾಗಿಯೂ ನನ್ನನ್ನು ಆಶ್ಚರ್ಯಗೊಳಿಸುತ್ತಿದೆ. ನಾನು ನೀಡಿದ ದೂರು ಅಷ್ಟು ಮುಖ್ಯವಾದುದಲ್ಲವೇ ಅಥವಾ ಅದಕ್ಕೆ ಪ್ರಾಮುಖ್ಯತೆಯೇ ಇಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.

ನನ್ನ ಪರ ವಕೀಲರು ಈ ವಿಚಾರಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ವಿಚಾರಿಸಿದರು ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ. ಪುಟ 2ಕ್ಕೆ

## ಧರ್ಮಸ್ಥಳದ ವಿರುದ್ಧ ಷಡ್ಯಂತ್ರ: ವಕಾಲತ್ತು ಸಲ್ಲಿಕೆ

**ಮಂಗಳೂರು:** ಬುರುಡೆ ಷಡ್ಯಂತ್ರ ಪ್ರಕರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಪರವಾಗಿ ಬೆಳ್ತಂಗಡಿ ನ್ಯಾಯಾಲಯಕ್ಕೆ ವಕಾಲತ್ತು ಸಲ್ಲಿಸಲಾಗಿದೆ. ಹಿರಿಯ ವಕೀಲ ಸಿ.ವಿ.ನಾಗೇಶ್ ಹಾಗೂ ಪುತ್ತೂರಿನ ವಕೀಲ ಮಹೇಶ್ ಕಜೆ ಬುಧವಾರ ಬೆಳ್ತಂಗಡಿ ಕೋರ್ಟ್ ನಲ್ಲಿ ವಕಾಲತ್ತು ಸಲ್ಲಿಸಿದರು.



ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವನ್ನು ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದ್ದು ಈಗಾಗಲೇ ಬೆಳ್ತಂಗಡಿ ಕೋರ್ಟ್ ಗೆ ವರದಿ ಸಲ್ಲಿಸಿದೆ. ಈ ವರದಿಗೆ ಸಂಬಂಧಿಸಿ ಜ.3ರಂದು ಬೆಳ್ತಂಗಡಿ ಕೋರ್ಟ್ ಆದೇಶ ಮಾಡಲಿದೆ. ವರದಿಯಲ್ಲಿ ಧರ್ಮಸ್ಥಳ ವಿರುದ್ಧ ಷಡ್ಯಂತ್ರ ನಡೆಸಿರುವುದು ಬಹಿರಂಗೊಂಡಿದ್ದರೂ ಷಡ್ಯಂತ್ರ ನಡೆಸಿದವರ ವಿರುದ್ಧ ಎಸ್ಐಟಿ ಕ್ರಮಕೈಗೊಳ್ಳದ ಪುಟ 2ಕ್ಕೆ

## ಬಿಜೆಪಿ ನಾಯಕರ ರಾಜಕೀಯ ಹೇಳಿಕೆ

*** ಬಾಂಗ್ಲಾ ದೇಶಿಯರಿದ್ದರೆ ಬಂಧಿಸಿ ಗಡಿಪಾರು: ಸಚಿವ ಪರಮೇಶ್ವರ್**

**ಬೆಂಗಳೂರು:** ಕೋಗಿಲು ಲೇಔಟ್ ನಿವಾಸಿಗಳ ದಾಖಲೆಗಳ ಪರಿಶೀಲನೆ ಮತ್ತು ಅವರ ಅರ್ಹತೆಯನ್ನು ದೃಢಪಡಿಸಿದ ನಂತರ ಅವರು ಸ್ಥಳೀಯರಾಗಿದ್ದರೆ ಪರಿಹಾರ ನೀಡಲಾಗುತ್ತದೆ. ರಾಜ್ಯ ಸರ್ಕಾರ ಬಾಂಗ್ಲಾದೇಶದ ಅಕ್ರಮ ವಲಸಿಗರಿಗೆ ಮನೆ ಮಂಜೂರು ಮಾಡುತ್ತಿದೆ ಎಂಬ ಬಿಜೆಪಿ ಆರೋಪ ರಾಜಕೀಯ ಹೇಳಿಕೆ ಎಂದು ಗೃಹ ಸಚಿವ ಪರಮೇಶ್ವರ್ ಪ್ರತಿಪಾದಿಸಿದರು.

ಬೆಂಗಳೂರಿನ ಕೋಗಿಲು ಲೇಔಟ್ ನಲ್ಲಿರುವ ಅನಧಿಕೃತ ಮನೆ ತೆರವು ಮಾಡಿರುವ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವ ಹೆಸರಿನಲ್ಲಿ ಅಕ್ರಮ ವಲಸಿಗರಿಗೆ ಮನೆ ಮಂಜೂರು ಮಾಡುತ್ತಿದೆ ಎಂಬ ಬಿಜೆಪಿ ಆರೋಪವನ್ನು ಬುಧವಾರ ಅವರು ಸ್ಪಷ್ಟವಾಗಿ ತಳ್ಳಿಹಾಕಿದರು.



ಬಾಂಗ್ಲಾ ದೇಶಿಯರು ಅಲ್ಲಿದ್ದಾರೆ ಎಂದು ಸುಮ್ಮನೆ ಹೇಳಿಕೆ ನೀಡುವುದು ಸರಿಯಲ್ಲ. ನಾವು ಪರಿಶೀಲಿಸುವುದಿಲ್ಲವೇ? ಸರಿಯಾದ ಪರಿಶೀಲನೆ ನಂತರವೇ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಬಾಂಗ್ಲಾದೇಶಿಗಳು ಅಲ್ಲಿದ್ದರೆ, ಅವರಿಗೆ ಮನೆಗಳನ್ನು ನೀಡಲಾಗುತ್ತದೆಯೇ? ಅವರನ್ನು ಬಂಧಿಸಿ ಗಡಿಯಲ್ಲಿ ಬಿಡಲಾಗುತ್ತದೆ. ನಾವು ಅವರ ರಾಯಭಾರ ಕಚೇರಿಗೆ ಮಾಹಿತಿ ನೀಡಿ ಗಡೀಪಾರು ಮಾಡುತ್ತೇವೆ ಎಂದು ಪರಮೇಶ್ವರ್ ಹೇಳಿದರು.

ಅಕ್ರಮ ಬಾಂಗ್ಲಾದೇಶಿ ವಲಸಿಗರು ಯಾವುದೇ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರೆ ಅವರನ್ನು ಬಂಧಿಸಿ ಜೈಲಿಗೆ ಹಾಕಲಾಗುತ್ತದೆ. ವಿಪಕ್ಷ ನಾಯಕ ಅಶೋಕ ಈ ಹಿಂದೆ ಗೃಹ ಸಚಿವರಾಗಿದ್ದರು. ಅವರಿಗೆ ಇದೆಲ್ಲವೂ ಗೊತ್ತಿದೆ. ಆದರೆ ಅವರು ರಾಜಕೀಯ ಕಾರಣಗಳಿಗಾಗಿ ಮಾತನಾಡುತ್ತಿದ್ದಾರೆ ಎಂದು ಪರಮೇಶ್ವರ್ ಟೀಕಿಸಿದರು.

ಜೈಲುಗಳಲ್ಲಿನ ಅಕ್ರಮ ಚಟುವಟಿಕೆಗಳ ಮಾತನಾಡಿದ ಸಚಿವರು, ಕೆಲವರು ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಹಳೆಯ ಪುಟ 2ಕ್ಕೆ

## ಕೋಗಿಲು ಪೌರತ್ವ: ಎನ್‌ಐಎ ತನಿಖೆ ನಡೆಸಿ

### ಬಾಂಗ್ಲಾ ವಲಸಿಗರ ಸ್ಲೀಪರ್ ಸೆಲ್ ಕೇಂದ್ರವಾಗುವ ಅಪಾಯ: ಆರ್.ಅಶೋಕ್

**ಬೆಂಗಳೂರು:** ಕೋಗಿಲು ಕ್ರಾಸ್ ಫಕೀರ್ ಬಡಾವಣೆ ಕ್ರಮೇಣ ಸ್ಲೀಪರ್ ಸೆಲ್‌ಗಳ ಕೇಂದ್ರವಾಗುವ ಅಪಾಯವಿದೆ. ಇಲ್ಲಿನ ಅಕ್ರಮ ನಿವಾಸಿಗಳ ಪೌರತ್ವ ಪರಿಶೀಲನೆಗಾಗಿ ಎನ್‌ಐಎ ತನಿಖೆಗೆ ನೀಡಬೇಕು. ಆನಂತರ ಅವರಿಗೆ ವಸತಿ ನೀಡಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು.



ಕೋಗಿಲು ಕ್ರಾಸ್‌ನಲ್ಲಿ ಒತ್ತುವರಿ ತೆರವು ಮಾಡಿದ ವಿವಾದಿತ ಸ್ಥಳಕ್ಕೆ ಪ್ರತಿಪಕ್ಷ ನಾಯಕ ಆರ್.ಅಶೋಕ ಅವರು ಬುಧವಾರ ಬಿಜೆಪಿ ಮುಖಂಡರೊಂದಿಗೆ ಭೇಟಿ ನೀಡಿ ಪರಿಶೀಲಿಸಿದುರ. ಸ್ಥಳದಲ್ಲಿದ್ದ ನಿವಾಸಿಗಳ ಜೊತೆ ಮಾತನಾಡಿದ ಅವರು, ಗುರುತಿನ ಚೀಟಿ ಹಾಗೂ ಇತರೆ ದಾಖಲೆಗಳನ್ನು ಕೇಳಿ ಪರಿಶೀಲಿಸಿದರು.

ಇಲ್ಲಿ ಎಷ್ಟು ವರ್ಷಗಳಿಂದ ವಾಸಿಸುತ್ತಿದ್ದೀರಿ, ಕರೆತಂದವರು ಯಾರು, ನಿವೇಶನ ಮಂಜೂರು ಮಾಡಲಾಗಿದೆಯೇ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಹಿಳೆ, ಕಳೆದ 25 ವರ್ಷಗಳಿಂದ ಇಲ್ಲಿ ವಾಸವಿದ್ದೇವೆ ಎಂದು ತಿಳಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಪಕ್ಷ ನಾಯಕ ಆರ್.ಅಶೋಕ, ಗೂಗಲ್ ನಕ್ಷೆಯಲ್ಲಿ 1 ವರ್ಷದ ಹಿಂದೆ ಮನೆಗಳು ಇರಲಿಲ್ಲ. ಯಾರ ಬಳಿಯೂ ಗುರುತಿನ ಚೀಟಿ ಇಲ್ಲ ಎಂದು ಆರೋಪಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವರಿಗೆ ಮನೆ ಕಟ್ಟಿಕೊಡುವುದೇ ಮಾನದಂಡವಾದರೆ ಇನ್ನು ಮುಂದೆ ಸರ್ಕಾರ ಯಾವ ಮುಖ ಇಟ್ಟುಕೊಂಡು ಒತ್ತುವರಿ ತೆರವು ಮಾಡಲಿದೆ. ಬೆಂಗಳೂರಿನಲ್ಲಿ 40 ಕಡೆ 150–200 ಎಕರೆ ಒತ್ತುವರಿ ತೆರವು ಮಾಡಲಾಗಿದೆ. ಇವರೆಲ್ಲರಿಗೂ ಮನೆ ನಿರ್ಮಿಸಿಕೊಡಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಮೊದಲು ಇಲ್ಲಿನ ಜನರ ಪೌರತ್ವ ಪರಿಶೀಲಿಸಬೇಕು. ಜೊತೆಗೆ ಎನ್‌ಐಎ ತನಿಖೆಗೆ ನೀಡಬೇಕು. ಅಧಿಕಾರಿಗಳ ಮೇಲೆ ಒತ್ತಡ ಹಾಕದೆ ಈ ಕೆಲಸ ಮಾಡಬೇಕು. ನಕಲಿ ದಾಖಲೆ ಸೃಷ್ಟಿಸಿದರೆ ತನಿಖೆ ಎದುರಿಸಬೇಕಾಗುತ್ತದೆ ಎಂಬುದನ್ನು ಅಧಿಕಾರಿಗಳು ನೆನಪಲ್ಲಿಟ್ಟುಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

ಸಿಎಂ ಸಿದ್ದರಾಮಯ್ಯ ನೇತೃತ್ವದ ಟೋಪಿ ಸರ್ಕಾರ ಕನ್ನಡಿಗರಿಗೆ ಟೋಪಿ ಹಾಕಿ ಕರ್ನಾಟಕದ ವಿವಿಧೆಡೆ ಮಿನಿ ಬಾಂಗ್ಲಾದೇಶಗಳನ್ನು ಸೃಷ್ಟಿಸಿದೆ. ಕರ್ನಾಟಕ ಈಗ ಮಿನಿ ಬಾಂಗ್ಲಾಗಳ ಹಬ್ ಆಗುತ್ತಿದೆ. ನಾನು ಇಲ್ಲಿಗೆ ಭೇಟಿ ನೀಡುವ ಮುಂಚೆಯೇ ಬಿಜೆಪಿ ಮುಖಂಡರು ಇಲ್ಲಿ ಸರ್ವೆ ಮಾಡಿದ್ದಾರೆ. ನಾನು ಇಲ್ಲಿ ಮಾತನಾಡಿಸಿದಾಗ, ಒಬ್ಬ ಮಹಿಳೆ 26 ವರ್ಷದಿಂದ ಇಲ್ಲಿಯೇ ಇದ್ದೇವೆ ಎನ್ನುತ್ತಾರೆ. ಅಂದರೆ ಆಕೆ ಎರಡು ವರ್ಷದ ಮಗುವಿದ್ದಾಗ ಆಂಧ್ರಪ್ರದೇಶದಿಂದ ಹೇಗೆ ನಡೆದುಕೊಂಡು ಇಲ್ಲಿಗೆ ಬಂದಳು ಎಂಬ ಪ್ರಶ್ನೆ ಮೂಡುತ್ತದೆ. ಇದು ನಿಜಕ್ಕೂ ಸಾಧ್ಯವೇ? ಎಂದು ಪ್ರಶ್ನೆ ಮಾಡಿದರು.

ಮೊದಲ ಪುಟದಿಂದ

## 6ಕ್ಕೆ ನಾಟಿ ಕೋಳಿ ಔತಣಕೂಟ

ಮುದ್ದೆ, ಕಾಳು ಗೊಜ್ಜು, ರೈಸ್, ಪುಲಾವ್ ಮತ್ತು ಸಿಹಿತಿಂಡಿ ನೀಡಲು ತೀರ್ಮಾನಿಸಲಾಗಿದೆ. ಐದರಿಂದ ಹತ್ತು ಸಾವಿರ ಜನರು ಸೇರುವ ನಿರೀಕ್ಷೆ ಇದೆ. ಒಂದು ವರ್ಷದ ಹಿಂದೆ, ಕರ್ನಾಟಕದ ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗುವ ಬಯಕೆಯನ್ನು ಸಿದ್ದರಾಮಯ್ಯ ವ್ಯಕ್ತಪಡಿಸಿದ್ದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಿಎಂ ಹುದ್ದೆಗೇರುವ ಪ್ರಯತ್ನಗಳ ನಡುವೆಯೂ ಸಿದ್ದರಾಮಯ್ಯ ಮುಖ್ಯಮಂತ್ರಿ ಕುರ್ಚಿಯಲ್ಲಿ ಗಟ್ಟಿಯಾಗಿ ಕುಳಿತಿದ್ದಾರೆ. ಈಗ ಕರ್ನಾಟಕದ ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ನಾಯಕ ದೇವರಾಜ್ ಅರಸ್ ಅವರ ದಾಖಲೆಯನ್ನು ಮುರಿಯಲಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬಿಕ್ಕಟ್ಟು ಸೃಷ್ಟಿಯಾದ ಸಂದರ್ಭದಲ್ಲಿ ಹೈಕಮಾಂಡ್ ಸೂಚನೆಯಂತೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಉಪಾಹಾರ ಮೀಟಿಂಗ್ ನಡೆಸಿದ್ದರು. ಮೊದಲಿಗೆ ಸಿದ್ದರಾಮಯ್ಯ ನಿವಾಸದಲ್ಲಿ ಬ್ರೇಕ್ ಫಾಸ್ಟ್ ಮೀಟಿಂಗ್ ಹಮ್ಮಿಕೊಳ್ಳಲಾಗಿತ್ತು. ಬಳಿಕ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಸಿದ್ದರಾಮಯ್ಯ ಅವರಿಗಾಗಿ ನಾಟಿಕೋಳಿ ಔತಣ ಏರ್ಪಡಿಸಲಾಗಿತ್ತು.

## ನಾಯಕರ ರಾಜಕೀಯ ಹೇಳಿಕೆ

ವಿಡಿಯೋಗಳನ್ನು ಪೋಸ್ಟ್ ಮಾಡುತ್ತಿದ್ದಾರೆ. ನಾವು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ. ಘಟನೆ ಇತ್ತೀಚೆಗೆ ನಡೆದಿದ್ದರೆ, ಜೈಲು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಡಿಜಿ, ಎಲ್ಲಾ ಜೈಲುಗಳಿಗೆ ಭೇಟಿ ನೀಡುತ್ತಿದ್ದಾರೆ ಮತ್ತು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿದರು.

ಪ್ರವಾಹದಿಂದ ಹಾನಿಗೊಳಗಾದ ರಾಜ್ಯದ ಜನರಿಗೆ ಇನ್ನೂ ಸರಿಯಾದ ವಸತಿ ಕಲ್ಪಿಸಿಲ್ಲ. ಆದರೆ ರಾಜ್ಯ ಸರ್ಕಾರವು ಹೊಸ ವರ್ಷದ ಉಡುಗೊರೆಯಾಗಿ ಎರಡು ದಿನಗಳಲ್ಲಿ ಬಹುಮಹಡಿ ಕಟ್ಟಡಗಳಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರಿಗೆ ಮನೆಗಳನ್ನು ಒದಗಿಸುತ್ತಿದೆ ಎಂದು ಆರ್.ಅಶೋಕ್ ಆರೋಪಿಸಿದ್ದರು.

ಕೆಡವಲಾದ ಹೆಚ್ಚಿನ ಅಕ್ರಮ ಮನೆಗಳು ಮುಸ್ಲಿಮರಿಗೆ ಸೇರಿವೆ. ರಾಜ್ಯ ಸರ್ಕಾರ ಮುಸ್ಲಿಂ ತುಷ್ಟೀಕರಣ ರಾಜಕೀಯದಲ್ಲಿ ತೊಡಗಿದೆ ಎಂದು ಹಲವರು ಬಿಜೆಪಿ ನಾಯಕರು ಆರೋಪಿಸಿದ್ದಾರೆ.

## ಕೋಗಿಲು ಜಟಾಪಟಿ ನಂತರ ಸಿದ್ದು–ಪಿಣರಾಯಿ ಕುಶಲೋಪರಿ

ಬುಲ್ಡೋಜರ್ ಬಳಸಿ ಮುಸ್ಲಿಮರ ಮನೆಗಳನ್ನು ಧ್ವಂಸ ಮಾಡಲಾಗಿದೆ ಎಂದು ಆರೋಪಿಸಿದ್ದರು. ಈ ಮಾತಿಗೆ ಕರ್ನಾಟಕದ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದರು. ಅತಿಕ್ರಮಣ ತೆರವು ಕಾರ್ಯಾಚರಣೆ ಬಗ್ಗೆ ಸತ್ಯಗಳನ್ನು ತಿಳಿಯದೆ ವಿಜಯನ್ ಮಾತನಾಡಿದ್ದಾರೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದರು. ಚುನಾವಣಾ ಹಿನ್ನೆಲೆಯಲ್ಲಿ ಪಿಣರಾಯಿ ರಾಜಕೀಯ ಗಿಮಿಕ್ ಎಂದು ಡಿ.ಕೆ.ಶಿವಕುಮಾರ್ ಟಾಂಗ್ ಕೊಟ್ಟಿದ್ದರು.

## ಪೊಲೀಸರ ನಿರ್ಲಕ್ಷ್ಯ: ವಿಜಯಲಕ್ಷ್ಮಿ ಅಸಮಾಧಾನ

ಹಾಗಾಗಿ ಇಂದು ನಾನೇ ಖುದ್ದಾಗಿ ಹೋಗಿ ಅವರಿಗೆ ನೆನಪಿಸಬೇಕಾಯಿತು. ಈ ವಿಳಂಬವು ಯಾವುದೇ ಬಾಹ್ಯ ಒತ್ತಡ ಅಥವಾ ಪ್ರಭಾವದಿಂದಾಗಿ ಆಗಿಲ್ಲ ಎಂದು ನಾನು ಭಾವಿಸುತ್ತೇನೆ. ನ್ಯಾಯವು ಯಾರು ಭಾಗಿಯಾಗಿದ್ದಾರೆ ಎಂಬುದರ ಮೇಲೆ ಅವಲಂಬಿತವಾಗಿರಬಾರದು. ನಾನು ಇನ್ನೂ ಕಾಯುತ್ತಿದ್ದೇನೆ. ಇದನ್ನು ಸುಮ್ಮನೆ ಬಿಡುವುದಿಲ್ಲ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೇ ಪೋಸ್ಟ್ನು ಬೆಂಗಳೂರು ನಗರ ಪೊಲೀಸ್ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಟ್ಯಾಗ್ ಮಾಡಿದ್ದಾರೆ.

## ರಾಜಣ್ಣ ಬೆಂಬಲಿಗನಿಗೆ ಮಣೆ!

ಎನ್ನಲಾಗಿದೆ. ಈಗ ಶಿವಕುಮಾರ್ ಪಾಳಯದೊಂದಿಗೆ ಗುರುತಿಸಿಕೊಂಡಿದ್ದಾರೆ. ಇದು ಅವರ ಆಯ್ಕೆಗೆ ಸಹಾಯ ಮಾಡಿದೆ.

ಪ್ರಸ್ತುತ ಎಂಎಲ್‌ಸಿಗಳಾದ ಎಸ್‌ವಿ ಸಂಕನೂರ (ಪಶ್ಚಿಮ ಪದವೀಧರರು), ಚಿದಾನಂದ್ ಎಂ ಗೌಡ (ಆಗ್ನೇಯ ಪದವೀಧರರು), ಸಶಿಲ್ ಜಿ ನಮೋಶಿ (ಈಶಾನ್ಯ ಶಿಕ್ಷಕರು), ಎಲ್ಲರೂ ಬಿಜೆಪಿಯವರು ಮತ್ತು ಪುಟ್ಟಣ್ಣ – ಅವರ ಅವಧಿ ನವೆಂಬರ್ 9, 2026 ರಂದು ಕೊನೆಗೊಳ್ಳುತ್ತದೆ.

## ಲಿಂಗಾಯತರಿಗೆ ಕಾಂಗ್ರೆಸ್ ಮಣೆ

ಕ್ಷೇತ್ರದಿಂದ ಹಾಲಿ ಎಂಎಲ್‌ಸಿ ಪುಟ್ಟಣ್ಣ ಅವರ ಹೆಸರುಗಳನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನುಮೋದಿಸಿದ್ದಾರೆ. ಪುಟ್ಟಣ್ಣ ಹೊರತುಪಡಿಸಿದರೆ ಉಳಿದ ಮೂವರು ವೀರಶೈವ ಲಿಂಗಾಯತ ಸಮುದಾಯದವರು.

ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಎಸ್.ವಿ.ಸಂಕನೂರು, ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಪಕ್ಷೇತರ ಸದಸ್ಯರಾದ ಚಿದಾನಂದ ಎಂ.ಗೌಡ, ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿಯ ಶಶಿಲ್ ನಮೋಶಿ, ಬೆಂಗಳೂರು ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್ ನಿಂದ ಪುಟ್ಟಣ್ಣ ಸದಸ್ಯರಾಗಿದ್ದಾರೆ. ಚುನಾವಣೆಗೆ ಬಹಳ ಮೊದಲೇ ಕಾಂಗ್ರೆಸ್ ಅಭ್ಯರ್ಥಿಗಳನ್ನು ಘೋಷಿಸುವ ಮೂಲಕ ಕಾರ್ಯತಂತ್ರ ರೂಪಿಸಿದೆ. ಏಕೆಂದರೆ ಈ ನಾಲ್ಕು ಕ್ಷೇತ್ರಗಳಲ್ಲಿ ಎಂಎಲ್‌ಸಿ ಪುಟ್ಟಣ್ಣ ಮಾತ್ರ ಕೈ ಶಾಸಕರು. ಉಳಿದ ಮೂರು ಸ್ಥಾನಗಳನ್ನು ಬಿಜೆಪಿ ಪ್ರತಿನಿಧಿಸುತ್ತದೆ. ಮಾಜಿ ಎಂಎಲ್‌ಸಿ ಲಿಂಬಿಕಾಯಿ 2023ರಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

## ಕ್ಷೇತ್ರವಾರು ಮಾಹಿತಿ

**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳು**

## ಧರ್ಮಸ್ಥಳದ ವಿರುದ್ಧ ಷಡ್ಯಂತ್ರ: ವಕಾಲತ್ತು ಸಲ್ಲಿಕೆ

ಹಿನ್ನೆಲೆಯಲ್ಲಿ ಧರ್ಮಸ್ಥಳದ ಕ್ಷೇತ್ರದ ಪರ ವಕೀಲರು ವಕಾಲತ್ತು ಸಲ್ಲಿಸಿದ್ದಾರೆ.

# ಫುಲೆ ದಂಪತಿಗೆ ಭಾರತ ರತ್ನ ಪ್ರಶಸ್ತಿ ನೀಡಲು ಒತ್ತಾಯ

ರಾಮನಗರ: ದೇಶದಲ್ಲಿ ಶಿಕ್ಷಣ ಕ್ರಾಂತಿ ಆರಂಭಿಸಿದ ಸಾವಿತ್ರ ಬಾ ಫುಲೆ ಅವರ ಜನ್ಮ ದಿನವನ್ನು 2026ರ ಜ.7ರಂದು ಬೆಳಿಗ್ಗೆ 10.30ಕ್ಕೆ ತಮ್ಮ ನೇತೃತ್ವದ ಟ್ರಸ್ಟ್ ವತಿಯಿಂದ ಕನಕಪುರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಧಮ್ಮ ದೀವಿಗೆ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಮಲ್ಲಿಕಾರ್ಜುನ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಫುಲೆ ದಂಪತಿಗಳ ಶೈಕ್ಷಣಿಕ ಚಳವಳಿಯಿಂದಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಶೈಕ್ಷಣಿಕ ಸಂವಿಧಾನಾತ್ಮಕ ಹಕ್ಕುಗಳನ್ನು ನೀಡಲು ಸಾಧ್ಯವಾಯಿತು ಎಂದರು.




ಸಾವಿತ್ರಿ ಬಾ ಫುಲೆ ಜನ್ಮ ದಿನವನ್ನು ರಾಷ್ಟ್ರೀಯ ಶಿಕ್ಷಕಿ ದಿನವನ್ನಾಗಿ ಘೋಷಿಸಬೇಕು ಎಂದು ನಿರಂತರ ಒತ್ತಾಯಿಸಲಾಗುತ್ತಿದೆ. ಜ್ಯೋತಿ ಬಾ ಫುಲೆ ದಂಪತಿಗಳ ಮಹೋನ್ನತ ಸಾಧನೆ ಗುರುತಿಸಿ ದೇವೇಂದ್ರ ಪಡ್ನವೀಸ್ ನೇತೃತ್ವದ ಮಹಾರಾಷ್ಟ್ರ ಸರ್ಕಾರ ಹಾಗೂ ಅಲ್ಲಿನ ವಿರೋಧ ಪಕ್ಷದ ನಾಯಕರು ದಂಪತಿಗೆ ಮರಣೋತ್ತರವಾಗಿ ಭಾರತ ರತ್ನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಇದೇ ಮಾದರಿಯಲ್ಲಿ ಅಹಿಂದ ವರ್ಗದವರ ಪರ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯನವರು ಕೇಂದ್ರಕ್ಕೆ ಫುಲೆ ದಂಪತಿಗೆ ಭಾರತ ರತ್ನ ನೀಡುವಂತೆ ಶಿಫಾರಸ್ಸು ಮಾಡಬೇಕು ಎಂದರು.

ಜ.3 ಸಾವಿತ್ರಿ ಬಾ ಫುಲೆಯವರ ಜನ್ಮ ದಿನಾಚರಣೆ. ಈ ದಿನವನ್ನು ರಾಷ್ಟ್ರೀಯ ಶಿಕ್ಷಕಿಯರ ದಿನಾಚರಣೆಯಾಗಿ ಆಚರಿಸುವಂತೆ ಸುತ್ತೋಲೆ ಮೂಲಕ ಎಲ್ಲಾ ಶಾಲೆಗಳಿಗೂ ಸೂಚಿಸುವಂತೆ 2019ರಲ್ಲಿ ಶಿಕ್ಷಣ ಸಚಿವರಾಗಿದ್ದ ಸುರೇಶ್‌ಕುಮಾರ್ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದರು. ಆದರೆ ಶಾಲಾಕಾಲೇಜುಗಳು ಈ ವಿಷಯನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜ.3ರಂದು ಎಲ್ಲಾ ಶಾಲಾಕಾಲೇಜಗಳಲ್ಲೂ ಸಾವಿತ್ರಿ ಬಾ ಫುಲೆ ಜನ್ಮ ದಿನಾಚರಣೆ ಆಚರಿಸಬೇಕು. ಇದಕ್ಕೆ ಸಂಬಂಧಿಸಿದ ಡಿಡಿಪಿಐ ಹಾಗೂ ಡಿಡಿಪಿಯ ಶಾಲಾಕಾಲೇಜುಗಳಿಗೆ ಸುತ್ತೋಲೆ ಹೊರಡಿಸಬೇಕು. ಶಾಲಾಕಾಲೇಜುಗಳಲ್ಲಿ ಸಾವಿತ್ರಿ ಬಾ ಫುಲೆ ಜನ್ಮ ದಿನವನ್ನು ಆಚರಿಸದವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮಾತೆ ಸಾವಿತ್ರಿ ಬಾ ಫುಲೆ ಸಮಾರಂಭದಲ್ಲಿ ಮಹಾಬೋಧಿ ಮಹಾವಿಹಾರದ ವಿನಚಾರ್ಯ ಭಂತೆ, ಹಿರಿಯ ಪತ್ರಕರ್ತೆ ರಶ್ಮಿ, ಹೃದ್ರೋಗ ತಜ್ಞ ಡಾ.ಬಿ.ಸಿ. ಬೋರಯ್ಯ, ದೇಗುಲ ಮಠದ ಚನ್ನಬಸವ ಸ್ವಾಮೀಜಿ, ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಹಾಸನ ರಘು ಇತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ವೇದಿಕೆ ಸಮಾರಂಭಕ್ಕೂ ಮುನ್ನ ಜನಪದ ಕಲಾತಂಡಗಳ ಮೆರವಣಿಗೆ ನಡೆಯಲಿದೆ. ಮೆರವಣಿಗೆಯಲ್ಲಿ ವೀರಭಾಹು ಕುಣಿತ, ಮಹಿಷಿ ಕುಣಿತ, ಪಟ ಕುಣಿತ, ಪೂಜಾ ಕುಣಿತ, ಮಂಗಳ ವಾದ್ಯ, ಕಂಸಾಳೆ, ಪಾಳೆಗಾರ ಕುಣಿತ, ದೊಣ್ಣೆವರಸೆ, ಕತ್ತಿವರಸೆ, ದಿಗಂಬರಿ ಕುಣಿತ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಸುರೇಶ್ ಪೈಲ್ವಾನ್ ಮುತ್ತುರಾಜ್, ಅಪ್ಪಗೆರೆ ಶ್ರೀನಿವಾಸ್, ಮುತ್ತುರಾಜ್, ಅಪ್ಪಾಜಿ, ಅಶೋಕ್ ಇತರರು ಇದ್ದರು.

# ಜ.8–9 ಸರ್ಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟ



ಮೈಸೂರು: ರಾಜ್ಯ ಸರ್ಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟವನ್ನು ಜ.8 ಮತ್ತು 9ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ಹೇಳಿದರು.

ಜಿಲ್ಲಾ ಪಂಚಾಯತ್ ನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 2025– 26 ನೇ ರಾಜ್ಯ ಸರ್ಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟ ಸಂಘಟಿಸುವ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಹಾಕಿ, ಕುಸ್ತಿ, ಕಬಡ್ಡಿ, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಖೋಖೋ, ಬಾಲ್ ಬ್ಯಾಡ್ಮಿಂಟನ್, ಅಥ್ಲೆಟಿಕ್ಸ್, ಟೆನಿಕಾಯ್ಟ್ , ವೇಲ್ಸ್ ಲಿಫ್ಟಿಂಗ್,ದೇಹದಾಡ್ಯ, ಪವರ್ ಲಿಫ್ಟಿಂಗ್, ಚೆಸ್, ಥ್ರೋ ಬಾಲ್, ಈಜು, ಕೇರಂ, ಯೋಗ, ಟೆನ್ನಿಸ್ ಕ್ರೀಡೆಗಳು, ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್ ನಲ್ಲಿ ಫುಟ್ಬಾಲ್, ಷಟಲ್ ಬ್ಯಾಡ್ಮಿಟನ್, ಮಹರ್ಷಿ ವಾಲ್ಮೀಕಿ ಶಾಲೆಯಲ್ಲಿ ಟೇಬಲ್ ಟೆನ್ನಿಸ್, ಕೆ. ಜಿ ಕೊಪ್ಪಲು ಕೆನ್ನೇಗೌಡ ಕ್ರೀಡಾಂಗಣದಲ್ಲಿ ಕ್ರಿಕೆಟ್ ಸ್ಪರ್ಧೆಗಳು ನಡೆಯಲಿದೆ ಎಂದು ತಿಳಿಸಿದರು.

ಸಾಂಸ್ಕೃತಿಕ ಸ್ಪರ್ಧೆಗಳಾದ ಹಿಂದೂಸ್ತಾನಿ ಸಂಗೀತ (ಮೌಖಿಕ ಮತ್ತು ಕ್ಲಾಸಿಕಲ್). ಲಘು ಶಾಸ್ತ್ರೀಯ ಸಂಗೀತ (ಮೌಖಿಕ ಮತ್ತು ಕ್ಲಾಸಿಕಲ್), ಕರ್ನಾಟಕ ಸಂಗೀತ– ಶಾಸ್ತ್ರೀಯ ಸಂಗೀತ, ಲಘು ಶಾಸ್ತ್ರೀಯ ಸಂಗೀತ, ಜಾನಪದ ಗೀತೆ (ವೈಯಕ್ತಿಕ ಮತ್ತು ತಂಡ), ನೃತ್ಯ (ಕಥಕ್, ಮಣಿಪುರಿ, ಕುಚಿಪುಡಿ, ಒಡಿಸ್ಸಿ, ಭರತನಾಟ್ಯ, ಜಾನಪದ ನೃತ್ಯ (ತಂಡ), ವಾದ್ಯ ಸಂಗೀತ:–ಸ್ಟಿಂಗ್ ವಾದ್ಯಗಳು, ಹಿಂದೂಸ್ಥಾನಿ (ಶಾಸ್ತ್ರೀಯ ಹಾಗೂ ಲಘು ಶಾಸ್ತ್ರೀಯ), ವಿಂಡ್ ವಾದ್ಯಗಳು (ಕರ್ನಾಟಕ–ಶಾಸ್ತ್ರೀಯ ಹಾಗೂ ಲಘು ಶಾಸ್ತ್ರೀಯ), ಪರಿಕೇಷನ್ ವಾದ್ಯಗಳು (ಜನರಲ್), ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಕಿರು ನಾಟಕಗಳ ಸ್ಪರ್ಧೆಗಳು ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ತಿಳಿಸಿದರು.

ಕ್ರೀಡಾಕೂಟ ನಡೆಯುವ ಸ್ಥಳಗಳಲ್ಲಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಯನ್ನು ಮಾಡಿಕೊಳ್ಳಬೇಕು. ವೇದಿಕೆ ಕಾರ್ಯಕ್ರಮಕ್ಕೆ ತೋಟಗಾರಿಕೆ ಇಲಾಖೆಯಿಂದ ಅಲಂಕಾರಿಕ ಹೂವಿನ ಗಿಡಗಳನ್ನು ನೀಡಬೇಕು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ವತಿಯಿಂದ ಅಗತ್ಯ ಔಷಧಿಯೊಂದಿಗೆ ಆಂಬುಲೆನ್ಸ್ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಅಸೀಫ್ ಸೇರಿ ಇತರರು ಉಪಸ್ಥಿತರಿದ್ದರು.

# ಮೈಸೂರು ತಲುಪಿದ ರಥಯಾತ್ರೆ



ಮೈಸೂರು: ಉಡುಪಿಯಿಂದ ಕೊಯಮತ್ತೂರಿಗೆ ಪ್ರಯಾಣಿಸುವ ಆದಿಯೋಗಿ ರಥಯಾತ್ರೆ ಬುಧವಾರ ಮಧ್ಯಾಹ್ನ ಮೈಸೂರಿಗೆ ಆಗಮಿಸಿತು.

ಕೊಡಗಿನಿಂದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಮತ್ತು ಕೆ.ಆರ್. ನಗರ ಮೂಲಕ ಪ್ರಯಾಣಿಸಿದ ನಂತರ ಮಂಗಳವಾರ ರಾತ್ರಿ ನಗರದ ಹೊರವಲಯದಲ್ಲಿರುವ ಇಲವಾಲ ಬಂದಿಳಿದ ರಥಯಾತ್ರೆ, ಬುಧವಾರ ಬೆಳಿಗ್ಗೆ ಬಳಿಯ ವಿವೇಕಾ ನಂದ ?ರ್ಮ್ ಹೌಸ್ನಿಂದ ಹೊರಟು, ಹಿನಕಲ್, ಹುಣಸೂರು ರಸ್ತೆಯ ಐಶ್ವರ್ಯ ಪೆಟ್ರೋಲ್ ಬಂಕ್ ಮತ್ತು ಎಸ್ ಜೆಸಿಇ ಕಾಲೇಜಿನ ರಸ್ತೆಯ ಮೂಲಕ ಸರಸ್ವತಿಪುರಂ ನಲ್ಲಿರುವ ಕೃಷ್ಣಧಾಮ ತಲುಪಿತು.

ಯಾತ್ರೆಯು ಸ್ವಲ್ಪ ಸಮಯದ ವಿಶ್ರಾಂತಿ ತೆಗೆದುಕೊಂಡು, ನಂತರ ಪುನರಾರಂಭಗೊಂಡು ಸರಸ್ವತಿ ಪುರಂ ಮತ್ತು ವಿದ್ಯಾರಣ್ಯಪುರಂ ಮೂಲಕ ಹಾದು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠವನ್ನು ತಲುಪಿತು. ಜ.1ರಂದು ಬೆಳಗ್ಗೆ 8ಕ್ಕೆ ರಥಯಾತ್ರೆಯು ಸುತ್ತೂರು ಶಾಖಾ ಮಠದಿಂದ ಹೊರಟು,ಗೌರಿಶಂಕರ ನಗರ, ಅರಮನೆ ಪಂಚಗವಿಮಠ ,ಗಣಪತಿ ಸಚ್ಚಿದಾನಂದ ಆಶ್ರಮ, ಕಾರ್ಯ ಸಿದ್ಧಿ ಆಂಜನೇಯ ದೇವಸ್ಥಾನ, ರಾಮಾನುಜ ರಸ್ತೆ ಮೂಲಕ ಮಡಿವಾಳ ಸ್ವಾಮಿ ಕಡೆಗೆ ಸಾಗಲಿದೆ. ಅರಮನೆ ಕೋಟೆ ಆಂಜ ನೇಯಸ್ವಾಮಿ ದೇವಸ್ಥಾನ ಮುಖ್ಯ ರಸ್ತೆ, ಪುರಭವನ ಹಾಲ್ ದೊಡ್ಡಗಡಿಯಾರ , ದೇವರಾಜ ಮಾರುಕಟ್ಟೆ ಬಳಿಯ ಚಿಕ್ಕ ಗಡಿಯಾರ ಗೋಪುರ, ಡಿ. ದೇವ ರಾಜ್ ಅರಸ್ ರಸ್ತೆ, ಜೆಎಲ್ ಬಿರಸ್ತೆ, ಹಳೆಯ ಡಿಸಿ ಕಚೇರಿ, ಮಹಾಜನ ಸಭಾಂಗಣ, ಚಂದ್ರ ಮೌಳೇಶ್ವರ ದೇವಸ್ಥಾನ, ಗೋಕುಲಂ, ವಿಜಯನಗರ ನೀರಿನ ಟ್ಯಾಂಕ್, ಸೂರ್ಯ ಬೇಕರಿ ಮೂಲಕ ರಾತ್ರಿ 8 ಗಂಟೆಗೆ ಹೆಬ್ಬಾಳನಲ್ಲಿರುವ ಅನ್ನಪೂರ್ಣೇಶ್ವರಿ ದೇವಸ್ಥಾನ ತಲುಪಲಿದೆ.

ಜ.2ರಂದು ಆದಿಯೋಗಿ ರಥಯಾತ್ರೆ ಬೆಳಿಗ್ಗೆ 8 ಗಂಟೆಗೆ ಹೆಬ್ಬಾಳದ ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ ಹೊರಟು ಮೇಟಗಳ್ಳಿ ಮತ್ತು ಕೆಆರ್‌ಎಸ್ ರಸ್ತೆ ಮೂಲಕ ಶ್ರೀರಂಗಪಟ್ಟಣದ ಕಡೆಗೆ ಪ್ರಯಾಣಿಸಲಿದ್ದು, ಅಲ್ಲಿಂದ ಮುಂದೆ ಸಾಗಲಿದೆ. ಶ್ರೀರಂಗಪಟ್ಟಣಕ್ಕೆ ಹೊರಟು, ಅಲ್ಲಿಂದ ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಬೆಂಗಳೂರು, ಚಿಕ್ಕಬಳ್ಳಾಪುರ ಮತ್ತು ಹೊಸೂರು ಮತ್ತು ತಮಿಳುನಾಡಿನ ಇತರ ಪಟ್ಟಣಗಳಿಗೆ ಯಾತ್ರೆ ಪ್ರಯಾಣಿಸಿ, ಕೊಯಮತ್ತೂರು ತಲುಪಲಿದೆ. ಕೆಲವು ದಿನಗಳ ಹಿಂದೆ ಉಡುಪಿಯಿಂದ ಪ್ರಾರಂಭವಾದ ರಥಯಾತ್ರೆಯು ದಕ್ಷಿಣ ಕರ್ನಾಟಕ ಮತ್ತು ಉತ್ತರ ತಮಿಳುನಾಡಿನ ಅನೇಕ ಪಟ್ಟಣಗಳು ಮತ್ತು ನಗರಗಳನ್ನು ಕ್ರಮಿಸಿ, ಸಾವಿರ ಕಿಲೋಮೀಟರ್‌ಗಳಿಗೂ ಹೆಚ್ಚು ದೂರ ಪ್ರಯಾಣಿಸಿ, ಫೆ. 13 ರಂದು ಮಹಾಶಿವರಾತ್ರಿಯಂದು, ತಮಿಳುನಾಡಿನ ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ರಥಯಾತ್ರೆಯು ಕೊನೆಗೊಳ್ಳಲಿದೆ.

## ರಸ್ತೆ ಅಭಿವೃದ್ಧಿಗೆ ಆಗ್ರಹಿಸಿ ಸಹಿ ಸಂಗ್ರಹ

ಮೈಸೂರು: ನಗರದ ಮೈಸೂರು ಪೂರ್ವ ವಲಯದ ರಸ್ತೆಗಳ ಅಭಿವೃದ್ಧಿಗೆ ಆಗ್ರಹಿಸಿ ಸ್ಥಳೀಯರು ಸಹಿ ಸಂಗ್ರಹದ ಮೂಲಕ ವಿನೂತನ ಪ್ರತಿಭಟಿಸಿದರು.

ಈ ಸಂಬಂಧ ನಗರ ಬಿಜೆಪಿ ಯುವ ಮೋರ್ಚಾ ಕಾರ್ಯದರ್ಶಿ ಡಿ.ಲೋಹಿತ್ ಮಾತನಾಡಿ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ, ಜೆ ಎಸ್ ಎಸ್ ಬಡಾವಣೆ ಎರಡನೇ ಹಂತ, ಶ್ರೀನಿವಾಸ್ ಐಪಿಎಸ್ ನಗರ,ವಸಂತ ನಗರ, ನೇತಾಜಿ ನಗರ,ಕೊಳ್ಳೇಗಾಲ ಬಡಾವಣೆ,ಕೆ ಎಸ್ ಆರ್ ಟಿ ಸಿ ಬಡಾವಣೆ, ಗುರು ಮಲ್ಲೇಶ್ವರ ಬಡಾವಣೆ, ಸಖದಾಯಿ, ಸಹೃದಯ, ಇನ್ನಿತರ ಮುಂತಾದ ಬಡಾವಣೆಗಳಿಗೆ ಮನೆ ಮನೆಗಳ ಮುಂದೆ ರಸ್ತೆಗಳೇ ಇಲ್ಲದೆ ವಯಸ್ಸಾದವರು,ಶಾಲ ಮಕ್ಕಳು ಓಡಾಡಲು ತೀವ್ರ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಕೋರಲಾಗುವುದು ಎಂದರು.



## ಹಿರಿಯ ಪತ್ರಕರ್ತ ಶಿವಶಂಕರಸ್ವಾಮಿ ನಿಧನ

ಮೈಸೂರು: ಹಿರಿಯ ಪತ್ರಕರ್ತ, ವಾರದ ಮಿತ್ರ ಪತ್ರಿಕೆ ಸಂಪಾದಕ ಶಿವಶಂಕರಸ್ವಾಮಿ (68) ಅವರು ಬುಧವಾರ ಅವರ ನಿವಾಸದಲ್ಲಿ ಹಠಾತ್ ನಿಧನರಾಗಿದ್ದಾರೆ.



ಮೃತರು ಪತ್ನಿ ಇಬ್ಬರು ಮಕ್ಕಳು, ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತ ದೇಹವನ್ನು ಅವರ ವಿದ್ಯಾರಣ್ಯಪುರಂ ನಿವಾಸದಲ್ಲಿ ಇರಿಸಲಾಗಿದೆ. ಗುರುವಾರ ಅಂತ್ಯಕ್ರಿಯೆ ನಡೆಯಲಿದೆ.

ಮೊದಲ ಪುಟದಿಂದ

## ಒ.ಸಿ ವಿನಾಯಿತಿ

ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಿರ್ದೇಶಕರು ಬುಧವಾರ ಆದೇಶ ಹೊರಡಿಸಿದ್ದಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ನಿಯಂತ್ರಣ) ಮಾದರಿ ಉಪ ವಿಧಿಗಳು 2015ಕ್ಕೆ ತಿದ್ದುಪಡಿ ತರಲಾಗಿದೆ.

ಮೊದಲ ಪುಟದಿಂದ

## ಮೋಜು, ಮಸ್ತಿಗೆ ನಿಷೇಧ

ಮಾಡಿ ಊಟ ಮಾಡುವುದು, ಮದ್ಯ ಸೇವನೆಗೆ ನಿಷೇಧ ಹಾಕಲಾಗಿದೆ. ಬಲಮುರಿ, ಎಡಮುರಿ, ವೇಣುಗೋಪಾಲಸ್ವಾಮಿ ದೇವಸ್ಥಾನ, ಮುತ್ತತ್ತಿ, ಕಾವೇರಿ ಹಿನ್ನೀರು ಸೇರಿದಂತೆ ಮೊದಲಾದ ಕಡೆ ಜನರು ನದಿಗೆ ಇಳಿಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಈ ಎಲ್ಲ ಸ್ಥಳಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಮುಂಜಾಗ್ರತಾ ಕ್ರಮವಹಿಸಿದ್ದಾರೆ.

## ಟೈಟ್ ಆದವರಿಗಷ್ಟೇ ಡ್ರಾಪ್!

ಎಂದು ತಿಳಿಸಿದರು. ಡ್ರಿಂಕ್ ಆಂಡ್ ಡ್ರೈವ್ ಮಾಡಿದವರಿಗೆ ನಿಯಮದಂತೆ ಕೇಸ್ ಬೀಳಲಿದೆ. 160 ಸ್ಪಾಟ್ ಐಡೆಂಟಿಫೈ ಮಾಡಿದ್ದಾರೆ. ಒಂದು ಹಂತದವರೆಗೆ ಬಿಡುತ್ತೇವೆ. ಹಂತ ಮೀರಿದಾಗ ಡ್ರೈವ್ ಮಾಡೋದು ಕಷ್ಟವಾಗುತ್ತದೆ. ಆಗ ಅಪಘಾತವಾಗಿ ತಾವು ಸಾಯ್ತಾರೆ, ಬೇರೆಯವರನ್ನು ಸಾಯಿಸುತ್ತಾರೆ. ಎರಡು ದಿನ ನಾವು ಕಂಟ್ರೋಲ್ ಮಾಡಿದರೆ ಕೆಲವರ ಪ್ರಾಣ ಉಳಿಯುತ್ತವೆ ಎಂದು ಹೇಳಿದರು.

ಹೆಚ್ಚು ಜನರು ಸೇರಿದಾಗ ಟೆರೆರಿಸ್ಟ್ ಆಯಾಮದಲ್ಲಿ ನೋಡಬೇಕಾಗುತ್ತೆ. ಎಲ್ಲ ಆಯಾಮದಲ್ಲಿ ಪೊಲೀಸರು ಕ್ರಮ ತೆಗೆದುಕೊಳ್ಳಲಿದ್ದಾರೆ. ಪೊಲೀಸ್‌ರಿಗೆ ಬಾಡಿ ಕ್ಯಾಮರಾ ಹಾಕಲು ಹೇಳಿದ್ದೇವೆ. ಡೈರೆಕ್ಟ್ ಆಗಿ ಕಮಾಂಡ್ ಸೆಂಟರ್‌ಗೆ ಕನೆಕ್ಟ್ ಆಗಿರುತ್ತದೆ. ಹೆಚ್ಚಿನ ಪೋರ್ಸ್ ಬೇಕಾದರೆ ಆ ಸ್ಥಳಕ್ಕೆ ಬರುತ್ತದೆ ಎಂದು ಮಾಹಿತಿ ನೀಡಿದರು. ಬಾರ್, ಪಬ್ ಓಪನ್ ಇಡಲು ಸಮಯ ನಿಗದಿ ಮಾಡಲಾಗಿದೆ. ಟೈಮಿಂಗ್ ಪ್ರಕಾರ ಬಾರ್ ಮುಚ್ಚಬೇಕು. ರಾತ್ರಿ ಒಂದು ಗಂಟೆಗೆ ಎಲ್ಲ ಬಾರ್‌ಗಳನ್ನು ಮುಚ್ಚಬೇಕು. ಮುಚ್ಚದಿದ್ರೆ ಕೇಸ್ ಹಾಕಲಾಗುವುದು ಎಂದು ಪರಮೇಶ್ವರ್ ಎಚ್ಚರಿಕೆ ನೀಡಿದರು.

# 52ಮಂದಿಗೂ ಉಚಿತ ಲ್ಯಾಪ್‌ಟಾಪ್ ವಿತರಿಸಿದ ಶಾಸಕ




ಮೈಸೂರು: ಶಾಸಕ ಕೆ.ಹರೀಶ್ ಗೌಡ ನೇತೃತ್ವದಲ್ಲಿ ಅವರ ಪೋಷಕರ ಹೆಸರಿನಲ್ಲಿ ಸ್ಥಾಪಿಸಿದ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಕಳೆದ ತಿಂಗಳು 350 ವಿದ್ಯಾರ್ಥಿಗಳಿಗೆ ನಗರದ ಕಲಾಮಂದಿರದಲ್ಲಿ ಲ್ಯಾಪ್ ಟ್ಯಾಪ್ ವಿತರಿಸಲಾಗಿತ್ತು. ಈ ವಿಚಾರ ತಿಳಿದು ಮತ್ತೆ ಅರ್ಜಿ ಸಲ್ಲಿಸಿದ್ದ ಸುಮಾರು 52 ವಿದ್ಯಾರ್ಥಿಗಳಿಗೆ ಶಾಸಕರ ಜಲದರ್ಶಿನಿ ಕಚೇರಿಯಲ್ಲಿ ಇಂದು ಶಾಸಕ ಕೆ. ಹರೀಶ್ ಗೌಡ ಲ್ಯಾಪ್ ಟಾಪ್ ವಿತರಿಸಿದರು. ಕಾರ್ಯಕ್ರಮದಲ್ಲಿ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಚೇಗೌಡನ ಕೊಪ್ಪಲು ರವಿ, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ಜ್ಞಾನಪ್ರಕಾಶ ಸ್ವಾಮೀಜಿ

# ನಮ್ಮ ಮೇಲಿನ ಆರೋಪ ನಿರಾಧಾರ

ಮೈಸೂರು : ಶಿವಲಿಂಗಸ್ವಾಮಿ ಎಂಬವರು ತಮ್ಮ ಮೇಲೆ ಮಾಡಿರುವ ಎಲ್ಲ ಆರೋಪಗಳು ಸುಳ್ಳು, ಅವರ ಮಾತಿಗೆ ಯಾವುದೇ ಆಧಾರವಿಲ್ಲ, ಮಠದ ಹೆಸರಿಗೆ ಕಳಂಕ ತರಲು ಈ ರೀತಿ ವರ್ತಿಸುತ್ತಿದ್ದು, ಶ್ರೀಮಠದ ಆಡಳಿತ ಮಂಡಳಿ ಮತ್ತು ಭಕ್ತರ ಜತೆ ಚರ್ಚಿಸಿ ಕಾನೂನು ಕ್ರಮಕ್ಕೆ ಮುಂದಾಗುತ್ತೇವೆ ಎಂದು ಮೈಸೂರು ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಶಿವಲಿಂಗಸ್ವಾಮಿ ಕಳೆದ 30 ವರ್ಷಗಳಿಂದ ಈ ರೀತಿ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಅವರ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಕೋರ್ಟ್ ಆದೇಶಗಳಿಲ್ಲ, 1994–95ರಲ್ಲಿ ಶ್ರೀಮಠಕ್ಕೆ ಸೇರಿದ ಶಿಕ್ಷಣ ಸಂಸ್ಥೆಯಲ್ಲಿ ಅವ್ಯವಹಾರ ನಡೆಸಿದ ಕಾರಣ ಅವರನ್ನು ವಜಾ ಮಾಡಲಾಯಿತು. ಇದರಿಂದ ಹತಾಶರಾಗಿ ಈ ರೀತಿ ಆರೋಪಗಳನ್ನು ಮಾಡುತ್ತಿದ್ದಾರೆ ಎಂದರು. ಒಂದು ವರ್ಷದ ಹಿಂದೆ ತಮ್ಮನ್ನು ಕಲಬುರುಗಿ ಜಿಲ್ಲೆ, ಸೇಡಂ ತಾಲ್ಲೂಕಿನ ಕೂಡ್ಲಾ ಗ್ರಾಮದಲ್ಲಿರುವ ಉರಿಲಿಂಗಿಪೆದ್ದಿ ಮಠದ ಪೀಠಾಧಿಪತಿಯಾಗಿ ಆಯ್ಕೆ ಮಾಡ ಲಾಗಿದೆ. ತಾವು ಅಧಿಕಾರವನ್ನೂ ಸ್ವೀಕರಿಸಿದ್ದು, ಇದಕ್ಕೂ ಮುನ್ನ ಮೈಸೂರು ಶಾಖಾ ಮಠದ ಉಸ್ತುವಾರಿಯಾಗಿದ್ದೆ. ಮೂಲ ಮಠಕ್ಕೆ ಹಲವು ಶಾಖಾ ಮಠಗಳು ಇವೆ, ಅನೇಕ ಶಿಕ್ಷಣ ಸಂಸ್ಥೆಗಳು ಮಠದ ಆಡಳಿತದಲ್ಲಿವೆ. ಮಠದ ಅಭಿವೃದ್ಧಿ ಸಹಿಸದ ಶಿವಲಿಂಗ ಸ್ವಾಮಿ ಈ ರೀತಿ ಅಪಪ್ರಚಾರಕ್ಕೆ ಮುಂದಾಗಿದ್ದಾರೆ ಎಂದು ಹೇಳಿದರು. ಗೋಷ್ಠಿಯಲ್ಲಿ ಬಸವ ನಾಗಸೇನ ಶರಣರು, ಸಿದ್ದರಾಮ ಸ್ವಾಮೀಜಿ, ಭಾಸ್ಕರ್, ಸೋಮಯ್ಯ ಮಲೆಯೂರು ಇತರರು ಇದ್ದರು.



## ಸ್ವಾಮೀಜಿ ವಿರುದ್ಧ ಆಕ್ರೋಶ

ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಅವರು ಪತ್ರಿಕಾ ಗೋಷ್ಠಿ ನಡೆಸುತ್ತಿದ್ದ ಸಂದರ್ಭದಲ್ಲಿ ದಲಿತ ಮುಖಂಡ ಚೋರನಹಳ್ಳಿ ಶಿವಣ್ಣ ನೇತೃತ್ವದಲ್ಲಿ ಪತ್ರಿಕಾ ಭವನದ ಎದುರು ಜಮಾಯಿಸಿದ ಕೆಲವು ಮಹಿಳೆಯರು ಮತ್ತು ಸಾರ್ವಜನಿಕರು ಮೃತ ವ್ಯಕ್ತಿಯೊಬ್ಬರ ಭಾವಚಿತ್ರವನ್ನು ಪ್ರದರ್ಶಿಸುತ್ತಾ ಸ್ವಾಮೀಜಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು. ಈ ಸಂದರ್ಭದಲ್ಲಿ ಕೆಲವು ಮುಖಂಡರು ಆಕ್ರೋಶಭರಿತ ವ್ಯಕ್ತಿಗಳನ್ನು ಸಮಾಧಾನಪಡಿಸಿ ಮಾತುಕತೆ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳುವಂತೆ ತಿಳಿವಳಿಕೆ ಹೇಳಿದರು.

# ಮಾನ್ಯಳ ಹತ್ಯೆ ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯ

ಚಾಮರಾಜನಗರ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಇನಾಂ ವೀರಪುರ ಗ್ರಾಮದಲ್ಲಿ ತುಂಬು ಗರ್ಭಿಣಿ ಮಾನ್ಯ ವಿವೇಕಾನಂದ ದೊಡ್ಡಮನಿ ಹತ್ಯೆ ಹಾಗೂ ಆಕೆಯ ಗಂಡ, ಕುಟುಂಬಸ್ಥರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ಕೊಲೆಗಡಕರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.


ಮಾನ್ಯ ದಲಿತ ಸಮುದಾಯಕ್ಕೆ ಸೇರಿದ ವಿವೇಕಾನಂದ ದೊಡ್ಡಮನಿ ಎಂಬ ಹುಡುಗನನ್ನು ಪ್ರೀತಿಸಿ ವಿವಾಹವಾಗಿದ್ದು. ತುಂಬಾ ಚೆನ್ನಾಗಿಯೇ ಜೀವನ ಮಾಡುತ್ತಿದ್ದರು. ಆಕೆಯು 6 ತಿಂಗಳ ಗರ್ಭಿಣಿ ಯಾಗಿದ್ದಳು ಆಕೆಯ ತಂದೆಯ ಬರ್ಬರವಾಗಿ ಕೊಲೆ ಮಾಡಿ ಆಕೆಯ ಗಂಡ, ಕುಟುಂಬದವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವುದು ಇಡೀ ನಾಗರಿಕ ಸಮಾಜ ತಲೆತಗ್ಗಿಸುವ ವಿಚಾರವಾಗಿದೆ ಇದೊಂದು ಮರ್ಯಾದೆ ಹತ್ಯೆಯಾಗಿದೆ.



ಇದನ್ನು ನಮ್ಮ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ.

ವಿವೇಕನಂದ ದೊಡ್ಡಮನಿ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ತಕ್ಷಣ ನೀಡಬೇಕು.ವಿವೇಕನಂದ ಮತ್ತು ಅವರ ಕುಟುಂಬಕ್ಕೆ ಸೂಕ್ತ ರಕ್ಷಣೆ, ಸ್ವಾತಂತ್ರ್ಯ ಮತ್ತು ಘನತೆಯಿಂದ ಬದುಕುವ ಹಕ್ಕನ್ನು ಖಾತ್ರಿ ಪಡಿಸಲು ರಕ್ಷಣೆ ಒದಗಿಸಬೇಕು, ವಿವೇಕನಂದರವರಿಗೆ ಸರ್ಕಾರಿ ನೌಕರಿ ಒದಗಿಸಬೇಕು.

ಸರ್ಕಾರವು ನ್ಯಾಯಾಯುತವಾದ ಪ್ರಮಾಣಿಕವಾದ ಮತ್ತು ನಿಷ್ಪಕ್ಷಪಾತವಾಗಿ ತನಿಖೆಯನ್ನು ನಡೆಸಬೇಕು. ಸಮಸ್ತ ಜನರಿಗೂ ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತ್ವದ ಸಂವಿಧಾನಿಕ ಭರವಸೆಯನ್ನು ಖಾತ್ರಿಪಡಿಸುವ ಸಲುವಾಗಿ ಸರ್ಕಾರವು ಸಂಪೂರ್ಣ ಜಾತಿ ವಿನಾಶದ ಬಗ್ಗೆ ಜಾಗೃತಿ ಮತ್ತು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಿದೆ. ಈ ಸಂದರ್ಭದಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಸವನಪುರ ರಾಜ ಶೇಖರ್, ಆರುಂಧತಿ ಕ್ರೆಡಿಟ್ ಕೋಅಪರೇಟಿವ್ ಸೊಸೈಟಿ ಅಧ್ಯಕ್ಷ ಜವರಯ್ಯ ಅರಕಲವಾಡಿ, ಕಾರ್ಯದರ್ಶಿ ರಾಮಸಮುದ್ರ ಶಿವಕುಮಾರ್, ಮುಖಂಡರಾದ ಹೆಚ್. ಹೆಚ್.ನಾಗರಾಜು, ಮೂರ್ತಿ ಮೂಡಹಳ್ಳಿ, ಗುರುಲಿಂಗಯ್ಯ, ದ್ವಾರ್ಕಿ ಬಸವರಾಜು, ಸಿದ್ದಯ್ಯ ಹಸಗೂಲಿ, ಎಲ್‌ಐಸಿ ಸಿದ್ದರಾಜು, ಚಾಮರಾಜು, ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಎಂ.ಶಿವಕುಮಾರ್, ಸಿ. ಚನ್ನಬಸವಯ್ಯ, ಲಿಂಗರಾಜು, ದೇವರಾಜು, ಯಳಂದೂರು ತಾಲೂಕು ಬಾಬುಜಗಜೀವನರಾಂ ಸಂಘದ ಕೆಸ್ತೂರುಮರಪ್ಪ, ಸುಂದ್ರ, ರಂಗಸ್ವಾಮಿ, ಸ್ವಾಮಿ, ನಾಗಮಲ್ಲು, ಮಹೇಶ್, ಮರಿಸ್ವಾಮಿ, ಶಿವಕುಮಾರ್ ರಾಮಸಮುದ್ರ, ಶಿವಣ್ಣ, ಜಯರಾಜ್, ರಾಜಶೇಖರ್, ಕೆಚ್ಚೇಪುರ ಸಿದ್ದಯ್ಯ, ಶಂಕರ್, ಸುರೇಶ್ ಇತರರು ಹಾಜರಿದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ !

ದಣಿಕೆಯಾಯಿತೆ ದೊರೆಯೇ,
ಧರೆಯನಾಳುತ ಭರದಿ,
ಕಲಿಯುಗದಲಿ ಕೃಷ್ಣ ಕೃಪೆಯ ತೋರುತಲಿ!

ಮಂದಹಾಸವ ಬೀರಿ ತರುಲತೆಗಳು,
ಸೂರ್ಯ, ಚಂದ್ರರ ಕಿರಣದಲಿ!
ಕರುಗಳು ಕರೆಯುವವು ನಿನ್ನ ಪ್ರೀತಿಯಲಿ
ತನ್ನ ದೊರೆ ಮುರಲಿಗೆ ತಲೆದೂಗುತಿಹವು!

ತೇತ್ರಾ ಯುಗದಲಿ ರಾಮನಾಗಿ ಬಂದೆ,
ಕಲಿಯುಗದಲಿ ನೀ ನಿಂದೆ ಕೃಷ್ಣನಾಗಿ !
ಹೇಮಗಿರೀಶನಾಗಿ ಹಯವದನ ಪ್ರಿಯನಾಗಿ
ಪರಿಮಳಾರ್ಯರಿಗೆ ನೀ ಒಲಿದು ಬಂದೆ!

# ಬೀಡಿ ಕಾಲೋನಿ: ಶಾದಿ ಮಹಲ್, ಆಸ್ಪತ್ರೆ, ಶಾಲೆ ನಿರ್ಮಾಣಕ್ಕೆ ನಗರಸಭೆ ಅನುಮೋದನೆ ಇದೆ

## ಸೈಯದ್ ಜಿಯಾವುಲ್ಲಾ ಹೇಳಿಕೆ । ಬೀಡಿ ಕಾಲೋನಿ ನಗರಸಭೆ ವ್ಯಾಪ್ತಿಯಲ್ಲಿ ಇಲ್ಲ ಎನ್ನುವುದು ಸರಿಯಲ್ಲ । ಹಕ್ಕು ಪತ್ರ ಸಿಗುವವರೆಗೂ ಹೋರಾಟ ಅನಿವಾರ್ಯ

ರಾಮನಗರ: ಬೀಡಿ ಕಾರ್ಮಿಕರ ಕಾಲೋನಿಯಲ್ಲಿರುವ ಸರ್ಕಾರಿ ಶಾಲೆ, ಶಾದಿ ಮಹಲ್, ಆಸ್ಪತ್ರೆಗಳ ನಿರ್ಮಾಣ ಯೋಜನೆಗಳಿಗೆ ನಗರಸಭೆಯೇ ಅನುಮೋದನೆ ನೀಡಿದೆ, ಆದರೂ ಬೀಡಿ ಕಾಲೋನಿ ತಮ್ಮ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ನಗರಸಭಾಧ್ಯಕ್ಷರು ಹೇಳುವುದು ಸರಿಯಲ್ಲ ಎಂದು ಬೀಡಿ ಕಾರ್ಮಿಕರ ವಿವಿದೋದ್ದೇಶ ಸಹಕಾರ ಸಂಘ ನಿಯಮಿತದ ಅಧ್ಯಕ್ಷ ಸೈಯದ್ ಜಿಯಾವುಲ್ಲಾ ಪ್ರತಿಕ್ರಿಯಿಸಿದ್ದಾರೆ.

ಬೀಡಿ ಕಾಲೋನಿಯ ಆಸ್ತಿಗಳಿಗೆ ಖಾತೆ ಮಾಡಿಕೊಡುವ ವಿಚಾರದಲ್ಲಿ ನಗರಸಭಾಧ್ಯಕ್ಷರು ನೀಡಿರುವ ಹೇಳಿಕೆಗಳಿಗೆ ಅವರು ಪ್ರತಿಕ್ರಿಯಿಸಿದರು. ಬೀಡಿ ಕಾರ್ಮಿಕರಿಗೆ ಅಸಲಿ ಹಕ್ಕುಪತ್ರ ಸಿಗುವವರೆಗೂ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದರು.

### ತಮ್ಮ ವ್ಯಾಪ್ತಿಯಲ್ಲಿ ಇಲ್ಲ ಅಂತಾರೆ ಹುಣಸನಹಳ್ಳೀ ಗ್ರಾಮ ಪಂಚಾಯ್ತಿಯವರು

ಬೀಡಿ ಕಾರ್ಮಿಕರ ಕಾಲೋನಿ ಇರುವ ಶಿಡ್ಲಕಲ್ಲು ಸರ್ವೆ ನಂಬರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಇಲ್ಲ ಎಂದು ಹುಣಸನಹಳ್ಳಿ ಗ್ರಾಮಪಂಚಾಯ್ತಿಯವರು ಹಿಂಬರಹ ಕೊಟ್ಟಿದ್ದಾರೆ. ಇನ್ನೊಂದೆಡೆ ರಾಮನಗರ ನಗರಸಭೆ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದಿದ್ದಾರೆ. ಬೀಡಿ ಕಾರ್ಮಿಕರು ತ್ರಿಶಂಕು ಸ್ಥಿತಿಗೆ ಸಿಲುಕಲು ನಗರಸಭೆಯಲ್ಲಿ ಆಡಳಿತ ನಡೆಸುತ್ತಿರುವವರು ಕಾರಣವೇ ಹೊರತು ಮತ್ಯಾರು ಅಲ್ಲ ಎಂದು ಟೀಕಾ ಪ್ರಹಾರ ನಡೆಸಿದರು.

### ರಾಜಕರಣದ ಅನುಭವಕ್ಕೆ ವಯಸ್ಸಾಗಿಲ್ಲ!

ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿರವರು ನನಗೆ



ವಯಸ್ಸಾಗಿದೆ, ಜನರ ದಿಕ್ಕು ತಪ್ಪಿಸುವುದು ಬೇಡ ಎಂದು ಹೇಳಿದ್ದಾರೆ. ಬಡ ಜನರಿಗೆ ಹಕ್ಕು ಕೊಡಿಸಲು ಅಷ್ಟೆ ರಸ್ತೆಗಿಳಿಯುವುದಾಗಿ ಹೇಳಿದ್ದೇನೆಯೇ ಹೊರತು ಪ್ರಚಾರದ ಗೀಳಿನಿಂದಲ್ಲ. ನನಗೆ ವಯಸ್ಸಾಗಿದೆ ನಿಜ. ಆದರೆ, ಬಡ ಜನರ ಕಷ್ಟಕ್ಕೆ ಸ್ಪಂದಿಸುವ ತುಡಿತಕ್ಕೆ ಮತ್ತು ರಾಜಕಾರಣದ ಅನುಭವಕ್ಕೆ ಇನ್ನೂ ವಯಸ್ಸಾಗಿಲ್ಲ ಎಂದರು.

ರಾಜೀವ್ ಗಾಂಧಿ ವಸತಿ ನಿಗಮವು 489 ಹಕ್ಕುಪತ್ರಗಳನ್ನು ನಗರಸಭೆಗೆ ಹಸ್ತಾಂತರ ಮಾಡಿತ್ತು. ಇದರಲ್ಲಿ 35 ಫಲಾನುಭವಿಗಳು 40 ಸಾವಿರ ಸಾಲ ಮರುಪಾವತಿಸಿದ ಕಾರಣ ಹಕ್ಕುಪತ್ರವನ್ನು ನೇರವಾಗಿ ವಿತರಿಸಲಾಗಿದೆ. ಉಳಿದ 454 ಫಲಾನುಭವಿಗಳು ಸಾಲ ಮರುಪಾವತಿ ಮಾಡಿದ ಮೇಲೆ ಹಕ್ಕುಪತ್ರಗಳನ್ನು ನೀಡುವಂತೆ ನಗರಸಭೆ ಕಚೇರಿಗೆ ಹಸ್ತಾಂತರ ಮಾಡಿದ್ದರು.

ಈ ಮಧ್ಯೆ ರಾಜ್ಯಸರ್ಕಾರವೇ ಫಲಾನುಭವಿಗಳ 40 ಸಾವಿರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿತು. ಆದರೂ, ನಗರಸಭೆ ಹಕ್ಕುಪತ್ರಗಳನ್ನು ನೀಡಲು ವಿಳಂಬ ಧೋರಣೆ ಅನುಸರಿಸಿತು. ಅಸಲಿ ಹಕ್ಕುಪತ್ರಗಳು ಕಳುವಾಗಿದೆ ಎಂದು ಸಬೂಬು ಹೇಳಿದ್ದಾರೆ ಎಂದು ಕಿಡಿಕಾರಿದರು.

### ಡಿಸಿಎಂ ಮತ್ತು ಶಾಸಕರ ಗಮನ ಸೆಳೆಯುವೆ

ಬೀಡಿ ಕಾರ್ಮಿಕರ ಹಕ್ಕು ಪತ್ರಗಳ ವಿಚಾರವಾಗಿ ರಾಮನಗರ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಗಮನ ಸೆಳೆಯುವುದಾಗಿ. ಸಂಬಂಧಿಸಿದ ಸಚಿವರೊಂದಿಗೆ ಇಲ್ಲಿನ ಶಾಸಕರು ಚರ್ಚಿಸಿದರೆ ಹತ್ತು ನಿಮಿಷಗಳಲ್ಲಿ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳಿದರು.

### ನ್ಯಾಯ ಕೊಡಿಸಲು ಹೋರಾಟ ಅನಿವಾರ್ಯ

ನಮ್ಮದೇ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿದೆ. ನಗರಸಭೆಯಲ್ಲಿಯೂ ಆಡಳಿತ ನಡೆಸುತ್ತಿದೆ. ಅದರ ವಿರುದ್ಧ ಹೋರಾಟ ನಡೆಸಲು ನನಗೂ ಮನಸ್ಸಿಲ್ಲ. ಆದರೆ, ರಾಜೀವ್ ಗಾಂಧಿ ವಸತಿ ನಿಗಮದಿಂದ ಹಕ್ಕುಪತ್ರ ವಂಚಿತರಿಗೆ ನ್ಯಾಯ ಕೊಡಿಸಲು ಅನಿವಾರ್ಯವಾದರೆ ಪ್ರತಿಭಟನೆ ಹಾದಿ ಹಿಡಿಯುತ್ತೇವೆ. ಆಗಲೂ ನ್ಯಾಯ ಸಿಗದಿದ್ದರೆ ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಯುವ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷ ಮಹಮ್ಮದ್ ಇಸ್ಮಾಯಿಲ್ , ಮುಖಂಡರಾದ ಅತಾವುಲ್ಲಾ, ಫಲಾನುಭವಿಗಳು ಹಾಗೂ ಬೀಡಿ ಕಾರ್ಮಿಕರ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ ಪದಾಧಿಕಾರಿಗಳು ಇದ್ದರು.

# ರೋಟರಿ ಸಂಸ್ಥೆ ಅಧ್ಯಕ್ಷರಾಗಿ ಅಬ್ದುಲ್, ಕಾರ್ಯದರ್ಶಿಯಾಗಿ ಜಿ.ಅಂಕಶೆಟ್ಟಿ



ಚಾಮರಾಜನಗರ, ರೋಟರಿಸಂಸ್ಥೆಯ 2026–27ನೇ ಸಾಲಿನ ಅಧ್ಯಕ್ಷರಾಗಿ ಅಬ್ದುಲ್‌ಅಜೀಜ್ ದೀನಾ, ಕಾರ್ಯದರ್ಶಿಯಾಗಿ ಜಿ.ಅಂಕಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು.

ನಗರದ ರೋಟರಿ ಭವನದಲ್ಲಿ ಮಂಗಳವಾರ ರಾತ್ರಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಅಬ್ದುಲ್ ಅಜೀಜ್ ದೀನಾ, ಕಾರ್ಯದರ್ಶಿಯಾಗಿ ಜಿ.ಅಂಕಶೆಟ್ಟಿ, ನಿರ್ಗಮಿತ ಅಧ್ಯಕ್ಷರಾಗಿ ಚಂದ್ರಶೇಖರ್, ಮುಂದಿನ ಸಾಲಿನ ಅಧ್ಯಕ್ಷರಾಗಿ ಸಿದ್ದರಾಜು, ಉಪಾಧ್ಯಕ್ಷರಾಗಿ ಸುರೇಶ್ ಕುಮಾರ್, ಸಹ ಕಾರ್ಯದರ್ಶಿಯಾಗಿ ಮಹದೇವಪ್ರಸಾದ್, ದಂಡಪಾಣಿಯರಾಗಿ ರಮೇಶ್, ಕ್ಲಬ್ ಸರ್ವೀಸ್‌ರಾಗಿ ನೇಮಿರಾಜ್, ವೃತ್ತಿಸೇವೆ ನಿರ್ದೇಶಕರಾಗಿ ರತ್ನಮ್ಮ, ಸಮುದಾಯ ಸೇವೆ ನಿರ್ದೇಶಕರಾಗಿ ಸಿದ್ದಮಲ್ಲಪ್ಪ, ಅಂತಾರಾಷ್ಟ್ರೀಯ ಸೇವೆಯ ನಿರ್ದೇಶಕರಾಗಿ ಮಹದೇವಸ್ವಾಮಿ, ಯುವಸೇವೆ ನಿರ್ದೇಶಕ ರಾಮು, ವಿವಿಧ ಛೇರ್ಮನ್ ಗಳಾಗಿ ಜಿ.ಆರ್.ಅಶ್ವಥ್ ನಾರಾಯಣ್, ಸಿ.ವಿ. ಶ್ರೀನಿವಾಸಶೆಟ್ಟಿ, ಎಲ್.ನಾಗರಾಜು, ಪ್ರಭಕರ್, ಭವಾನಿದೇವಿ, ನಂಜುಂಡಸ್ವಾಮಿ, ಸಿ.ಎ.ನಾರಾಯಣ್, ಪ್ರಕಾಶ್, ಕೆ.ಮಹದೇವಸ್ವಾಮಿ, ಸಿ.ಎ.ರಮೇಶ್, ಸುಭಾಷ್, ಹರೀಶ್, ಕಮಲ್‌ರಾಜ್, ಚಂದ್ರಪ್ರಭಜೈನ್, ಬಿ.ಕೆ.ಮೋಹನ್, ಸಂಜಯ್ ಕುಮಾರ್ ಜೈನ್, ಉಲ್ಲಾಸ್, ಯೋಗರಾಜ್, ಡಾ.ಮಹದೇವಸ್ವಾಮಿ, ಶ್ರೀನಿವಾಸ್, ಶ್ರೀನಿವಾಸನ್, ರಾಜೇಂದ್ರ, ವಿ.ನಾಗರಾಜು,ಜಿ.ಗುರುಸ್ವಾಮಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಸಿ.ವಿ.ಶ್ರೀನಿವಾಸಶೆಟ್ಟಿ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

### ಸನ್ಮಾನ

ರೋಟರಿಸಂಸ್ಥೆಯ 2026–27ನೇ ಸಾಲಿನ ರೋಟರಿ ಸಂಸ್ಥೆ ಯ ಅಧ್ಯಕ್ಷರಾಗಿ ಅಬ್ದುಲ್‌ಅಜೀಜ್ ದೀನಾ, ಕಾರ್ಯದರ್ಶಿಯಾಗಿ ಜಿ. ಅಂಕಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು. ಅವರನ್ನು ರೋಟರಿ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿದ ಅಬ್ದುಲ್‌ಅಜೀಜ್ ದೀನಾ ಮಾತನಾಡಿ, ರೋಟರಿಸಂಸ್ಥೆಯ 2026–27ನೇ ಸಾಲಿನ ಅಧ್ಯಕ್ಷರಾಗಿ ನನ್ನನ್ನು ಕಾರ್ಯದರ್ಶಿಯಾಗಿ ಜಿ. ಅಂಕಶೆಟ್ಟಿ ಹಾಗೂ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಿದ ರೋಟರಿ ಸಂಸ್ಥೆಯ ಪದಾಧಿಕಾರಿಗಳಿಗೆ ಈ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ. ಎಲ್ಲರ ಸಹಕಾರದೊಂದಿಗೆ ರೋಟರಿ ಸೇವೆಯನ್ನು ನಿರಂತರವಾಗಿ ಮಾಡುವುದಾಗಿ ತಿಳಿಸಿದರು.

ಚಾಮರಾಜನಗರ ರೋಟರಿ ಸಂಸ್ಥೆಯ 2029–30ನೇ ಸಾಲಿನ ಜಿಲ್ಲಾ ಗೌರರ್ ಅಭ್ಯರ್ಥಿಯಾಗಿ ಆರ್.ಸುಭಾಷ್ ಅವರನ್ನು ಸರ್ವಾನುಮತದಿಂದ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

# ರಾಜ್ಯದಲ್ಲಿ ಹದಗೆಟ್ಟ ಕಾನೂನು ಸುವ್ಯವಸ್ಥೆ

ಮೈಸೂರು: ರಾಜ್ಯದ ಕಾನೂನು ಸುವ್ಯವಸ್ಥೆ ದಿನ ದಿನ ಹದೆಗೆಡುತ್ತಿದ್ದು ಜನರು ಆತಂಕಗೀಡಾಗಿದ್ದಾರೆ ಎಂದು ಆರೋಪಿಸಿ ಮೈಸೂರು ಕನ್ನಡ ವೇದಿಕೆ ನಗರದಲ್ಲಿ ಪ್ರತಿಭಟಿಸಿತು.

ವೇದಿಕೆ ಅಧ್ಯಕ್ಷರಾದ ಬಾಲಕೃಷ್ಣ ಮಾತನಾಡಿ, ಒಂದು ಕಾಲದಲ್ಲಿ ದಕ್ಷಿಣ ಭಾರತದ ಸುರಕ್ಷಿತ ಭದ್ರಕೋಟೆ ಯಾರೆಂದು ಹೆಸರು ವಾಸಿಯಾಗಿದ್ದ, ಕರ್ನಾಟಕ ಇಂದು ಕಾನೂನು ಸುವ್ಯವಸ್ಥೆ ಹದೆಗೆಟ್ಟು ಉತ್ತರ ಭಾರತದ ರೀತಿಯಲ್ಲಿ ಅಪರಾಧ ಕೃತ್ಯಗಳಾದ ಕೊಲೆ, ದರೋಡೆ ಡಕಾಯಿತಿ,ಮಾದಕ ವಸ್ತುಗಳ ಚಟುವಟಿಕೆಗಳು ಹೆಚ್ಚಾಗುತ್ತಿರುವುದು ಭದ್ರತಾ ವೈಫಲ್ಯವನ್ನು ಎತ್ತಿ ತೋರುತ್ತದೆ ಎಂದರು.

ರಾಜ್ಯ ಗೃಹ ಇಲಾಖೆ, ಪೊಲೀಸ್ ಇಲಾಖೆ, ಗುಪ್ತ ಚಾರ ಇಲಾಖೆ ಮೇಲೆ ನಿಯಂತ್ರಣ ಕಳೆದುಕೊಂಡಿರುವ ಭಾವನೆ ಜನರಲ್ಲಿ ಮೂಡಿದೆ, ಪ್ರತಿ ಬಾರಿ ಇಂತಹ ಅಹಿತಕರ ಕೃತ್ಯ ನಡೆದಾಗ ಎಚ್ಚೆತ್ತು ಕೊಳ್ಳುವುದು ನಂತರ ಮೌನವಾಗಿದೆ. ರಾಜ್ಯದ ಗೃಹ ಇಲಾಖೆ ನಿದ್ದೆ ವ್ಯವಸ್ಥೆಯಿಂದ ಎದ್ದು ಸಾರ್ವಜನಿಕರ ಆಸ್ತಿ ಪಾಸ್ತಿ ಜೀವದ ದೃಷ್ಟಿಯಿಂದ ಸಂಬಂಧಪಟ್ಟ ಠಾಣಾಧಿಕಾರಿಗಳಿಗೆ ಕಾನೂನು



ಸುವ್ಯವಸ್ಥೆ ಬಗ್ಗೆ ಖಡಕ್ ನಿರ್ಣಯ ತೆಗೆದುಕೊಳ್ಳಲು ಸೂಚನೆ ನೀಡಬೇಕೆಂದು ವೇದಿಕೆ ಆಗ್ರಹಿಸುತ್ತದೆಂದರು. ಪ್ರತಿಭಟನೆಯಲ್ಲಿ ನಾಲಾ ಬೀದಿ ರವಿ, ಬೋಗಾದಿ ಸಿದ್ದೇಗೌಡ ಗುರುಬಸಪ್ಪ ಪ್ಯಾಲೇಸ್ ಬಾಬು, ಗೋವಿಂದರಾಜು, ಸಾಯಿ ಚಾಮರಾಜು ಮಂಡಕಳ್ಳಿ, ಹರೀಶ್ ,ಚಿನ್ನಪ್ಪ,ಶಿವುಗೌಡ ಮಾದಪ್ಪ, ಸುನೀಲ್,ಗೋಪಿ, ಗೈಡ್ ಸ್ವಾಮಿ, ಮೋದಿ, ಮನೋಹರ್, ಸಿದ್ದಪ್ಪ , ಎಲ್ ಐ ಸಿ, ಹನಕರೆ ಸ್ವಾಮಿ,ಚೆಲುವರಾಯಸ್ವಾಮಿ, ರೈತ ಪರ್ವ ಅಧ್ಯಕ್ಷರಾದ ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಡಾ ಉಮಾಪತಿ, ವಕೀಲರಾದ ಸತೀಶ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಹತ್ಯಾಕೋರರ ವಿರುದ್ಧ ಕ್ರಮಕ್ಕೆ ಮನವಿ

ಮೈಸೂರು: ಹುಬ್ಬಳ್ಳಿ ತಾಲ್ಲೂಕು ಇನಾಂ ವೀರಾಪುರ ಗ್ರಾಮದಲ್ಲಿ ನಡೆದ ಮಾರ್ಯಾದೆ ಹತ್ಯೆಗೆ ಕಾರಣರಾದವರ ವಿರುದ್ಧ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಮೈಸೂರಿನ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಅಪಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸದರಿ ಗ್ರಾಮದ ದಲಿತ ಸಮುದಾಯಕ್ಕೆ ಸೇರಿದ ವಿವೇಕಾನಂದ ಎಂಬ ಹುಡುಗ ಅದೇ ಗ್ರಾಮದ ಮಾನ್ಯ ಪಾಟೀಲ್ ಎಂಬುವವರನ್ನು ಪ್ರೀತಿಸಿ ಮದುವೆಯಾಗಿರುತ್ತಾನೆ. ಮಾನ್ಯಳ ತಂದೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಕಂಪ್ಲೆಂಟ್ (ಕಾಣೆಯಾದ ಬಗ್ಗೆ ದೂರು) ದಾಖಲು ಮಾಡಿರುತ್ತಾರೆ. ಸ್ಥಳೀಯ ಪೊಲೀಸರು ವಿಚಾರಣೆ ಮಾಡಿ ಮಾನ್ಯ ವಿವೇಕಾನಂದರವರ ಜೊತೆ ಹೋಗಲು ತೀರ್ಮಾನಿಸಿದ್ದು, 7 ತಿಂಗಳ ನಂತರ ಊರಿಗೆ ಬಂದು 10 ದಿನಗಳಿಂದ ಊರಿನಲ್ಲೇ ಇರುತ್ತಾರೆ. ಮಾನ್ಯಳ ತಂದೆ ವಿವೇಕಾನಂದರವರ ಕುಟುಂಬವನ್ನು ಕೊಲೆ ಮಾಡಲು ಸಂಚು ರೂಪಿಸಿ ಕುಟುಂಬದ ಎಲ್ಲಾ ಸದಸ್ಯರ ಮೇಲೆ ಮಾರಣಾಂತಿಕ



ಹಲ್ಲೆ ಮಾಡಿರುತ್ತಾರೆ. ತುಂಬು ಗರ್ಭಿಣಿಯಾದ ಮಾನ್ಯಳನ್ನು ಕೊಡಲಿಯಿಂದ ಹೊಡೆದು ಕೊಲೆ ಮಾಡಿ ಮರ್ಯಾದೆ ಹತ್ಯೆ ಮಾಡಿರುತ್ತಾರೆ. 10 ದಿನಗಳಿಂದ ಊರಿನಲ್ಲಿದ್ದ ವಿವೇಕಾನಂದರ ಕುಟುಂಬಕ್ಕೆ ಪೊಲೀಸ್ ರಕ್ಷಣೆ ನೀಡಿದ್ದರೆ, ಇಂತಹ ಧಿಕಾರಿ ನಬೆಳ್ಳದ್ಯ ನಡೆಯುತ್ತಿರಲಿಲ್ಲ. ಮಾರಣಾಂತಿಕ ಹಲ್ಲೆ ಮಾಡಿರುವವರ ಮೇಲೆ ಸೂಕ್ತ ಕಾನೂನು ಕ್ರಮ ಸಂಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸಮಿತಿ ಜಿಲ್ಲಾಧ್ಯಕ್ಷ ಶಂಕರ್, ತಾಲ್ಲೂಕು ಅಧ್ಯಕ್ಷರಾದ ಸ್ವಾಮಿ, ರಾಜು, ಗಿರೀಶ, ಉಪಾಧ್ಯಕ್ಷ ಹನುಮಂತು, ರವಿ, ರಾಜು ಇನ್ನಿತರರು ಉಪಸ್ಥಿತರಿದ್ದರು.

# ಹನೂರು ಅಗ್ನಿಶಾಮಕ ಠಾಣೆಗೆ ಹೊಸ ವರ್ಷಕ್ಕೆ ಹೊಸ ಜಲ ವಾಹನ



ಹನೂರು: ಈ ಮೊದಲು ಹನೂರು ಅಗ್ನಿಶಾಮಕ ಠಾಣೆಯಲ್ಲಿ ಒಂದು ಜಲ ವಾಹನ ಲಭ್ಯವಿದ್ದು ಇದೀಗ ನೂತನ ಜಲವಾಹನವನ್ನು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ವತಿಯಿಂದ ನೀಡಲಾಗಿದೆ. ಇಂದು ಹನೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಶ್ರೀ ಎಂ ಆರ್ ಮಂಜುನಾಥ್ ರವರು ಚಾಲನೆ ನೀಡಿದರು. ಈ ವೇಳೆ ಚಾಮರಾಜನಗರ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಸಂದೀಪ್ ಬಸರಗೆ ಹನೂರು ಪ್ರಭಾರ ಠಾಣಾಧಿಕಾರಿ ಮಹೇಶ್ ಮತ್ತು ಸಿಬ್ಬಂದಿಯವರು ಹಾಜರಿದ್ದರು. ಜಲವಾಹನದಲ್ಲಿ 6000 ಲೀಟರ್ ನೀರಿನ ಸಾಮರ್ಥ್ಯವಿದ್ದು ಹೆಚ್ಚಿನ ಸಮಯ ಅಗ್ನಿಕರೆಗಳಲ್ಲಿ ಕಾರ್ಯ ನಿರ್ವಹಿಸಬಹುದು.

# ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಸೋಮಸುಂದರ ನೇಮಕ

ಮೈಸೂರು: ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಯಾಗಿ ನೇಮಕರಾದ ಹಿನ್ನೆಲೆಯಲ್ಲಿ ವಿ.ಸೋಮಸುಂದರ ಶಾಸಕರಾದ ಟಿ.ಎಸ್. ಶ್ರೀವತ್ಸರನ್ನು ಗೌರವಿಸಿ ಆಶೀರ್ವಾದ ಪಡೆದರು

ಈ ಸಂದರ್ಭದಲ್ಲಿ ಕೆ.ಆರ್. ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಪ್ರಧಾನ ಕಾರ್ಯದರ್ಶಿಗಳಾದ ಜಯರಾಮ್, ಜಯಶಂಕರ್, ನಗರ ಉಪಾಧ್ಯಕ್ಷ ವಿಶ್ವೇಶ್ವರಯ್ಯ, ಸಿಂಡಿಕೇಟ್ ಸದಸ್ಯರಾದ ಗೋಕುಲ್ ಗೋವರ್ಧನ್, ಬಿಜೆಪಿ ಮುಖಂಡರಾದ ಎನ್. ಪ್ರದೀಪ್ ಕುಮಾರ್, ರಾಜೇಶ್ ಜಾದವ್, ವಿನಯ್ ಪಾಂಚಜನ್ಯ, ಮಂಜುನಾಥ್, ಹೇಮಂತ್ ಕುಮಾರ್, ಕೀರ್ತಿ ಮುಂತಾದವರು ಇದ್ದರು.



## ಸ್ನೇಹಾ ರಾಜ್ ಹೇಳಿಕೆ । ಕನ್ನಡ ನೆಲ ಜಲ ಸಂಸ್ಕೃತಿಕ ವೇದಿಕೆಯಿಂದ ವಿಷ್ಣು ನೆನಪಿನೋತ್ಸವ

# ವಿಷ್ಣು ಶ್ರೇಷ್ಠ ನಟ, ಚಿತ್ರರಂಗಕ್ಕೆ ಅವರ ಕೊಡುಗೆ ಅಪಾರ

ಚಾಮರಾಜನಗರ: ಕನ್ನಡ ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿದ್ದ ವಿಷ್ಣುವರ್ಧನ್ ಅವರು ಸಮಾಜಕ್ಕೆ ಉತ್ತಮ ಸಂದೇಶ ನೀಡುವಂತಹ ಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಮಾದರಿಯಾ ಗಿದ್ದರು. ಅಪಾರ ಅಭಿಮಾನಿಗಳನ್ನು ಹೊಂದಿದ್ದರು ಎಂದು ಡಿವೈಎಸ್ಪಿ ಸ್ನೇಹರಾಜ್ ತಿಳಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಕನ್ನಡ ನೆಲ–ಜಲ ಸಾಂಸ್ಕೃತಿಕ ವೇದಿಕೆಯ ವತಿಯಿಂದ ಸಾಹಸ ಸಿಂಹ ದಿ.ಡಾ.ವಿಷ್ಣುವರ್ಧನ್ ಅವರ 16ನೇ ವರ್ಷದ ಪುಣ್ಯ ಸ್ಮರಣೆಯ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ರಾಜ್ಯಮಟ್ಟದ ವಿಷ್ಣು ಪದಬಂಧ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಡಾ.ವಿಷ್ಣುವರ್ಧನ್ ಅವರು ಕೇವಲ ನಟರಾಗಿರಲಿಲ್ಲ. ಬಹಳಷ್ಟು ಮಂದಿ ಜೀವನವನ್ನು ಬದಲಿಸಿದ ಮೇರು ನಟ. ತಾವು ಅಭಿನಯಿಸಿರುವ ಚಲನಚಿತ್ರಗಳ ಮೂಲಕ ಬದುಕಿನ ಸಂದೇಶವನ್ನು ಹೇಳುತ್ತಿದ್ದರು. ಹಲವು ಮಂದಿಯ ಜೀವನ ಬದಲಾಗಿದೆ ಎಂದರು. ಒಂದು ದಿನದಲ್ಲಿ



ಕೆಲವು ಸಮಯವನ್ನು ಹೊಸ ಹೊಸ ಪದಗಳನ್ನು ಕಲಿಯಲು, ದಿನ ಪತ್ರಿಕೆಗಳು ಹಾಗೂ ಪುಸ್ತಕಗಳನ್ನು ಓದಲು ಬಳಸಿಕೊಳ್ಳಬೇಕು. ಜೀವನದಲ್ಲಿ ಕಳ್ಳತನ ಮಾಡಲು ಸಾಧ್ಯವಾದ ಆಸ್ತಿ ಎಂದರೆ ಜ್ಞಾನ. ಹೆಚ್ಚು ಹೆಚ್ಚು ಓದುವ ಮೂಲಕ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಂಸ್ಕೃತಿ ಚಿಂತಕ ಸುರೇಶ್ ಎನ್.ಋಗ್ವೇದಿ ಮಾತನಾಡಿ, ನಟನೆಯ ಜತೆಗೆ ಶ್ರೇಷ್ಠವಾದ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸರಳತೆ, ಪ್ರೀತಿ, ವಿಶ್ವಾಸ, ನಂಬಿಕೆ, ಸೇವೆ, ವಿನಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಾನವನಿಗೆ ಅಂತಿಮ ಕ್ಷಣದಲ್ಲಿ ಬೇಕಾದ ಆಧ್ಯಾತ್ಮಿಕ ರಹಸ್ಯವನ್ನು ಭಾರತೀಯ ಚಿತ್ರರಂಗದಲ್ಲಿ ಅನುಸರಿಸುವಂತೆ ಮಾಡಿದ ಸಮಾಜದಲ್ಲಿ ಸದಾಕಾಲ ನೆನಪಿಸಿಕೊಳ್ಳುವ ವ್ಯಕ್ತಿತ್ವವನ್ನು ರೂಪಿಸಿಕೊಂಡ ಮೇರು ನಟ ಡಾ.ವಿಷ್ಣು ಎಂದು ಹೇಳಿದರು.

ಕನ್ನಡ ನೆಲ–ಜಲ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಷ್ಣುವರ್ಧನ ಜಾತ್ಯತೀತ ವ್ಯಕ್ತಿಯಾಗಿದ್ದರು. ಎಲ್ಲಾ ವರ್ಗದವರು ಅವರನ್ನು ಪ್ರೀತಿ ಮಾಡುತ್ತಿದ್ದರು. ಬುದ್ಧ, ಬಸವ, ಅಂಬೇಡ್ಕರ್ ಅವರ ಹಾದಿಯಲ್ಲಿ ಸಾಗಿದ ವಿಷ್ಣುವರ್ಧನ ಸಮಾಜಕ್ಕೆ ಒಳಿತು ಬಯಸಿದರು. ಅವರು ನಮ್ಮನ್ನಗಲಿ 16 ವರ್ಷಗಳೇ ಕಳೆದಿದ್ದರು ಸಹ ಚಿತ್ರಗಳ ಮೂಲಕ ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ. ಅವರ ಹೆಸರಿನಲ್ಲಿ ನಡೆಯುವ ಇಂಥ ಕಾರ್ಯಕ್ರಮಗಳಿಗೆ ಸಾಕಷ್ಟು ಅಭಿಮಾನಿಗಳು ಸ್ವಯಂ ಪ್ರೇರಣೆ ಬರುತ್ತದೆ. ಅದು ಶ್ರೇಷ್ಠ ನಟನಿಗಿರುವ ಶಕ್ತಿ ಎಂದರು. ನಂತರ ನಡೆದ ರಾಜ್ಯ ಮಟ್ಟದ ಪದಬಂಧ ಸ್ಪರ್ಧೆಯಲ್ಲಿ ನೂರಕ್ಕು ಹೆಚ್ಚು ಮಂದಿ ಭಾಗವಹಿಸಿದ್ದರು. ಉತ್ತಮವಾಗಿ ಪದಬಂಧ ರಚನೆ ಮಾಡಿದವರಿಗೆ ನಗದು ಬಹುಮಾನವನ್ನು ನೀಡಿ ಗೌರವಿಸಲಾಯಿತು. ವಿಷ್ಣು ರಸಮಂಜರಿ ಕಾರ್ಯಕ್ರಮ ನಡೆಯಿತು. ವಕೀಲ ಅರುಣ್ ಕುಮಾರ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ, ರೈತ ಹೋರಾಟಗಾರ ಆಲೂರು ಮಲ್ಲು, ಉದ್ಯಮಿ ಶ್ರೀನಿಧಿ ಕುದರ್, ಗಾಯಕ ಸುರೇಶ್ ನಾಗ್ ಹಾಗೂ ಮಹೇಶ್, ಸುಗಂಧರಾಜ್, ಕೂಸಣ,?ಣ ರಾಮಸಮುದ್ರ ವೇಣುಗೋಪಾಲ್, ವಕೀಲ ಮಲ್ಲು, ಅನಂದ ಭಗೀರಥ ಮೊದಲಾದವರು ಇದ್ದರು.

# ಬಂಜಾರ ಇಂಡಿಯನ್ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ



ಚಾಮರಾಜನಗರ, ವಿದ್ಯಾರ್ಥಿಗಳು ದೊಡ್ಡ ಗುರಿಯನ್ನಿಟ್ಟುಕೊಂಡು ಓದಬೇಕು ಆಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಡಿವೈಎಸ್ ಪಿ ಸ್ನೇಹರಾಜ್ ಹೇಳಿದರು.

ನಗರದ ಬೈಪಾಸ್ ರಸ್ತೆಯ ಸಮೀಪದಲ್ಲಿರುವ ಬಂಜಾರ ಗಂಗೋತ್ರಿ ಕ್ಯಾಂಪಸ್ ನಲ್ಲಿ ನಡೆದ ಬಂಜಾರ ಶಿಕ್ಷಣ ಸಂಸ್ಥೆ ಯ2025–26ನೇ ಶೈಕ್ಷಣಿಕ ಸಾಲಿನ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ನಮ್ಮಿಂದ ಏನು ಆಗಲ್ಲ ಎಂದು ಎಂದಿಗೂ ಅಂದುಕೊಳ್ಳದೇ ದೊಡ್ಡ ಸಾಧನೆ ಮಾಡುತ್ತೇನೆ ಎಂದು ನಿರಂತರ ಪ್ರಯತ್ನ ಮಾಡಿದರೆ ಯಾವುದು ಅಸಾಧ್ಯವಿಲ್ಲ. ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಎಲ್ಲವನ್ನೂ ಸಾಧಿಸಲು ಸಾಧ್ಯ .ಮಕ್ಕಳಿಗೆ ಶಿಕ್ಷಣವನ್ನು ಸರಿಯಾಗಿ ಕೊಟ್ಟರೆ ಉನ್ನತ ಹುದ್ದೆ, ಉನ್ನತ ಶಿಕ್ಷಣ ಪಡೆಯಲು ಸಾಧ್ಯ.ಮೋಹನ್ ಮೆಘಾವತ್ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ ಎಂದರು.

ಮೋಹನ್ ಮೇಘಾವತ್ ಅವರು ಶಿಕ್ಷಣ ಸಂಸ್ಥೆ ತೆರೆದು ಜಿಲ್ಲೆಯ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ಜಿಲ್ಲೆಯನ್ನು ಮುಂದೆ ತೆಗೆದುಕೊಂಡು ಹೋಗಬೇಕು ಎನ್ನುವ ನಿಲುವು, ದೂರದೃಷ್ಟಿ ಎಲ್ಲರಿಗೂ ಬರುವುದಿಲ್ಲ. ಎಲ್ಲರಿಗೂ ಇದು ನಮ್ಮ ಜಿಲ್ಲೆ ಇದನ್ನು ಉದ್ಧಾರ ಮಾಡಬೇಕು. ಎಂಬ ಪ್ರೀತಿ ಬರಬೇಕು ಅದು ಎಲ್ಲರಿಗೂ ಬರುವುದಿಲ್ಲ. ಮೋಹನ್ ಮೆಘಾವತ್ ಅವರು ಕಾಲವಾದ ನಂತರವೂ ಈ ಸಂಸ್ಥೆಯನ್ನು ಅವರ ಕುಟುಂಬದವರು ಮುಂದುವರಿಸಿಕೊಂಡು ಹೋಗುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ ಆಗಿದೆ ಎಂದರು.

**ಬಹುಮಾನ ವಿತರಣೆ**

ಭಾರತ ಸಂವಿಧಾನ ಮೂಲಭೂತ ತತ್ವಗಳ ವಿಷಯ ಕುರಿತು2025–26ನೇ ಸಾಲಿನ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಯನ್ನು ತೇರ್ಗಡೆ ಯಾದ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ 5 ಸಾವಿರ, ಪದಕ, ದ್ವಿತೀಯ ಬಹುಮಾನ 3 ಸಾವಿರ, ಪದಕ, ಸಮಾಧಾನಕರ ಬಹುಮಾನ 10 ವಿದ್ಯಾರ್ಥಿಗಳಿಗೆ ತಲಾ 1 ಸಾವಿರ,ಪದಕ, ಪರೀಕ್ಷೆ ಬರೆದ 400 ಕ್ಕೂ ಹೆಚ್ಚು ಮಕ್ಕಳಿಗೆ 200 ರೂ. ಪದಕ ವಿತರಿಸಲಾಯಿತು ಹಾಗೂ ಶಾಲಾ ವಾರ್ಷಿಕೋತ್ಸವ ಅಂಗವಾಗಿ ವಿದ್ಯಾರ್ಥಿಗಳು, ಪೋಷಕರಿಗೆ ಆಯೋಜಿ ಸಿದ್ದ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದ ವರಿಗೆ ಗಣ್ಯರು ಬಹುಮಾನ, ಪ್ರಮಾಣಪತ್ರ ವಿತರಿಸಿದರು. ಟ್ರಸ್ಟ್ ಅಧ್ಯಕ್ಷ ಶಿವಾಜಿ ಮೆಘಾವತ್ ಅಧ್ಯಕ್ಷತೆ ವಹಿಸಿದ್ದರು.ಕಾರ್ಯಕ್ರಮದಲ್ಲಿ ಚಾಮುಲ್ ಮಾಜಿ ಅಧ್ಯಕ್ಷ ವೈ.ಸಿ.ನಾಗೇಂದ್ರ, ಅರಕಲವಾಡಿ ನಾಗೇಂದ್ರ, ಉಪಾಧ್ಯಕ್ಷ ವೀಣಾ ಎಂ.ಎಸ್. ಟ್ರಸ್ಟಿಗಳಾದ ಜಗದೀಶ್ ನಾಯಕ್ , ಕಾವೇರಿ ಬಾಯಿ, ಚಿತ್ರ, ಪುರುಷೋತ್ತಮ, ತಾ.ಪಂ.ಮಾಜಿ ಸದಸ್ಯ ಕುಮಾರ್ ನಾಯಕ್,ಪೋಷಕರು, ವಿದ್ಯಾರ್ಥಿಗಳು ಹಾಜರಿದ್ದರು. ನಿವೃತ್ತ ಪ್ರಾಂಶುಪಾಲ ಕೃಷ್ಣನಾಯಕ ಸ್ವಾಗತ ಭಾಷಣ ಮಾಡಿದರು. ನಂತರ ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು..

# ಅಕ್ರಮ ರೆಸಾರ್ಟ್‌ಗಳ ಮುಚ್ಚಿಸಲು ಆಗ್ರಹ



ಗುಂಡ್ಲುಪೇಟೆ: ತಾಲ್ಲೂಕಿನ ಬಂಡೀಪುರ ಸುತ್ತಮುತ್ತ ಅಕ್ರಮ ರೆಸಾರ್ಟ್ ಹೋಂ ಸ್ಟೇ ಗಳು ತಲೆ ಎತ್ತಿದ್ದು ಅರಣ್ಯಇಲಾಖೆ ಅವುಗಳನ್ನು ಮುಚ್ಚಿಸಬೇಕು, ಸಫಾರಿ ತೆರೆಯುವ ಚಿಂತನೆ ಇದ್ದರೆ ಕೈ ಬಿಡಬೇಕು ಇಲ್ಲದಿದ್ದರೆ ಹೋರಾಟ ಮಾಡುವುದಾಗಿ ಸಾಮೂಹಿಕ ನಾಯಕತ್ವದ ರೈತಸಂಘದಿಂದ ಪ್ರತಿಭಟನೆ ನಡೆಸಲಾಗುವುದು ಎಂದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಗೋಷ್ಠಿಯಲ್ಲಿ ಮಾತನಾಡಿ ಅರಣ್ಯ ಇಲಾಖೆ ಸಿಬ್ಬಂದಿಯನ್ನೆ ರಕ್ಷಿಸದ ಇವರು ರೈತರನ್ನು ಹೆಗೆ ರಕ್ಷಿಸುತ್ತಾರೆ ಗುಂಡ್ಲುಪೇಟೆ ಭಾಗದಲ್ಲಿ ಹುಲಿ ದಾಳಿಗೆ ಮಹಿಳೆ ಬಲಿಯಾಗಿದ್ದು, ಕೆಲವರಿಗೆ ಗಾಯವಾಗಿದೆ ನೂರಾರು ಜಾನುವಾರುಗಳು ಕಾಡುಪ್ರಾಣಿಯ ದಾಳಿಗೆ ಬಳಿಯಾಗಿವೆ ಎಂದರು. ಸಪಾರಿ ಹೋದಾಗ ಕಾಡು ಪ್ರಾಣಿಗಳು ನಾಡಿನತ್ತ ಬರುತ್ತವೆ ಆಗಾಗಿ ಸಪಾರಿ ನಡೆಸಬಾರದು, ಸಫಾರೊಯಿಂದ ಜನಸಾಮಾನ್ಯರಿಗೆ, ರೈತರಿಗೆ ಯಾವುದೇ ಅನುಕೂಲವಿಲ್ಲ ಹಣ ಮಾಡಲು ಅರಣ್ಯ ಇಲಾಖೆಗೆ ಮಾರ್ಗವಷ್ಟೆ, ಅಗಾಗಿ ಸಪಾರಿಯಿಂದ, ರೆಸಾರ್ಟ್ ಗಳಿಂದ ರಯತರಿಗೆ ಉಪಯೋಗವಿಲಗಲ ಸಫಾರಿ ತೆತೆಯಲು ಮುಂದಾದರೆ ಹೊರಾಟ ಪ್ರತಿಭಟನೆ ತೀವ್ರ ಸ್ವರೂಪ ಪಡೆಯಲಿದೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ಷಣ್ಮುಖಸ್ವಾಮಿ, ಮಾಡ್ರಹಳ್ಳಿ ಪಾಪಣ್ಣ, ಜಿಲ್ಲಾ ಉಪಾಧ್ಯಕ್ಷ ಮಹೇಶ್ ಹಸಗೂಲಿ, ಮಹೇಶ್ ಬರಗಿ, ಪ್ರಸಾದ್ ಕೆ. ಕೆ ಹುಂಡಿ, ಶಶಿ ಬೇರಂಬಾಡಿ, ರಾಜು ಭೀಮನಭೀಡು ಮತ್ತಿತರರಿದ್ದರು.


# ಜೀರ್ಣಾಂಗ ಅಸ್ವಸ್ಥತೆ: ರಾಜ್ಯದಲ್ಲಿ ವಾರ್ಷಿಕ 10 ಸಾವಿರ ಮಂದಿ ಸಾವು

- **ಹೆಚ್ಚಾಗುತ್ತಿದೆ ಫ್ಯಾಟಿ ಲಿವರ್, ಇರಿಟಬಲ್ ಬೋವಲ್ ಸಿಂಡ್ರೋಮ್, ಆಸಿಡ್ ರಿಫ್ಲಕ್ಸ್**
- **ಆಹಾರ, ಜೀವನ ಶೈಲಿ ಬಗ್ಗೆ ಎಚ್ಚರವಿರಲಿ**
- **ಮಣಿಪಾಲ್ ಆಸ್ಪತ್ರೆಯ ತಜ್ಞವೈದ್ಯರ ಸಲಹೆ**

ರಾಮನಗರ; ಸೇವಿಸುವ ಆಹಾರದ ಆಯ್ಕೆಯನ್ನು ಸುಧಾರಿಸಿಕೊಂಡರೆ ಜೀರ್ಣಾಂಗವ್ಯೂಹದ ಕಾಯಿಲೆಗಳು ಸೇರಿದಂತೆ ಅನೇಕ ರೋಗಗಳನ್ನು ತಡೆಗಟ್ಟಬಹುದು ಎಂದು ಬೆಂಗಳೂರು ಮಲ್ಲೇಶ್ವರಂ ಮಣಿಪಾಲ್ ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ತಜ್ಞ ವೈದ್ಯ ಡಾ.ಪುನೀತ್.ಬಿ.ಎಸ್. ತಿಳಿಸಿದರು.

### ವಾರ್ಷಿಕ 10 ಸಾವಿರ ಮಂದಿ ಸಾವು!

ನಗರದಲ್ಲಿ ಮಣಿಪಾಲ್ ಆಸ್ಪತ್ರೆ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಇಂದು ದಕ್ಷಿಣ ಭಾರತದಲ್ಲಿ ಜೀರ್ಣಾಂಗ ವ್ಯವಸ್ಥೆಯ ಕಾಯಿಲೆಗಳ ಪ್ರಕ ರಣಗಳು ವೇಗವಾಗಿ ಹೆಚ್ಚಾ ಗುತ್ತಿದೆ.



ರಾಜ್ಯದಲ್ಲಿ ವಾರ್ಷಿಕ ಸುಮಾರು 10,000 ಮಂದಿ ಈ ಸಮಸ್ಯೆಯಿಂದ ನಿಧನರಾಗುತ್ತಿದ್ದರೆ, ಹೀಗಾಗಿ ಜೀವನಶೈಲಿ ಮತ್ತು ಸೇವಿಸುವ ಆಹಾರದ ಬಗ್ಗೆ ಎಚ್ಚರ ಇರಲಿ ಈ ವಿಚಾರದಲ್ಲಿ ನಿರ್ಲಕ್ಷ ಸರಿಯಲ್ಲ ಎಂದರು. ಆರೋಗ್ಯ ಸಮಸ್ಯೆಯಿಂದ ಉಂಟಾಗುತ್ತಿರುವ ಸಾವುಗಳ ಪೈಕಿ 8ನೇ ಅತಿ ಮುಖ್ಯ ಕಾರಣವೆಂದರೆ ರೋಗನಿರ್ಣಯದ ವಿಳಂಬದಿಂ ದಾಗಿ ಸಾವುಗಳು ಸಂಭವಿಸುತ್ತಿವೆ. ಕಳೆದ ಕೆಲವು ವರ್ಷಗಳಲ್ಲಿ ಆಸಿಡ್ ರಿಫ್ಲೆಕ್ಸ್, ಇರಿಟೇಬಲ್ ಬೋವಲ್ ಸಿಂಡ್ರೋಮ್ ಮತ್ತು ಫ್ಯಾಟಿ ಲಿವರ್‌ನಂತಹ ಸಮಸ್ಯೆಗಳು ಹೆಚ್ಚಾಗುತ್ತಿವೆ. ವಿಶೇಷವಾಗ ಯುವ ಸಮುದಾಯದಲ್ಲೀ ಈ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು. ಬೊಜ್ಜು, ಮಧು ಮೇಹ ಮತ್ತು ರಕ್ತದೊತ್ತಡದ ಸಮಸ್ಯೆಗಳು ದೈಹಿಕ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಹೀಗಾಗಿ ಎಚ್ಚರಿಕೆವಹಿಸ ಬೇಕು ಎಂದರು.

### ದಿನ ರಾತ್ರಿ ಕನಿಷ್ಠ 8 ಗಂಟೆಗಳ ಕಾಲ ನಿದ್ರೆ ಮಾಡಿ ? ಡಾ.ಸಂಜಿತ್ ಸಲಹೆ

ಇಂಟರ್‌ನಲ್ ಮೆಡಿಸಿನ್ ವಿಭಾಗದ ತಜ್ಞ ವೈದ್ಯ ಡಾ.ಸಂಜಿತ್.ಎಸ್.ಬಿ. ಮಾತನಾಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರತಿ 10 ಮಂದಿಯ ಪೈಕಿ 7 ಮಂದಿ ಗ್ಯಾಸ್ಟ್ರಿಕ್ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದಕ್ಕೆ ಕಾರಣ ಕರಳು ಮತ್ತು ಮೆದುಳು ಅಕ್ಷ (ಗಟ್–ಬ್ರೈನ್ ಆಕ್ಸಿಸ್) ದಲ್ಲಿ ವ್ಯತ್ಯಾಸವಾಗುತ್ತಿದೆ. ದಿಕ್ಕೆ ಕಾರಣ ಆಹಾರದ ಆಯ್ಕೆಯಲ್ಲಿ ತಪ್ಪುಗಳನ್ನು ಮಾಡುವುದು, ತಡವಾಗಿ ಮಲಗುವುದು (ದಿನನಿತ್ಯ ಕನಿಷ್ಠ 8 ಗಂಟೆಯ ನಿದ್ರೆಯ ಅಗತ್ಯವಿದೆ), ಬೊಜ್ಜು ಇವು ಮಾನಸಿಕ ಒತ್ತಡವನ್ನು ಹೆಚ್ಚಿಸುತ್ತವೆ. ಇದು ಜೀರ್ಣಕ್ರಿಯೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಜನಸಂಖ್ಯೆಯಶೇ 6ರಷ್ಟು ಮಂದಿ ಇಂತಹ ಅಪಾಯಕಾರಿ ಜೀವನ ಶೈಲಿಯನ್ನು ಹೊಂದಿದ್ದಾರೆ ಎಂದು ತಿಳಿಸಿದರು.ಏರುತ್ತಿರುವ ಅನಾರೋಗ್ಯ ಸಮಸ್ಯೆಗಳನ್ನು ತಡೆಗಟ್ಟಲು ಆಹಾರದ ಆಯ್ಕೆಯ ಜೊತೆಗೆ ಒತ್ತಡ ರಹಿತ ಜೀವನ ಸಾಗಿಸಲು ಕಲಿಯಬೇಕು, ಧೂಮಪಾನ, ಮಧ್ಯಪಾನ ತ್ಯಜಿಸಬೇಕು. ದಿನ ನಿತ್ಯ ನಿಯಮಿತವಾಗಿ ವಾಕಿಂಗ್ ಮುಂತಾದ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದ ಅವರು ಬೊಜ್ಜು ಇಂದು ಅತಿ ದೊಡ್ಡ ಅಪಾಯವನ್ನು ಒಡ್ಡುತ್ತಿದೆ ಎಂದರು.

### ಜಾಗೃತಿ ಮೂಡಿಸುತ್ತಿದ್ದೇವೆ


ಏರುತ್ತಿರುವ ಆರೋಗ್ಯ ಸಮಸ್ಯೆಗಳ ವಿಚಾರದಲ್ಲಿ ವೈದ್ಯರು ಜಾಗೃತಿ ಮೂಡಿಸುತ್ತಿದ್ದಾರೆ. ಮಣಿಪಾಲ್ ಆಸ್ಪತ್ರೆ ವೈದ್ಯಕೀಯ ತಪಾಸಣಾ ಶಿಬಿರಗಳನ್ನು ಆಯೋಜಿಸಿ ರೋಗ ತಪಾಸಣೆಯ ಜೊತೆಗೆ ಜಾಗೃತಿ ಮೂಡಿಸುವ ಕಾಯಕದಲ್ಲಿದ್ದಾರೆ. ಬಹುತೇಕ ಜೀರ್ಣಾಂಗ ಅಸ್ವಸ್ಥತೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿದರೆ ಅವುಗಳನ್ನು ನಿರ್ವಹಿಸಬಹುದು ಎಂದರು.

## ಕಾಫಿ/ಟೀ – ದಿನಕ್ಕೆ ಎಷ್ಟು ಸೇವಿಸಿದರೆ ಉತ್ತಮ!

**ಕಾಫಿ ಕುಡಿಯುವುದು ಆರೋಗ್ಯಕ್ಕೆ ಉತ್ತಮ ವೆಂದು ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರಚಾರವಾಗುತ್ತಿದೆ. ದಿನವೊಂದಕ್ಕೆ ಎಷ್ಟು ಕಾಫಿ ಸೇವಿಸಬಹುದು ಎಂದು ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉಭಯ ವೈದ್ಯರು, ಕಾಫಿಯನ್ನು ದಿನಕ್ಕೆ 2–3 ಕಪ್‌ಗಳಿಗೆ ಸೀಮಿತಗೊಳಿಸಿದರೆ ಆರೋಗ್ಯಕ್ಕೆ ಉತ್ತಮ. ಹೆಚ್ಚು ಸೇವನೆ ಆರೋಗ್ಯ ಸಮಸ್ಯೆಗಳನ್ನು ಹುಟ್ಟಿಹಾಕುತ್ತದೆ ಎಂದು ಎಚ್ಚರಿಸಿದರು. ಮದ್ಯಪಾನ ಸೇವನೆ ಮಾಡುವ ಅಭ್ಯಾಸವನ್ನು ತೊರೆಯುವುದು ಉತ್ತಮ ಎಂದು ಸಲಹೆ ನೀಡಿದರು.**

## ಗುಂಡ್ಲುಪೇಟೆ: ಶಾಂತಿಯುತ ಹನುಮೋತ್ಸವ

# ಹನುಮಭಕ್ತರ ವಿರುದ್ಧ ಎಫ್ಐಆರ್



ಗುಂಡ್ಲುಪೇಟೆ: ಪಟ್ಟಣದಲ್ಲಿ ಇದೇ ಮೊದಲಬಾರಿಗೆ ಶಾಂತಿಯುತವಾಗಿ ಯಶಸ್ವಿಯಾಗಿ ಹನುಮೋತ್ಸವ ಆಚರಿಸಿ ಮುಂದಿನ ಬಾರಿ ಇನ್ನೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿದ್ದ ಹನುಮಭಕ್ತರ ವಿರುದ್ಧ ಎಫ್ ಐ ಆರ್ ದಾಖಲಿಸುವ ಮೂಲಕ ಪೊಲೀಸರು ಕಾನೂನು ಅಸ್ತ್ರ ಪ್ರಯೋಗಿಸಿದ್ದಾರೆ.

ಜೆಸಿಬಿಯ ಫಿಟ್ನೆಸ್ ಸರ್ಟಿಫಿಕೇಟ್ ಹಾಗೂ ಚಾಲಕನ ಪರವಾನಗಿ ದಾಖಲೆಗಳನ್ನು ಒದಗಿಸದಿರುವುದು ಹಾಗೂ 20 ಅಡಿಯ ಹನುಮ ಮೂರ್ತಿಯನ್ನ ಪ್ರದರ್ಶಿಸಿದ್ದು ಅಧಿಕ ಡೆಸಿಬಲ್ ಧ್ವನಿ ವರ್ಧಕ ಬಳಸಿದ್ದು, ನಿಗದಿತ ಸಮಯಕ್ಕಿಂತ ತಡವಾಗಿ ಮೆರವಣಿಗೆ ಆರಂಭ ಮಾಡಿದ್ದಕ್ಕೆ ಪಟ್ಟಣದ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್ಪೆಕ್ಟರ್ ಎನ್.ಜಯಕುಮಾರ್ ಅವರು ಹನುಮೋತ್ಸವದ ರೂವಾರಿಗಳಾದ ಪುರಸಭೆ ಸದಸ್ಯ ನಾಗೇಶ್, ಪ್ರಣಯ್, ಗೋವಿಂದರಾಜ್, ನಂದೀಶ್, ಶಶಿಕುಮಾರ್, ಚೆನ್ನಪ್ಪ, ಮಂಜು, ಧನುಷ್, ರವಿ, ಯೋಗೇಶ್ ಹಾಗೂ ದರ್ಶನ್ ಎಂಬ 11 ಜನರ ವಿರುದ್ಧ ಎಫ್.ಐ.ಆರ್ ದಾಖಲಿಸಿದ್ದಾರೆ.

ಡಿ.27ರಂದು ಪಟ್ಟಣದಲ್ಲಿ ಹನುಮಭಕ್ತರು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಶಾಂತಿಯುತವಾಗಿ ಹನುಮೋತ್ಸವ ಆಚರಿಸಿದ್ದರು. ಅದೇ ದಿನ ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿಯೂ ಹನುಮೋತ್ಸವ ನಡೆಯುತ್ತಿದ್ದರೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಅಪರ ವರಿಷ್ಠಾಧಿಕಾರಿ ಹಾಗೂ ಡಿವೈಎಸ್‌ಪಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಬೆಳಗಿನಿಂದಲೇ ಪಟ್ಟಣದಲ್ಲಿ ಬೀಡುಬಿಟ್ಟಿದ್ದರು. ಉತ್ಸವ ಶಾಂತಿಯುತವಾಗಿ ನಡೆದಿದ್ದರೂ ಸಂಜೆ ಡಿಜೆ ಇದ್ದ ಟ್ರಾ ?ಯಕ್ಟರ್ ವಶಕ್ಕೆ ಪಡೆದುಕೊಂಡಿದ್ದ ಪೊಲೀಸರು ಹನುಮನ ಮೂರ್ತಿಯನ್ನು ಸಹಾ ಜಪ್ತಿ ಮಾಡಲು ಉದ್ದೇಶಿಸಿದ್ದರೂ ಅದು ಹೊರಟುಹೋಗಿ ದ್ದರಿಂದ ಸಾಧ್ಯವಾಗಲಿಲ್ಲ. ಪೊಲೀಸರ ಕ್ರಮ ಖಂಡಿಸಿ ಯುವಕರು ಠಾಣೆ ಎದುರು ಪ್ರತಿಭಟನೆ ನಡೆಸಿದ ನಂತರ ಟ್ರಾ ?ಯಕ್ಟರ್ ಬಿಡುಗಡೆ ಮಾಡಲಾಗಿತ್ತು. ಯಾವುದೋ ಒತ್ತಡಕ್ಕೆ ಮಣಿದಿರುವ ಪೊಲೀಸರು ಯುವಕರನ್ನು ಹೆದರಿಸುವ ಸಲುವಾಗಿ ಪ್ರಕರಣ ದಾಖಲಿಸಿದ್ದಾರೆ. ಕಳೆದ ತಿಂಗಳು ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸಿ ಶಾಂತಿಯುತವಾಗಿ ಪಾದಯಾತ್ರೆ ನಡೆಸಿದ್ದರೂ ಪೊಲೀಸರು ಬಿಜೆಪಿ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಆದ್ದರಿಂದ ಈ ಬಗ್ಗೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಪುರಸಭೆ ಸದಸ್ಯ ನಾಗೇಶ್ ತಿಳಿಸಿದ್ದಾರೆ.



# ವಿದ್ಯಾರ್ಥಿಗಳೊಂದಿಗೆ ನೇರ ಪೋನ್ ಇನ್ ಕಾರ್ಯಕ್ರಮ ನಡೆಸಿದ ಶಾಸಕ




ಕೆ.ಆರ್.ಪೇಟೆ: ಸಾರ್ ಶಾಲೆಗೆ ಹೋಗಿ ಬರಲು ನಮಗೆ ಬಸ್ ವ್ಯವಸ್ಥೆ ಮಾಡಿಸಿಕೊಡಿ.... ಸಾರ್ ನಮ್ಮ ಶಾಲೆಗೆ ಹೋಗುವ ದಾರಿಯಲ್ಲಿ ಚಿರತೆ ಕಾಟ ಇದೆ ಶಾಲೆಗೆ ಹೋಗಲು ಭಯವಾಗುತ್ತಿದೆ ಚಿರತೆ ಹಿಡಿಯಲು ಆದೇಶ ಮಾಡಿ ಚಿರತೆ ಕಾಟ ತಪ್ಪಿಸಿ... ಸಾರ್ ನಮ್ಮೂರಿನ ರಸ್ತೆಗಳು ಗುಂಡಿ ಬಿದ್ದಿವೆ ಶಾಲೆಗೆ ಹೋಗಿ ಬರಲು ತೊಂದರೆಯಾಗುತ್ತಿದೆ ತಪ್ಪಿಸಿ.... ಪರೀಕ್ಷಾ ಕೇಂದ್ರದಲ್ಲಿ ಸಿ.ಸಿ ಟೀವಿ ಹಾಕಿಸಬೇಡಿ ಪರೀಕ್ಷೆ ಬರೆಯಲು ಭಯವಾಗುತ್ತದೆ ಸಾರ್..... ಹೀಗೆ ಹತ್ತು ಹಲವು ಪ್ರಶ್ನೆಗಳು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಂದ ಕ್ಷೇತ್ರದ ಶಾಸಕರಾದ ಹೆಚ್.ಟಿ.ಮಂಜು ಅವರಿಗೆ ಎದುರಾದವು.

ಕೆ.ಆರ್.ಪೇಟೆ ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಉತ್ತಮ ಪಡಿಸುವ ಸಂಬಂಧ 10ನೇ ತರಗತಿ ವಿದ್ಯಾರ್ಥಿಗಳೊಂದಿಗೆ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವ ವೇಳೆ ವಿದ್ಯಾರ್ಥಿಗಳಿಂದ ಕೇಳಿ ಬಂದ ಪ್ರಶ್ನೆಗಳಿವು. ವಿದ್ಯಾರ್ಥಿಗಳ ಎಲ್ಲಾ ಪ್ರಶ್ನೆಗಳಿಗೂ ಸುಮಾರು ಎರಡು ಗಂಟೆಗಳ ಕಾಲ ಉತ್ತರಿಸಿದ ಶಾಸಕರು ವಿದ್ಯಾರ್ಥಿಗಳು ಭಯ ಬಿಟ್ಟು ಧೈರ್ಯವಾಗಿ ಪರೀಕ್ಷೆ ಬರೆಯುವ ಛಲವನ್ನು ರೂಢಿಸಿಕೊಳ್ಳಬೇಕು. ತಮ್ಮ ಗುರುಗಳು ಹೇಳಿಕೊಟ್ಟ ಪಾಠಗಳನ್ನು ಪುನರ್ ಮನನ ಮಾಡಿಕೊಂಡು ಬರೆದು ಓದುವ ಅಭ್ಯಾಸ ಮಾಡಿಕೊಳ್ಳಬೇಕು. ಪರೀಕ್ಷೇಯಲ್ಲಿ ತಮಗೆ ಚನ್ನಾಗಿ ಗೊತ್ತಿರುವ ಪ್ರಶ್ನೆಗಳಿಗೆ ಮೊದಲು ಉತ್ತರ ಬರೆಯಬೇಕು. ನಂತರ ಗೊತ್ತಿಲ್ಲದ ಪ್ರಶ್ನೆಗಳಿಗೆ ಯೋಚಿಸಿ ಉತ್ತರಿಸಲು ಪ್ರಯತ್ನಿಸಬೇಕು. ಅಕ್ಷರಗಳನ್ನು ಗುಂಡಾಗಿ ಮುದ್ದಾಗಿ ಬರೆಯಬೇಕು. ಕಠಿಣ ಪರಿಶ್ರಮದಿಂದ ಓದಬೇಕು ಆದರೆ ಓದುತ್ತೇನೆ ಎಂದು ಊಟ, ನಿದ್ರೆ ಕಡಿಮೆ ಮಾಡಿ ಓದುವುದು ಬೇಡ. ಇದರಿಂದ ಪರೀಕ್ಷೆ ವೇಳೆ ಆರೋಗ್ಯ ಹದಗೆಡುವ ಸಾಧ್ಯತೆ ಇರುತ್ತದೆ. ಆದಷ್ಟು ಬೆಳಗಿನ ಜಾವ ಓದುವುದನ್ನು ರೂಢಿಸಿಕೊಳ್ಳಬೇಕು. ಮೊಬೈಲ್, ಫೇಸ್ ಬುಕ್, ವಾಟ್ಸಪ್ ನಿಂದ ದೂರವಿರಬೇಕು. ಅಗತ್ಯವಿದ್ದಲ್ಲಿ ಗೂಗಲ್ ಬಳಸಿ ತಮ್ಮ ಪರೀಕ್ಷೆಗೆ ಬೇಕಾದ ಸಂಶಯವನ್ನು ದೂರ ಮಾಡಿಕೊಳ್ಳಬೇಕು.ಪರೀಕ್ಷೆ ಸಂಬಂಧಿಸಿದ ಏನೇ ಸಮಸ್ಯೆಗಳು ಇದ್ದಲ್ಲಿ ತಮ್ಮ ಶಾಲಾ ಶಿಕ್ಷಕರನ್ನು ಬೇಟಿ ಮಾಡಿ ಬಗೆಹರಿಸಿಕೊಳ್ಳಬೇಕು. ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಗೂ ಮುನ್ನ 3ಭಾರಿ ಪೂರ್ವ ಸಿದ್ದತಾ ಪರೀಕ್ಷೆಗಳು ಇರುವುದರಿಂದ ಪರೀಕ್ಷೆಯ ಭಯಬಿಟ್ಟು ಪರೀಕ್ಷೆಯಲ್ಲಿ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಪರೀಕ್ಷಾ ಕೇಂದ್ರಗಳಲ್ಲಿ ನಮ್ಮ ತಾಲ್ಲೂಕಿನ ಶಿಕ್ಷಕರೇ ಇರುವ ಕಾರಣ ವಿದ್ಯಾರ್ಥಿಗಳು ಯಾವುದೇ ಭಯಪಟ್ಟುಕೊ ಳ್ಳುವುದು ಬೇಡ. ಕೆಲವರು ಸಿ.ಸಿ.ಟೀವಿ ಹಾಕಿರುತ್ತಾರೆ ಭಯ ಆಗುತ್ತೆ ಎನ್ನುವುದು ಸರಿಯಲ್ಲ. ಸಿ.ಸಿ. ಟೀವಿ ಅಳವಡಿಸುವುದು ಪಾರದರ್ಶಕ ಹಾಗೂ ಗುಣಮಟ್ಟದ ಪರೀಕ್ಷೆ ನಡೆಬೇಕೆಂಬ ಕಾರಣಕ್ಕೆ ರಾಜ್ಯದ ಎಲ್ಲಾ ಶಾಲೆಯ ಪರೀಕ್ಷಾ ಕೇಂದ್ರಗಳಲ್ಲಿಯೂ ಶಿಕ್ಷಣ ಇಲಾಖೆಯ ವತಿಯಿಂದ ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿಯೂ ಸಿ.ಸಿ. ಟೀವಿ ಅಳವಡಿಸಲಾಗುತ್ತದೆ. ಉತ್ತಮವಾಗಿ ಓದಿದರೆ ಯಾವ ಟೀವಿಯನ್ನಾದರೂ ಹಾಕಲಿ ನೀವು ಸುಲಭವಾಗಿ ಪರೀಕ್ಷೆ ಬರೆಯಬಹುದು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ.ತಿಮ್ಮೇಗೌಡ, ಶಿಕ್ಷಣ ಸಂಯೋಜಕರಾದ ಬಿ.ಕೆ.ಹರೀಶ್, ಎಂ.ಎಸ್.ಸುರೇಶ್, ನವೀನ್ ಕುಮಾರ್, ಕೃಷ್ಣನಾಯಕ್, ಜೆ.ಎಸ್.ಸುರೇಶ್, ಬಿ.ಆರ್.ಪಿ. ಮಂಜು, ಉದೇಶಗೌಡ, ಅಧೀಕ್ಷಕ ಲಕ್ಷ್ಮಿನಾರಾಯಣ್ ಉಪಸ್ಥಿತರಿದ್ದರು

# ಚಿರತೆ ದಾಳಿಗೆ ಮೇಕೆ ಸಾವು



ಗುಂಡ್ಲುಪೇಟೆ: ತಾಲ್ಲೂಕಿನ ಬೆಟ್ಟದಮಾದಳ್ಳಿ ಗ್ರಾಮದ ಶಂಕರ್ ಬಿನ್ ನಿಂಗಯ್ಯ ಎಂಬುವವರು ಜಮೀನಿನಲ್ಲಿ ಮೇಕೆಗಳನ್ನು ಮೇಯಿಸುವ ಸಂದರ್ಭದಲ್ಲಿ ಚಿರತೆ ದಾಳಿ ನಡೆಸಿ ಮೇಕೆಯನ್ನು ಕೊಂದುಹಾಕಿರುವ ಘಟನೆ ನಡೆದಿದೆ.

ಓಂಕಾರ್ ಅರಣ್ಯ ವ್ಯಾಪ್ತಿಯ ಸಿಬ್ಬಂಧಿಗಳು ಸ್ಥಳಕ್ಕೆ ಭೇಟಿ ನೀಡಿದರು ಸೂಕ್ತ ಪರಿಹಾರ ನೀಡುವಂತೆ ಹಾಗೂ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದರು.

# ಚಿಕ್ಕಲ್ಲೂರು ಜಾತ್ರೆಯಲ್ಲಿ ತಪಾಸಣೆ ಮಾಡದಂತೆ ಆಗ್ರಹ



ಚಾಮರಾಜನಗರ, ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರಿನಲ್ಲಿ ಜ.3ರಿಂದ 7ರವರೆಗೆ ನಡೆಯುವ ಜಾತ್ರೆಯಲ್ಲಿ ಪ್ರಾಣಿಬಲಿ ತಡೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಚೆಕ್‌ಪೋಸ್ಟ್ ಸ್ಥಾಪಿಸಿ ತಪಾಸಣೆ ಮಾಡಬಾರದು ಎಂದು ಮಂಟೇಸ್ವಾಮಿ ಪರಂಪರೆ ರಕ್ಷಣಾ ಹೋರಾಟ ಸಮಿತಿಯ ಅಧ್ಯಕ್ಷ ಉಗ್ರನರಸಿಂಹೇಗೌಡ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಚೆಕ್ ಪೋಸ್ಟ್ ಸ್ಥಾಪಿಸಿ ಭಕ್ತರನ್ನು ತಡೆದು ಅವರ ಸಾಮಾಗ್ರಿಗಳನ್ನು ಪರಿಶೀಲಿಸುವ ಮೂಲಕ ಭಕ್ತರಲ್ಲಿ ಭಯಭೀತಿ ಉಂಟು ಮಾಡಬಾರದು. ಜಾತ್ರೆಯಲ್ಲಿ ಪ್ರಾಣಿ ಬಲಿ ಇದೆ ಎಂದು ಅದನ್ನು ಜಿಲ್ಲಾಡಳಿತ ತಡೆಯಬೇಕೆಂದು ಯಾವುದೇ ವ್ಯಕ್ತಿ, ಸಂಘದ ಜಾತ್ರೆಯ ಸಮಯದಲ್ಲಿ ಜನಜಾಗೃತಿ ಹೆಸರಲ್ಲಿ ಜಾತ್ರೆಗೆ ಪ್ರವೇಶಿಸಲು ಅವಕಾಶ ಕಲ್ಪಿಸಬಾರದು. ಈ ಎಲ್ಲದರ ಬಗ್ಗೆ ಯಾರೂ ಹಸ್ತಕ್ಷೇಪ ಮಾಡದಿರುವಂತೆ 2017ರ ಮಧ್ಯಂತರ ಆದೇಶದಲ್ಲಿ ನ್ಯಾಯಾಲಯ ಸ್ಪಷ್ಟ ಹೇಳಿದೆ ಅದನ್ನು ಜಿಲ್ಲಾಡಳಿತ ಪಾಲಿಸಬೇಕು ಎಂದು ಒತ್ತಾಯಿಸಿದರು. ಜ.6 ರಂದು ನಡೆಯುವ ಪಂಕ್ತಿಸೇವೆಯಲ್ಲಿ ಪ್ರಾಣಿಬಲಿ ನಡೆಯುತ್ತದೆ ಎಂದು ಪ್ರಾಣಿದಯಾ ಸಂಘದವರು ತಪ್ಪಾಗಿ ಭಾವಿಸಿ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದಾರೆ.

ಈ ಸಂಬಂಧ ಹೈಕೋರ್ಟ್ 2017ರಲ್ಲಿ ಮಧ್ಯಂತರ ಆದೇಶ ನೀಡಿದ್ದು ಜಾತ್ರೆಯಲ್ಲಿ ಮಾಂಸಹಾರದ ಪಂಕ್ತಿಸೇವೆ ನಡೆಸುವ ಭಕ್ತರ ಅಚರಣೆಗೆ ಯಾರೂ ಅಡ್ಡಿ ಪಡಿಸಬಾರದು. ಪ್ರಾಣಿ ಬಲಿ ನಡೆಯುತ್ತಿದ್ದರೆ ಅದನ್ನು ಮಾತ್ರ ತಡೆಗಟ್ಟಬಹುದು ಎಂದು ತಿಳಿಸಿದೆ ಆಗಾಗಿ ಪಂಕ್ತಿಸೇವೆಗಯನ್ನು ಯಾರು ತಡೆಯಬಾರದು ಎಂದರು. ಸಾಹಿತಿ ಶಂಕನಪುರ ಮಹದೇವ ಮಾತ ನಾಡಿ, ಚಿಕ್ಕಲ್ಲೂರು ಜಾತ್ರೆ ಸಂಬಂಧ ಜಿಲ್ಲಾಡಳಿತ ಹೊರಡಿಸುವ ಮಾರ್ಗಸೂಚಿಯಲ್ಲಿ 2017ರ ಹೈಕೋರ್ಟ್ ಆದೇಶವನ್ನು ಸೇರಿಸಬೇಕು. ಮಂಟೇಸ್ವಾಮಿ ಪರಂಪರೆಯ ಭಕ್ತರ ಸಮಸ್ಯೆಗಳನ್ನು ಜನಪ್ರತಿನಿಧಿಗಳು, ಜಿಲ್ಲಾಡಳಿತ ಗಮನಹರಿಸದಿರುವುದು ಖಂಡನೀಯ. ಚಿಕ್ಕಲ್ಲೂರು ಜಾತ್ರೆಯಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿಸಮಿತಿಯ ಕಾರ್ಯದರ್ಶಿ ಶಂಭುಲಿಂಗಸ್ವಾಮಿ, ಡಾ.ವಿ.ಎನ್. ಮಹದೇವಯ್ಯ ಹಾಜರಿದ್ದರು.

# ಜಿಲ್ಲಾಧಿಕಾರಿಯಿಂದ ಕ್ಯಾಲೆಂಡರ್ ಬಿಡುಗಡೆ



ಚಾಮರಾಜನಗರ: ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಹೊರತಂದಿರುವ 2026ನೇ ಸಾಲಿನ ವಾರ್ಷಿಕ ಕ್ಯಾಲೆಂಡರನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್ ಬಿಡುಗಡೆ ಮಾಡಿ ಶುಭಕೋರಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆಯ ವಾರ್ಷಿಕ ಕ್ಯಾಲೆಂಡರನ್ನು ಬಿಡುಗಡೆ ಮಾಡಿ ಪದಾಧಿಕಾರಿಗಳಿಗೆ ಹೊಸವರ್ಷದ ಶುಭಾಯಶ ಕೋರಿದರು. ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಚಾ.ಗು.ನಾಗರಾಜು ಮಾತನಾಡಿ, ಕನ್ನಡ ಪರ ಸಂಘಟನೆ ಗಳಿಂದ ಗಡಿಜಿಲ್ಲೆಯಲ್ಲಿ ಕನ್ನಡ ಗಟ್ಟಿಯಾಗಿ ಉಳಿದಿದೆ. ನಾಡಿನ ಜನತೆಯ ಹೊಸ ವರ್ಷವೂ ಒಳಿತು ಮಾಡಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ, ಜಿ.ಪಂ.ಸಿಇಓ ಮೋನಾರೋತ್, ಉಪಾಧ್ಯಕ್ಷ ಮನಮೋಹನ್, ಜಿಲ್ಲಾಧ್ಯಕ್ಷ ಸಂತೋಷ್, ಖಜಾಂಚಿ ಅನುರಾಜ್‌ಗೌಡ, ಕಾರ್ಯದರ್ಶಿ ಸುನೀಲ್‌ಕುಮಾರ್, ಜಿಲ್ಲಾಧ್ಯಕ್ಷ ಹೊನ್ನಶೆಟ್ಟರಹುಂಡಿ ದೇವರಾಜು, ಸಿ. ಚನ್ನಬಸವಯ್ಯ, ಅಮಚವಾಡಿ ಕುಮಾರ್, ರವಿಚಂದ್ರಪ್ರಸಾದ್ ಕಹಳೆ, ನಾಗರಾಜು, ರಾಮು, ಸಿದ್ದು ಇತರರು ಹಾಜರಿದ್ದರು.

## ಶ್ರೀ ಮಲ್ಲಿಕಾರ್ಜುನ ಚಾರಿಟೇಬಲ್ ಟ್ರಸ್ಟ್ ನ

# ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ

ಕೆ.ಆರ್.ಪೇಟೆ: ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಒಬ್ಬ ವ್ಯಕ್ತಿಯಲ್ಲ ಸದೃಢ ಸಮಾಜದ ಶಕ್ತಿ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಸುಜೇಂದ್ರಕುಮಾರ್ ಹೇಳಿದರು.

ಪಟ್ಟಣದ ಜಯನಗರ ಬಡಾವಣೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್ ಕಚೇರಿಯಲ್ಲಿ ಶ್ರೀ ಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್ ನ 2026 ವರ್ಷದ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದರು ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಅವರು ಸುಮಾರು ನಾಲ್ಕು ವರ್ಷಗಳಿಂದ ಕೆ.ಆರ್.ಪೇಟೆ ತಾಲೂಕಿನಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥ ಸೇವೆಯಿಂದ ಜಾತಿ–ಭೇದ ತಿಳಿಯದೆ ಧ್ವನಿ ಇಲ್ಲದ ವರ್ಗದವರಿಗೆ ಧ್ವನಿಯಾಗಿ ಬಡವರಿಗೆ ದೀನ ದಲಿತರಿಗೆ,ವಿದ್ಯಾರ್ಥಿಗಳಿಗೆ,ಕ್ರೀಡಾಪಟುಗಳಿಗೆ,ನೂರಾರು ದೇವಾಲಯಗಳ ಜೀರ್ಣೋದ್ಧಾರಕ್ಕೆ ನಿರಂತರವಾಗಿ ಧನ ಸಹಾಯ ನೀಡುವ ಮೂಲಕ ಮಾನವೀಯತೆ ಮೆರೆದು ಉತ್ತಮ ಸಮಾಜ ಸೇವಕ ಎಂದು ಹೆಸರುಗಳಿಸಿದ್ದಾರೆ.ಎಂದು ತಿಳಿಸಿದರು.



ನಿವೃತ್ತ ಪತ್ರಾಂಕಿತ ವ್ಯವಸ್ಥಾಪಕ ಬಳ್ಳೆಕೆರೆ ಮಂಜುನಾಥ್ ಮಾತನಾಡಿದದರು. 2026ರ ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮದ ಶ್ರೀ ಕ್ಷೇತ್ರ ಪುರ ಗ್ರಾಮದಲ್ಲಿರುವ ಮಹದೇಶ್ವರ ದೇವಾಲಯದ ವ್ಯವಸ್ಥಾಪಕ ಪ್ರಧಾನ ಅರ್ಚಕ ಬಸಪ್ಪ ಅವರು ದಿವ್ಯ ಸಾನಿಧ್ಯ ವಹಿಸಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದ ಕೇಂದ್ರ ಬಿಂದು ಸಮಾಜ ಸೇವಕ ಆರ್ ಟಿ ಓ ಮಲ್ಲಿಕಾರ್ಜುನ್,ಶ್ರೀ ಧರ್ಮಸ್ಥಳ ಜಿಲ್ಲಾ ನಿರ್ದೇಶಕ ಯೋಗೀಶ್,ಕಸಾಪ ತಾ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ,ಡಾ.ರಾಮಕೃಷ್ಣೇಗೌಡ, ತಾ.ಪಂ.ಮಾಜಿ ಸದಸ್ಯ ನಂಜುಂಡೇಗೌಡ,ಗ್ಯಾಸ್ ರಾಜಶೇಖರ್, ಹೊಳೆನರಸೀಪುರ ಪುರಸಭೆ ಅಧ್ಯಕ್ಷ ಜಗನ್ನಾಥ್,ದುಂಡು ಶೆಟ್ಟಿವಂಶಸ್ಥ ವೆಂಕಟರಮಣ ಶೆಟ್ಟಿ,ನಿವೃತ್ತ ಪ್ರಾಂಶುಪಾಲಕೆ ಕಾಳೇಗೌಡ,ವಿಶ್ವಕರ್ಮ ಸಂಘದ ತಾಲ್ಲೂಕು ಅಧ್ಯಕ್ಷ ಕುಮಾರ್, ವಕೀಲ ಪ್ರಭಾಕರ್,ಜನಜಾಗೃತಿ ಜಿಲ್ಲಾ ಉಪಾಧ್ಯಕ್ಷೆ ನಳಿನಿ,ತಾಲ್ಲೂಕು ಎಸ್ಸಿ ಎಸ್ಟಿ ನೌಕರರ ಸಂಘದ ಅಧ್ಯಕ್ಷ ಹಳೆಯೂರು ಯೋಗೇಶ್,ಸ್ನೇಕ್ ರಂಗಸ್ವಾಮಿ,ನಿವೃತ್ತ ಪೊಲೀಸ್ ಅಧಿಕಾರಿ ಶಂಕರಲಿಂಗೇಗೌಡ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಧ್ಯಕ್ಷ ತಿಲಕರಾಜು, ಪ್ರಸಾದ್,ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಅವರ ಆಪ್ತ ಸಹಾಯಕ ಗಂಜೀಗೆರೆ ಮಹೇಶ್, ಪ್ರೇಮಕುಮಾರಿ,ಸೇರಿದಂತೆ ಉಪಸ್ಥಿತರಿದ್ದರು.

# ಸಿರಿಧಾನ್ಯಗಳ ಬಳಕೆ, ಮಹತ್ವವನ್ನು ಮುಂದಿನ ತಲೆಮಾರಿಗೆ ತಲುಪಿಸಿ: ಸಿಇಓ




**ಮಂಡ್ಯ:** ಸಿರಿಧಾನ್ಯಗಳ ಕುರಿತು ಮುಂದಿನ ಪೀಳಿಗೆಗೆ ತಿಳಿಸುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ಅವರು ಹೇಳಿದರು.

ಇಂದು ಕೃಷಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿ ಆಹಾರ ಮತ್ತು ಪೌಷ್ಠಿಕ ಭದ್ರತೆ (ನ್ಯೂಟ್ರಿ ಸಿರಿಧಾನ್ಯ) ಯೋಜನೆಯಡಿ "ಸಿರಿಧಾನ್ಯ ರೋಡ್ ಶೋ" ಮೂಲಕ ಮುಂದಿನ ಪೀಳಿಗೆಗೆ ಸಿರಿಧಾನ್ಯ ಬೆಳೆಗಳ ಬಗ್ಗೆ ಅರಿವು ಮೂಡಿಸುವ ಸಂಬಂಧ ಆಯೋಜಿಸಲಾಗಿದ್ದ "ಸಿರಿಧಾನ್ಯ ರೋಡ್ ಶೋ" ಕಾರ್ಯಕ್ರಮವನ್ನು ಹಸಿರು ಬಾವುಟ ಹಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಎಲ್ಲಾ ಹೆಣ್ಣು ಮಕ್ಕಳು ಸಿರಿಧಾನ್ಯಗಳನ್ನು ಬಳಸಿ ಆರೋಗ್ಯಕರವಾದ, ಪೌಷ್ಟಿಕತೆ ಹೆಚ್ಚಿಸುವ ಶುಚಿಯಾದ ರುಚಿಕರವಾದ ಅಡಿಗೆ ತಯಾರಿಸಬಹುದು ಎಂಬ ಪ್ರಯತ್ನ ನಡೆಯುತ್ತಿದೆ. ಹೊಸ ವರ್ಷಕ್ಕೆ ಸಿಹಿ ಹಂಚುವುದು ಪದ್ಧತಿ ಆ ದೃಷ್ಟಿಯಿಂದ ಮಂಡ್ಯ ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಜೀವನೋಪಾಯ ವಿಷನ್, ಕೃಷಿ ಇಲಾಖೆ ಒಟ್ಟುಗೂಡಿ ಸಾವಯವ ಕೃಷಿಯಿಂದ ಬೆಳೆದ ಸಿರಿಧಾನ್ಯಗಳ ತಿನಿಸುಗಳು 100 ರೂಪಾಯಿಯ ಒಳಗಡೆ ಸಾರ್ವಜನಿಕರಿಗೆ ಸೇರಬೇಕು ಎಂಬ ಯೋಚನೆಯಿಂದ ವಿಭಿನ್ನ ಪ್ರಯತ್ನ ಮಾಡಲಾಗಿದೆ ಎಂದರು.

ನೆನ್ನೆ ಸರಿಸುಮಾರು 450 ಕ್ಕೂ ಹೆಚ್ಚು ಆರ್ಡರ್ ದೊರಕಿದೆ. ಸರ್ಕಾರಿ ಇಲಾಖೆಗಳೆ ಇಂದು ಸಿರಿಧಾನ್ಯಗಳ ಮಹತ್ವವನ್ನು ತಿಳಿಸಲು ಹೊರಟಿದೆ. ಇದರಿಂದ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಸಹಾಯವಾಗಲಿದೆ. ನೈಸರ್ಗಿಕ ಕೃಷಿ ಮಾಡುತ್ತಿರುವ ರೈತರು ಒಗ್ಗೂಡಿದಾಗ, ಸಾಧಕ ಬಾಧಕಗಳನ್ನು ಹಂಚಿಕೆ ಮಾಡಿದಾಗ ಮಾತ್ರ ಸಾವಯವ ಕೃಷಿಗೆ ಪ್ರೇರಣೆ ದೊರೆಯುತ್ತದೆ. ಆತ್ಮಶ್ರೇಷ್ಠ ಕೃಷಿ ಪ್ರಶಸ್ತಿ ಪ್ರದಾನ ಮಾಡುವ ಸಂದರ್ಭದಲ್ಲಿ ನೈಸರ್ಗಿಕ ಕೃಷಿ ಕೃಷಿಕರಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿತ್ತು ಎಂದು ತಿಳಿಸಿದರು.

ನೈಸರ್ಗಿಕ ಕೃಷಿಕರ ಅನುಭವವನ್ನು ಇತರ ಕೃಷಿಕರಿಗೆ ತಿಳಿಸುವ ಪ್ರಯತ್ನ ಮಾಡಲಾಗಿದೆ. ಸಾವಯವ ಕೃಷಿಕರನ್ನು ಸೇರಿಸಿ ಕೃಷಿ ಸಖಿಯರಿಂದ ತರಬೇತಿಯನ್ನು ನೀಡಲಾಗಿದೆ. ಇದರ ಮೂಲ ಉದ್ದೇಶ ಮಂಡ್ಯ ಜಿಲ್ಲೆಯಲ್ಲಿ ಸುಮಾರು 4250 ಎಕ್ಕರೆ ಪ್ರದೇಶವನ್ನೂ ನಾವು ಸಾವಯವ ನೈಸರ್ಗಿಕ ಕೃಷಿಯ ಪದ್ಧತಿ ಅಡಿಯಲ್ಲಿ ತರುವುದಾಗಿದೆ. ಇಂದು ಸಣ್ಣ ಪ್ರಮಾಣದಲ್ಲಿ ಸದರಿ ಯೋಜನೆ ಪ್ರಾರಂಭವಾಗಿದೆ ಮುಂದಿನ ದಿನಗಳಲ್ಲಿ ಬೃಹದಾಕಾರವಾಗಿ ಬೆಳೆಯಬೇಕು. ಮಂಡ್ಯ ಜಿಲ್ಲೆ ನೈಸರ್ಗಿಕ ಕೃಷಿ ಪದ್ಧತಿಯತ್ತ ಹೋದಾಗ ಮಾತ್ರ ನಾವು ಸುಸ್ಥಿರ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ನೀರು ಫಲವತ್ತಾದ ಮಣ್ಣು ಎಲ್ಲರಿಗೂ ಸಿಗುವಂತದಲ್ಲ ಜಿಲ್ಲೆಗೆ ದೊರೆತಿರುವ ನೀರು, ಮಣ್ಣು ದೈವದತ್ತವಾಗಿ ಸಿಕ್ಕಿರುವ ವರ ಎನ್ನಬಹುದು. ಇವುಗಳನ್ನು ಉಳಿಸಿ ಬೆಳಸಿ ಮುಂದಿನ ಪೀಳಿಗೆಗೆ ನೀಡಬೇಕು. ನಮ್ಮ ಅಗತ್ಯಕ್ಕನುಗುಣವಾಗಿ ಸುಸ್ಥಿರವಾಗಿ ಬಳಕೆ ಮಾಡಿಕೊಂಡು ಮುಂದಿನ ಪೀಳಿಗೆಗೆ ಉಳಿಸಬೇಕು ಎಂದು ಕಿವಿಮಾತು ಹೇಳಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಮಾತನಾಡಿ ದೇಶಕ್ಕೆ ಆಹಾರ ಭದ್ರತಾ ದೊರಕಿದರೂ ರೈತರಿಗೆ ಆದಾಯ ಭದ್ರತೆ ದೊರತಿಲ್ಲ. ರೈತರ ಆದಾಯ ಉತ್ಪಾದನೆಯ ನಂತರದ ಕೃಷಿಯಲ್ಲಿ ಅಡಗಿದೆ. ಕೃಷಿಕರು ಕೇವಲ ಉತ್ಪಾದನೆಗೆ ಸೀಮಿತವಾಗದೆ ಕೃಷಿಯನ್ನು ಉದ್ಯಮ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಪ್ರಪ್ರಥಮವಾಗಿ ರಾಜ್ಯದಲ್ಲಿ ಮಂಡ್ಯ ರೈತ ಉತ್ಪಾದಕ ಕಂಪನಿಗಳು 500–600 ಟನ್ ಭತ್ತವನ್ನು ಖರೀದಿ ಮಾಡಿ "ರೈತರ ನಡೆ ಮಾರಾಟದ ಕಡೆ" ಎಂಬ ಘೋಷವಾಕ್ಯದ ಮುಖಾಂತರ ರೈತರಿಗೆ ಮಾರಾಟದ ಕಲೆಯನ್ನು ಕಲಿಸುವ ನಿಟ್ಟಿನಲ್ಲಿ ಹೆಜ್ಜೆ ಇಡಲಾಗಿದೆ ಎಂದು ಹೇಳಿದರು. ಸದರಿ ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸುನಿತಾ, ಪ್ರತಿಭಾ, ಹರ್ಷ, ಗಿರೀಶ್ ಗೌಡ ಹಾಗೂ ಮುಖಂಡರುಗಳಾದ ಸೋಮಶೇಖರ್ ಗೌಡ, ಕಾರಸವಾಡಿ ಮಹದೇವ, ಮಹೇಶ್ ಚಂದ್ರಗುರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಪೂರ್ವ ವಲಯದ ರಸ್ತೆ ಅಭಿವೃದ್ಧಿಗೆ ಆಗ್ರಹಿಸಿ ಸಹಿ ಸಂಗ್ರಹ



**ಮೈಸೂರು:** ನಗರದ ಮೈಸೂರು ಪೂರ್ವ ವಲಯದ ರಸ್ತೆಗಳ ಅಭಿವೃದ್ಧಿಗೆ ಆಗ್ರಹಿಸಿ ಸ್ಥಳೀಯರು ಸಹಿ ಸಂಗ್ರಹದ ಮೂಲಕ ವಿನೂತನ ಪ್ರತಿಭಟಿಸಿದರು.

ಈ ಸಂಬಂಧ ನಗರ ಬಿಜೆಪಿ ಯುವ ಮೋರ್ಚಾ ಕಾರ್ಯದರ್ಶಿ ಡಿ.ಲೋಹಿತ್ ಮಾತನಾಡಿ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ, ಜೆ ಎಸ್ ಎಸ್ ಬಡಾವಣೆ ಎರಡನೇ ಹಂತ, ಶ್ರೀನಿವಾಸ್ ಐಪಿಎಸ್ ನಗರ,ವಸಂತ ನಗರ, ನೇತಾಜಿ ನಗರ,ಕೊಳ್ಳೇಗಾಲ ಬಡಾವಣೆ,ಕೆ ಎಸ್ ಆರ್ ಟಿ ಸಿ ಬಡಾವಣೆ, ಗುರು ಮಲ್ಲೇಶ್ವರ ಬಡಾವಣೆ, ಸಖಿದಾಯಿ, ಸಹೃದಯ, ಇನ್ನಿತರ ಮುಂತಾದ ಬಡಾವಣೆಗಳಿಗೆ ಮನೆ ಮನೆಗಳ ಮುಂದೆ ರಸ್ತೆಗಳೇ ಇಲ್ಲದೆ ವಯಸ್ಸಾದವರು,ಶಾಲ ಮಕ್ಕಳು ಓಡಾಡಲು ತೀವ್ರ ತೊಂದರೆಯಾಗುತ್ತಿದೆ.

ಅಲ್ಲದೆ ಅನೇಕರು ಬಿದ್ದು ಕೈಕಾಲು ಮುರಿದು ಕೊಂಡಿದ್ದಾರೆ, ಮತ್ತು ಸಿಹಿನೀರು ಇನ್ನೂ ಕೂಡ ಬಾರದೆ ತುಂಬಾ ನೀರಿಗಾಗಿ ಆಹಾಕಾರ ಉಂಟಾಗಿದೆ ಅನೇಕ ಬಾರಿ ಅಧಿಕಾರಿಗಳಿಗೆ ತಾಕೀತು ಮಾಡಲಾಗಿದ್ದರೂ ಸಹ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮನೆ ಮನೆಗೆ ತೆರಳಿ ಸಹಿ ಸಂಗ್ರಹ ಅಭಿಯಾನವನ್ನು ಮಾಡಲಾಗಿದೆ. ಬಳಿಕ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಕೋರಲಾಗುವುದು ಎಂದರು.

# ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜೆ

**ಕೆ.ಆರ್.ನಗರ:** ಪಟ್ಟಣದ ಶ್ರೀ ಸತ್ಯನಾರಾಯಣಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿತ್ತು.

ಪ್ರತಿವರ್ಷಕ್ಕಿಂತ ಈ ವರ್ಷ ವೈಕುಂಠ ಏಕಾದಶಿಯನ್ನು ಅತ್ಯಂತ ಸಡಗರ ಸಂಭ್ರಮದಿಂದ ಶ್ರೀ ಸತ್ಯನಾರಾಯಣಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ಈ ಬಾರಿಯ ವೈಕುಂಠ ಏಕಾದಶಿ ದೇವರ ದರ್ಶನಕ್ಕೆ ದೇವಾಲಯದ ಆವರಣವನ್ನು ವಿವಿಧ ಹೂಗಳಿಂದ ಮದುವಣಗಿತ್ತಿಯಂತೆ ಅಲಂಕಾರಗೊಳಿಸಲಾಗಿತ್ತು. ಮತ್ತು ಭಕ್ತಾಧಿಗಳ ಪ್ರವೇಶಕ್ಕೆ ವಿಶೇಷ 5 ದ್ವಾರಗಳನ್ನು ವಿಶೇಷವಾಗಿ ನಿರ್ಮಿಸಲಾಗಿತ್ತು.

ಬೆಳಿಗ್ಗಿನ ಜಾವ ಸುಮಾರು 6 ಗಂಟೆಯ ಸಮಯದಲ್ಲಿ ಸಂಘದ ಅಧ್ಯಕ್ಷರ ಮತ್ತು ಪದಾಧಿಕಾರಿಗಳ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿಸಿ ಮಹಾಮಂಗಳಾರತಿ ನೆರವೇರಿಸಿ ವೈಕುಂಠ ಏಕಾದಶಿ ದರ್ಶನಕ್ಕೆ ಚಾಲನೆ ನೀಡಲಾಯಿತು. ಭಕ್ತರು ಸರದಿ ಸಾಲಿನಲ್ಲಿ ನಿಂತು ಭಕ್ತಿಯಿಂದ ಪೂಜಾ ಕಾರ್ಯವನ್ನು ನೆರವೇರಿಸಿದರು. ಪಟ್ಟಣದ ಸನ್ಯಾಸಿ ಪಾರ್ಕಿನಲ್ಲಿರುವ ಶ್ರೀ ಸತ್ಯನಾರಾಯಣಸ್ವಾಮಿ ದೇವಾಲಯದಲ್ಲಿ ಸಾವಿರಾರು ಭಕ್ತರು ತಮ್ಮ ಕುಟುಂಬ ಸಮೇತರಾಗಿ ಬಂದು ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು. ಬಂದ ಭಕ್ತಾದಿಗಳಿಗೆಲ್ಲರಿಗೂ ದೇವಸ್ಥಾನದ ವತಿಯಿಂದ ಹಾಗೂ ಸೇವಾರ್ಥದಾರರಿಂದ ಪ್ರಸಾದ ವಿನಿಯೋಗವನ್ನು ಮಾಡಲಾಗಿತ್ತು. ಕೆ.ಆರ್.ನಗರ ಪಟ್ಟಣದ ಜನತೆ ಭಕ್ತಿ ಪೂರ್ವಕವಾಗಿ ವೈಕುಂಠ ಏಕಾದಶಿಯನ್ನು ಆಚರಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರಾದ ಲೋಕೇಶ್, ಉಪಾಧ್ಯಕ್ಷ ರಂಗಸ್ವಾಮಿ, ಕಾರ್ಯದರ್ಶಿ ರುಕ್ಮಾಂಗದ, ಖಜಾಂಚಿ ಗಣೇಶ್‌ಕುಮಾರ್, ಗೌರವ ಅಧ್ಯಕ್ಷರಾದ ಶ್ರೀನಿವಾಸ, ಸಹಕಾರ್ಯದರ್ಶಿ ಸ್ಪಿನ್‌ಕೃಷ್ಣ, ನಿರ್ದೇಶಕರಾದ ಮಂಜುನಾಥ್, ಹರೀಶ್, ಗಿರಿಶ್, ರಾಘವೇಂದ್ರ, ಅರ್ಚಕರಾದ ಪದ್ಮನಾಭ, ನಾಗಲಕ್ಷ್ಮಿ, ಸ್ಪಿನ್‌ಅಶ್ವಿನಿ, ಬಸಂತ್, ಅನು, ಮಯೂರ್, ಪ್ರತಿಜ್ಞಾ ಸೇರಿದಂತೆ ಶ್ರೀ ಸತ್ಯನಾರಾಯಣ ಸ್ವಾಮಿ ದೇವಸ್ಥಾನ ಸಮಿತಿಯ ಸದಸ್ಯರು ಮತ್ತು ಸಮಾಜದ ಬಂಧುಗಳು ಹಾಜರಿದ್ದರು.

# ನಮ್ಮೂರಿನ ಶಾಲೆಗಳು ಮಕ್ಕಳ ಜ್ಞಾನದ–ಅನ್ನದ ಶಾಲೆಗಳಾಗಿವೆ: ಅಡಗೂರು ಹೆಚ್.ವಿಶ್ವನಾಥ್



**ಕೆ.ಆರ್.ನಗರ:** ಯಾವ ದೇಶ ಅಥವಾ ರಾಜ್ಯದಲ್ಲಿ ಅಕ್ಷರ ಮತ್ತು ಆರೋಗ್ಯಕ್ಕೆ ಕೊರತೆ ಇರುತ್ತದೆಯೋ ಅವು ಉದ್ದಾರವಾಗಲ್ಲ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಹೇಳಿದರು.

ಅವರು ತಾಲೂಕಿನ ಕೆಡಗ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ರಜತ ಮಹೋತ್ಸವ ಮತ್ತು ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ನಮ್ಮೂರಿನ ಶಾಲೆಗಳು ಮಕ್ಕಳ ಜ್ಞಾನದ ಹಾಗೂ ಅನ್ನದ ಶಾಲೆಗಳಾಗಿವೆ. ಎಲ್ಲಾ ಧರ್ಮ, ಜಾತಿ, ಜನಾಂಗ, ಭಾಷಿಕರ ಮಕ್ಕಳಿಗೆ ಶಾಲೆಯೇ ದೇವಸ್ಥಾನವೆಂದರು. ಈ ಹಿಂದೆ ಶಾಲೆಗೆ ಬರಲು ಮಕ್ಕಳಿಗೆ ಅನ್ನ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಶಾಲೆಗೆ ಅವರು ಹೇಗೆ ಬರುತ್ತಾರೆ. ಇಂತಹ ಘಟನೆಗಳನ್ನು ಕಣ್ಣಾರೆ ಕಂಡು ಶಿಕ್ಷಣ ಸಚಿವನಾಗಿದ್ದಾಗ 2001ರಲ್ಲಿ ಬಿಸಿಯೂಟ ಯೋಜನೆಯನ್ನು ಜಾರಿಗೆ ತರಲಾಯಿತು. ಅದರ ಮೂಲಕ ರಾಜ್ಯದಲ್ಲಿ 84 ಲಕ್ಷ ಮಕ್ಕಳು ಶಾಲೆಯಲ್ಲಿ ಊಟ ಮಾಡುತ್ತಿದ್ದಾರೆ. ಅದರ ಜೊತೆಯಲ್ಲಿ ಒಂದು ಲಕ್ಷದ ಮೂವತ್ತ ಮೂರು ಸಾವಿರ ಜನರಿಗೆ ಉದ್ಯೋಗ ದೊರಕಿದೆ ಎಂದರು. ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ ರಾಜ್ಯದಲ್ಲೆಡೆ ಶಾಲಾ–ಕೊಠಡಿಗಳ ನಿರ್ಮಾಣ, ಶಿಕ್ಷಕರ ನೇಮಕ, ಶೌಚಾಲಯ, ನೈರ್ಮಲ್ಯ ವ್ಯವಸ್ಥೆಯನ್ನು ಮಾಡಲಾಯಿತು. ಜೊತೆಗೆ ಶಾಲೆಯ ಅಭಿವೃದ್ಧಿಯಲ್ಲಿ ಸಮುದಾಯದವರು ಪ್ರಮುಖ ಪಾತ್ರ ವಹಿಸಬೇಕು ಎಂಬ ನಿಟ್ಟಿನಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸಲಾಯಿತು ಎಂದರು. ಅಕ್ಷರ ಕಲಿತ ಶಾಲೆ, ಕಲಿಸಿದ ಗುರುಗಳನ್ನು ಯಾರು ಕೂಡ ಜೀವನಪರ್ಯಂತ ಮರೆಯಲ್ಲ. ಆ ನಿಟ್ಟಿನಲ್ಲಿ ಅಂತಹ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳು ಆ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ನಾವೆಲ್ಲರೂ ಕೂಡ ಜನತಂತ್ರ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಆದರೆ ಇದನ್ನು ಯಾರು ಕೂಡ ಹೇಳಿಕೊಡುತ್ತಿಲ್ಲ. ಇದನ್ನು ಹೇಳಿಕೊಡಬೇಕಾದಂತಹ ಅಗತ್ಯತೆ ಇದೆ ಎಂದರು.

ನಾನು ಸಹಕಾರ ಸಚಿವನಾಗಿದ್ದಾಗ ತಾಲೂಕಿನಲ್ಲಿ 32 ಸಹಕಾರ ಸಂಘಗಳು ಬಾಗಿಲು ಮುಚ್ಚಿದ್ದವು ನಾನು ಮತ್ತೆ ಅವುಗಳನ್ನು ಆರಂಭಿಸಿ ಅದರ ಮೂಲಕ ತಾಲೂಕಿನ ರೈತರುಗಳಿಗೆ ಅನುಕೂಲ ಕಲ್ಪಿಸುವ ಕಾರ್ಯವನ್ನು ಮಾಡಲಾಯಿತು ಎಂದರು.

ತಾಲೂಕಿನ ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ನಾನು ಅಧಿಕಾರದಲ್ಲಿ ಇರುವವರೆಗೂ ಒಂದು ದಿನವು ಬಾಗಿಲನ್ನು ಹಾಕಲು ಬಿಟ್ಟರಲಿಲ್ಲ. ಆದರೆ ಈಗ ಆ ಕಾರ್ಖಾನೆಯ ಬಾಗಿಲನ್ನು ಹಾಕಿ ಎಷ್ಟು ವರ್ಷಗಳಾಗಿವೆ. ಆ ಕಾರ್ಖಾನೆಯನ್ನು ಆರಂಭಿಸುವ ಮೂಲಕ ಈ ಭಾಗದ ರೈತರುಗಳಿಗೆ ಅನುಕೂಲ ಕಲ್ಪಿಸಿ ಕೊಡಬೇಕು ಎಂದರು. ಮಹಾರಾಜರನ್ನು ನಾವುಗಳು ಎಂದಿಗೂ ಮರೆಯುವಂತಿಲ್ಲ. ಚಾಮರಾಜ ಮತ್ತು ಕೃಷ್ಣರಾಜ ಅಣೆಕಟ್ಟುಗಳನ್ನು ಕಟ್ಟಿದ ಮಹಾನ್ ಪುರುಷರು ಅವರುಗಳು. ಅವರು ನೀರು ಕೊಟ್ಟಿದ್ದರಿಂದ ನಮ್ಮೆಲ್ಲರಿಗೂ ಅನ್ನ, ಶಿಕ್ಷಣ, ಉದ್ಯೋಗ ದೊರೆಯಿತು ಎಂದರು.

ಡಿ.ದೇವರಾಜ ಅರಸು ರವರು ನಮ್ಮ ಗುರುಗಳು. ಇವರು ಈ ನಾಡಿನ ಜನರಿಗೆ ಭೂ ಸುಧಾರಣೆ ಕಾಯ್ದೆಯನ್ನು ಜಾರಿ ಮಾಡುವ ಮೂಲಕ 21 ಲಕ್ಷ ಎಕರೆ ಭೂಮಿಯನ್ನು ಜನರಿಗೆ ಕೊಟ್ಟಂತಹ ಧೀಮಂತ ನಾಯಕರು ಎಂದರು. ಇಂತಹ ಮಹನೀಯರುಗಳನ್ನು ಸರ್ವರು ಸದಾ ಸ್ಮರಿಸಬೇಕು ಎಂದರು.

ಕ್ಷೇತ್ರದಲ್ಲಿ ಜನರು ರಾಜಕಾರಣವನ್ನು ಇಂದಿಗೂ ಕೂಡ ಸರಿಯಾಗಿ ತಿಳಿದುಕೊಂಡಿಲ್ಲ. ಯಾರನ್ನು ಗೆಲ್ಲಿಸಬೇಕು, ಯಾರು ನಮ್ಮ ಕೆಲಸ ಮಾಡುತ್ತಾರೆ ಎಂಬುದನ್ನು ಇಲ್ಲಿಯವರೆಗೂ ತಿಳಿದುಕೊಂಡಿಲ್ಲ. ನಾನು ಶಿಕ್ಷಣ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಅತಿ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರು ಕೂಡ ನನ್ನನ್ನು ಸೋಲಿಸಿದರು ಎಂದರು.


ಯಾವುದೇ ಜನಪ್ರತಿನಿಧಿಗಳು ಇನ್ನೊಂದು ಬಾರಿ ಜನರು ನನಗೆ ಓಟು ಹಾಕಬೇಕು ಅಂತ ಕೆಲಸ ಮಾಡುವುದಲ್ಲ, ಗೆಲ್ಲುತ್ತೇನೆ ಎಂದು ಕೆಲಸ ಮಾಡೋದು ಅಲ್ಲ. ಜನರು ನಮ್ಮನ್ನು ಗೆಲ್ಲಿಸಿದ್ದಾರೆ ಅದರ ಜವಾಬ್ದಾರಿಯನ್ನು ಅರಿತು ಅವರವರ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದರು.

ಶಾಸಕ ಡಿ.ರವಿಶಂಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಶಾಲೆಯು 25 ವಸಂತಗಳನ್ನು ಪೂರೈಸಿರುವ ಸವಿನೆನಪಿಗಾಗಿ ಶಾಲೆಯಲ್ಲಿ ಸಭಾಂಗಣ ನಿರ್ಮಾಣ ಮಾಡುವ ಕಾರ್ಯವನ್ನು ಮಾಡಲಾಗುವುದು ಎಂದರು. ಶಾಲೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುವುದು. ವಿದ್ಯಾರ್ಥಿಗಳು ಶಾಲೆಯಲ್ಲಿ ದೊರಕುವ ಎಲ್ಲಾ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಚೆನ್ನಾಗಿ ಕಲಿತು ಉನ್ನತ ಸ್ಥಾನಮಾನಗಳನ್ನು ಅಲಂಕರಿಸುವ ಮೂಲಕ ಕಲಿತ ಶಾಲೆಗೆ, ಗುರುಗಳಿಗೆ, ಹೆತ್ತವರಿಗೆ ಹಾಗೂ ಹುಟ್ಟಿದ ಊರಿಗೆ ಕೀರ್ತಿ ತರಬೇಕು ಎಂದು ಕರೆ ನೀಡಿದರು.

ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ನಾನು ಶಾಸಕನಾದ ಮೊದಲ ವಿಧಾನಸಭಾ ಅಧಿವೇಶನದಲ್ಲಿಯೇ ಇದರ ಬಗ್ಗೆ ಚರ್ಚಿಸಿ ಅದನ್ನು ಪ್ರಾರಂಭಿಸಲು ಟೆಂಡರ್ ಮಾಡಿಸಿ ಅಗ್ರಿಮೆಂಟ್ ಮಾಡಿಸಲಾಗಿದೆ. ಮುಂದಿನ ಸಾಲಿನಲ್ಲಿ ಕಾರ್ಖಾನೆಯನ್ನು ಆರಂಭಿಸುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಅವರೊಂದಿಗೆ ಚರ್ಚಿಸಿ ಅವರಲ್ಲಿ ಮನವಿ ಮಾಡಿ ಕಾರ್ಖಾನೆಯನ್ನು ಆರಂಭಿಸುವ ಮೂಲಕ ಈ ಭಾಗದ ರೈತರುಗಳಿಗೆ ಅನುಕೂಲ ಮಾಡಿಕೊಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸ್ವರ್ಣ ಪದಕ ಪುರಸ್ಕೃತ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ಕೆ.ಪಿ.ಗುರುಪ್ರಸಾದ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಮಧುಸೂದನ್, ನಿವೃತ್ತ ಬ್ಯಾಂಕ್ ಅಧಿಕಾರಿ ಸೋಮಶೇಖರ್, ನಿವೃತ್ತ ಶಿಕ್ಷಕರು, ಮಾಜಿ ಸೈನಿಕರು, ವಿವಿಧ ಕ್ಷೇತ್ರದ ಸಾಧಕರುಗಳು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬಿಇಓ ಆರ್.ಕೃಷ್ಣಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಬಿ.ನಟರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಸಹಕಾರ ವಿಭಾಗದ ಅಧ್ಯಕ್ಷ ಪಶುಪತಿ ತೇಜೋಮೂರ್ತಿ, ನಗರಾಧ್ಯಕ್ಷ ಪ್ರಭಾಕರ್, ತಾ.ಪಂ. ಮಾಜಿ ಅಧ್ಯಕ್ಷೆ ಶಿವಮ್ಮ, ಮಾಜಿ ಸದಸ್ಯ ಎಲ್.ಎಂ.ಸಣ್ಣಪ್ಪ, ಗ್ರಾ.ಪಂ. ಅಧ್ಯಕ್ಷ ಜಗದೀಶ್, ಮಾಜಿ ಅಧ್ಯಕ್ಷ ಸರಗೂರು ಶಿವು, ಮುಖ್ಯ ಶಿಕ್ಷಕ ಅರುಣ್, ಎಸ್ ಡಿ ಎಂ ಸಿ ಅಧ್ಯಕ್ಷ ನಾಗರಾಜು, ಮುಖಂಡರುಗಳಾದ ಮೋಗಣ್ಣಶೆಟ್ಟಿ, ಸೋಮಶೇಖರ್, ರಾಜಶೇಖರ್, ಚಂದ್ರೇಗೌಡ, ಸಿದ್ದರಾಜು, ವೀರಭದ್ರಪ್ಪ, ದೇವರಾಜು, ಶಿಕ್ಷಕರುಗಳಾದ ಮಹೇಶ್, ಲೋಕೇಶ್, ಗಣೇಶ್, ರಮೇಶ್, ನಂದಿನಿ, ಲಕ್ಷ್ಮಿ, ನಿಶ್ಚಿತ, ಬೃಂದಾ, ಎಸ್ ಡಿ ಎಂ ಸಿ ಸಮಿತಿಯವರು, ವಿದ್ಯಾರ್ಥಿಗಳು, ಜನಪ್ರತಿನಿಧಿಗಳು, ಮುಖಂಡರುಗಳು, ಗ್ರಾಮಸ್ಥರು ಇದ್ದರು.

# ಢಾಕಾ: ಖಲೀದಾ ಜಿಯಾ ಅಂತ್ಯಕ್ರಿಯೆಯಲ್ಲಿ ಜೈಶಂಕರ್ ಭಾಗಿ; ಕುಟುಂಬ ಭೇಟಿಯಾಗಿ ಸಾಂತ್ವನ



**ಢಾಕಾ:** ವಯೋಸಹಜ ಕಾಯಿಲೆಯಿಂದ ಮಂಗಳವಾರ ನಿಧನರಾದ ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿ ಹಾಗೂ ಬಿಎನ್‌ಪಿ ಪಕ್ಷದ ನಾಯಕಿ ಬೇಗಂ ಖಲೀದಾ ಜಿಯಾ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಭಾರತದ ವಿದೇಶಾಂಗ ಸಚಿವ ಡಾ. ಎಸ್ ಜೈಶಂಕರ್ ಅವರು ಬುಧವಾರ ಢಾಕಾಗೆ ಆಗಮಿಸಿದ್ದಾರೆ.

ಢಾಕಾದಲ್ಲಿ ಖಲೀದಾ ಜಿಯಾ ಅವರ ಕುಟುಂಬವನ್ನು ಭೇಟಿಯಾಗಿ ಸಾಂತ್ವನ ಹೇಳಿದ ಜೈಶಂಕರ್, ಬಿಎನ್‌ಪಿ ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಅವರಿಗೆ ಪ್ರಧಾನಿ ಮೋದಿ ಅವರು ಬರೆದ ಸಂತಾಪ ಸೂಚಕ ಪತ್ರವನ್ನು ಹಸ್ತಾಂತರಿಸಿದರು.

"ಢಾಕಾಗೆ ಆಗಮಿಸಿದ ನಂತರ ಬಿಎನ್‌ಪಿ ಹಂಗಾಮಿ ಅಧ್ಯಕ್ಷ ಮತ್ತು ಬಾಂಗ್ಲಾದೇಶದ ಮಾಜಿ ಪ್ರಧಾನಿ ಬೇಗಂ ಖಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಅವರನ್ನು ಭೇಟಿಯಾಗಿ ಸಾಂತ್ವನ ಹೇಳಿದೆ" ಎಂದು ಜೈಶಂಕರ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಬರೆದ ವೈಯಕ್ತಿಕ ಪತ್ರವನ್ನು ತಾರಿಕ್ ರೆಹಮಾನ್ ಅವರಿಗೆ ಹಸ್ತಾಂತರಿಸಿರುವುದಾಗಿ ಅವರು ಹೇಳಿದ್ದಾರೆ. ಅಲ್ಲದೆ ಭಾರತ ಸರ್ಕಾರ ಮತ್ತು ಜನರ ಪರವಾಗಿ ಆಳವಾದ ಸಂತಾಪ ವ್ಯಕ್ತಪಡಿಸಲಾಯಿತು" ಎಂದು ಜೈಶಂಕರ್ ತಿಳಿಸಿದ್ದಾರೆ.

"ಬೇಗಂ ಖಲೀದಾ ಜಿಯಾ ಅವರ ದೃಷ್ಟಿಕೋನ ಮತ್ತು ಮೌಲ್ಯಗಳು ನಮ್ಮ ಪಾಲುದಾರಿಕೆಯ ಅಭಿವೃದ್ಧಿಗೆ ಮಾರ್ಗದರ್ಶನ ನೀಡುತ್ತವೆ" ಎಂದು ಅವರು ಹೇಳಿದರು.

ಖಲೀದಾ ನಿಧನಕ್ಕೆ 3 ದಿನ ಶೋಕಾಚರಣೆ

ಮಾಜಿ ಪ್ರಧಾನಿ ಬೇಗಂ ಖಲೀದಾ ಜಿಯಾ ನಿಧನ ಬೆನ್ನಲ್ಲೆ, ಬಾಂಗ್ಲಾದೇಶದಲ್ಲಿ 3 ದಿನಗಳ ರಾಷ್ಟ್ರೀಯ ಶೋಕಾಚರಣೆಯನ್ನು ಯುನಸ್ ನೇತೃತ್ವ ಮಧ್ಯಂರತ ಸರ್ಕಾರ ಘೋಷಣೆ ಮಾಡಿದೆ.

ಇನ್ನು, ಖಲೀದಾ ಜಿಯಾ ಅವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಢಾಕಾದ ರಾಷ್ಟ್ರೀಯ ಸಂಸತ್ತಿನ ದಕ್ಷಿಣ ಪ್ಲಾಜಾದಲ್ಲಿ ನಡೆಯಲಿದ್ದು, ಸಕಲ ಸರ್ಕಾರಿ ಗೌರವಗಳ ನೆರವೇರಿಸಲಾಗುತ್ತದೆ.

# ವೈಕುಂಠ ಏಕಾದಶಿ: ವೆಂಕಟರಮಣಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ



ಕೆ.ಆರ್.ಪೇಟೆ: ವೈಕುಂಠ ಏಕಾದಶಿಯ ತಾಲ್ಲೂಕಿನ ವಿವಿಧೆಡೆ ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಶ್ರೀ ಚನ್ನಕೇಶವ, ಶ್ರೀ ಭೂವರಹನಾಥ ದೇವಾಲಯಗಳಲ್ಲಿ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಅನ್ನಸಂತರ್ಪಣಾ ಕಾರ್ಯಕ್ರಮಗಳು ಸಡಗರ ಸಂಭ್ರಮದಿಂದ ನಡೆದವು.

ಅಗ್ರಹಾರಬಾಚಹಳ್ಳಿ: ತಾಲ್ಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಶ್ರೀ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ನಡೆದ ವೈಕುಂಠ ಏಕಾದಶಿ ಕಾರ್ಯಕ್ರಮದಲ್ಲಿ ನಡೆದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಪಾಂಡವಪುರ ಉಪವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್, ಗ್ರಾ.ಪಂ.ಅಧ್ಯಕ್ಷ ಎ.ಸಿ.ದಿವಿಕುಮಾರ್, ಪಿಡಿಓ ಶಿಲ್ಪ, ರಾಜಸ್ವ ನಿರೀಕ್ಷಕ ಜ್ಞಾನೇಶ್, ಗ್ರಾಮ ಲೆಕ್ಕಾಧಿಕಾರಿ ಪ್ರಶಾಂತ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಶಾಸಕರ ಸಹೋದರ ಟಿಎಪಿಸಿಎಂಎಸ್ ನಿರ್ದೇಶಕರಾದ ಹೆಚ್.ಟಿ.ಲೋಕೇಶ್, ಆನೆಗೊಳ ಬಿ.ಎಂ.ಕಿರಣ್, ಜ್ಯೋತಿದೇವರಾಜು, ಗ್ರಾ.ಪಂ. ಮಾಜಿ ಅಧ್ಯಕ್ಷ ಚಿಕ್ಕೋಸಹಳ್ಳಿ ರಮೇಶ್, ಸೊಸೈಟಿ ನಿರ್ದೇಶಕರಾದ ಚೆಲುವರಾಜು, ಸೊಸೈಟಿ ಮಾಜಿ ಅಧ್ಯಕ್ಷ ಚಿಕ್ಕೋಸಹಳ್ಳಿ ಸುರೇಶ್, ಕಾರ್ಯದರ್ಶಿ ರಾಮಸ್ವಾಮಿ, ಮಾತೃಭೂಮಿ ವೃದ್ಧಾಶ್ರಮದ ಮುಖ್ಯಸ್ಥ ಜೈಹಿಂದ್ ನಾಗಣ್ಣ ಸೇರಿದಂತೆ ಹಲವು ಗಣ್ಯರು, ಶ್ರೀ ಚನ್ನಕೇಶವಸ್ವಾಮಿ ದೇವಾಲಯ ಸಮಿತಿಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು, ಗ್ರಾಮದ ಸಾವಿರಾರು ಭಕ್ತಾದಿಗಳು ಭಾಗವಹಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕಾರ ಮಾಡಿದರು. ಮುಂಜಾನೆ 5ಗಂಟೆಯಿಂದ ರಾತ್ರಿ 7.30ಗಂಟೆಯವರೆವಿಗೂ ಶ್ರೀ ಚನ್ನಕೇಶವಸ್ವಾಮಿಗೆ ವಿಶೇಷ ಪೂಜೆ ನಡೆಯಿತು. ವೈಕುಂಠ ಏಕಾದಶಿ ಅಂಗವಾಗಿ ದೇವರಿಗೆ ವಿವಿಧ ಬಗೆಯ ಅಭಿಷೇಕ, ಪಂಚಾಮೃತ ಅಭಿಷೇಕ ಮಾಡಲಾಯಿತು. ನಂತರ ಬಗೆ ಬಗೆಯ ಪುಷ್ಪಾಲಂಕಾರ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ನಡೆದವು. ಬೆಳಿಗ್ಗೆ 11ಗಂಟೆಯಿಂದ ಸಂಜೆಯವರೆವಿಗೂ ಭಕ್ತಾಧಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆಯಿಂದಲೇ ವೈಕುಂಠ ಉತ್ತರ ದ್ವಾರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ರಾತ್ರಿ 7.30ಕ್ಕೆ ಗಂಟೆಗೆ ಮಹಾ ಮಂಗಳಾರತಿ ಕಾರ್ಯಕ್ರಮ ನಡೆಯಿತು. ಗಾಯಕರಾದ ಅಬಾರಾಶೆ ಚಂದ್ರಶೇಖರ್ ದೂರದರ್ಶನ–ಆಕಾಶವಾಣಿ ಗಾಯಕರಾದ ರವಿಶಿವಕುಮಾರ್, ಜಯಶ್ರೀಚಿಮ್ಮಲ್ ತಂಡದವರು ಹರಿಕಥೆ ಮತ್ತು ಭಕ್ತಿಗೀತ ಗಾಯನ ನಡೆಸಿದರು.

ಇದೇ ದೇ ರೀತಿ ತಾಲ್ಲೂಕಿನ ಹೊಸಹೊಳಲಿನ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ, ಹೇಮಗಿರಿ ಶ್ರೀ ಕಲ್ಯಾಣವೆಂಕಟರಮಣಸ್ವಾಮಿ ದೇವಾಲಯ, ವರಹನಾಥಕಲ್ಲಹಳ್ಳಿಯ ಭೂವರಹನಾಥಸ್ವಾಮಿ ದೇವಾಲಯ, ಹರಿಹರಪುರದ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಾಲಯ, ಕಿಕ್ಕೇರಿಯ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ, ಪಟ್ಟಣದ 8ನೇ ವಾರ್ಡಿನ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ, 17ನೇ ವಾರ್ಡಿನ ಶ್ರೀ ಮುತ್ತುರಾಯಸ್ವಾಮಿ ದೇವಾಲಯ, ಅಕ್ಕಿಹೆಬ್ಬಾಳಿನ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದ ಸೇರಿದಂತೆ ನೂರಾರು ದೇವಾಲಯಗಳಲ್ಲಿ ಸಡಗರ ಸಂಭ್ರಮದಿಂದ ಗೋವಿಂದನಾಮ ಸ್ಮರಣೆಗಳು ಮುಂಜಾನೆಯಿಂದ ರಾತ್ರಿವರೆವಿಗೂ ನಡೆದವು. ಭಕ್ತಾಧಿಗಳು ಸರತಿಯ ಸಾಲಿನಲ್ಲಿ ನಿಂತು ಗೋವಿಂದನ ದರ್ಶನ ಪಡೆದು ಪುನೀತರಾದರು.

# ಮೈಸೂರು ತಲುಪಿದ ಆದಿಯೋಗಿ ರಥಯಾತ್ರೆ



**ಮೈಸೂರು:** ಉಡುಪಿಯಿಂದ ಕೊಯಮತ್ತೂರಿಗೆ ಪ್ರಯಾಣಿಸುವ ಆದಿಯೋಗಿ ರಥಯಾತ್ರೆ ಬುಧವಾರ ಮಧ್ಯಾಹ್ನ ಮೈಸೂರಿಗೆ ಆಗಮಿಸಿತು.

ಕೊಡಗಿನಿಂದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಮತ್ತು ಕೆ.ಆರ್. ನಗರ ಮೂಲಕ ಪ್ರಯಾಣಿಸಿದ ನಂತರ ಮಂಗಳವಾರ ರಾತ್ರಿ ನಗರದ ಹೊರವಲಯದಲ್ಲಿರುವ ಇಲವಾಲ ಬಂದಿಳಿದ ರಥಯಾತ್ರೆ, ಬುಧವಾರ ಬೆಳಿಗ್ಗೆ ಬಳಿಯ ವಿವೇಕಾನಂದ ?ರ್ಮ್ ಹೌಸ್ನಿಂದ ಹೊರಟು, ಹಿನಕಲ್, ಹುಣಸೂರು ರಸ್ತೆಯ ಐಶ್ವರ್ಯ ಪೆಟ್ರೋಲ್ ಬಂಕ್ ಮತ್ತು ಎಸ್‌ಜೆಸಿಇ ಕಾಲೇಜಿನ ರಸ್ತೆಯ ಮೂಲಕ ಸರಸ್ವತಿಪುರಂನಲ್ಲಿರುವ ಕೃಷ್ಣಧಾಮ ತಲುಪಿತು.

ಯಾತ್ರೆಯು ಸ್ವಲ್ಪ ಸಮಯದ ವಿಶ್ರಾಂತಿ ತೆಗೆದುಕೊಂಡು, ನಂತರ ಪುನರಾರಂಭಗೊಂಡು ಸರಸ್ವತಿಪುರಂ ಮತ್ತು ವಿದ್ಯಾರಣ್ಯಪುರಂ ಮೂಲಕ ಹಾದು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠವನ್ನು ತಲುಪಿತು.

ಜ.1ರಂದು ಬೆಳಗ್ಗೆ 8ಕ್ಕೆ ರಥಯಾತ್ರೆಯು ಸುತ್ತೂರು ಶಾಖಾ ಮಠದಿಂದ ಹೊರಟು,ಗೌರಿಶಂಕರ ನಗರ, ಅರಮನೆ ಪಂಚಗವಿಮಠ ,ಗಣಪತಿ ಸಚ್ಚಿದಾನಂದ ಆಶ್ರಮ, ಕಾರ್ಯ ಸಿದ್ಧಿ ಆಂಜನೇಯ ದೇವಸ್ಥಾನ, ರಾಮಾನುಜ ರಸ್ತೆ ಮೂಲಕ ಮಡಿವಾಳ ಸ್ವಾಮಿ ಕಡೆಗೆ ಸಾಗಲಿದೆ.ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಖ್ಯ ರಸ್ತೆ, ಪುರಭವನ ಹಾಲ್ ದೊಡ್ಡಗಡಿಯಾರ , ದೇವರಾಜ ಮಾರುಕಟ್ಟೆ ಬಳಿಯ ಚಿಕ್ಕ ಗಡಿಯಾರ ಗೋಪುರ, ಡಿ. ದೇವರಾಜ್ ಅರಸ್ ರಸ್ತೆ, ಜೆಎಲ್‌ಬಿರಸ್ತೆ, ಹಳೆಯ ಡಿಸಿ ಕಚೇರಿ, ಮಹಾಜನ ಸಭಾಂಗಣ, ಚಂದ್ರಮೌಳೇಶ್ವರ ದೇವಸ್ಥಾನ, ಗೋಕುಲಂ, ವಿಜಯನಗರ ನೀರಿನ ಟ್ಯಾಂಕ್, ಸೂರ್ಯ ಬೇಕರಿ ಮೂಲಕ ರಾತ್ರಿ 8 ಗಂಟೆಗೆ ಹೆಬ್ಬಾಳನಲ್ಲಿರುವ ಅನ್ನಪೂರ್ಣೇಶ್ವರಿ ದೇವಸ್ಥಾನ ತಲುಪಲಿದೆ.

ಜ.2ರಂದು ಆದಿಯೋಗಿ ರಥಯಾತ್ರೆ ಬೆಳಿಗ್ಗೆ 8 ಗಂಟೆಗೆ ಹೆಬ್ಬಾಳದ ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ ಹೊರಟು ಮೇಟಗಳ್ಳಿ ಮತ್ತು ಕೆಆರ್‌ಎಸ್ ರಸ್ತೆ ಮೂಲಕ ಶ್ರೀರಂಗಪಟ್ಟಣದ ಕಡೆಗೆ ಪ್ರಯಾಣಿಸಲಿದ್ದು, ಅಲ್ಲಿಂದ ಮುಂದೆ ಸಾಗಲಿದೆ.

ಶ್ರೀರಂಗಪಟ್ಟಣಕ್ಕೆ ಹೊರಟು, ಅಲ್ಲಿಂದ ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಬೆಂಗಳೂರು, ಚಿಕ್ಕಬಳ್ಳಾಪುರ ಮತ್ತು ಹೊಸೂರು ಮತ್ತು ತಮಿಳುನಾಡಿನ ಇತರ ಪಟ್ಟಣಗಳಿಗೆ ಯಾತ್ರೆ ಪ್ರಯಾಣಿಸಿ, ಕೊಯಮತ್ತೂರು ತಲುಪಲಿದೆ. ಕೆಲವು ದಿನಗಳ ಹಿಂದೆ ಉಡುಪಿಯಿಂದ ಪ್ರಾರಂಭವಾದ ರಥಯಾತ್ರೆಯು ದಕ್ಷಿಣ ಕರ್ನಾಟಕ ಮತ್ತು ಉತ್ತರ ತಮಿಳುನಾಡಿನ ಅನೇಕ ಪಟ್ಟಣಗಳು ಮತ್ತು ನಗರಗಳನ್ನು ಕ್ರಮಿಸಿ, ಸಾವಿರ ಕಿಲೋಮೀಟರ್‌ಗಳಿಗೂ ಹೆಚ್ಚು ದೂರ ಪ್ರಯಾಣಿಸಿ, ಫೆ. 13 ರಂದು ಮಹಾಶಿವರಾತ್ರಿಯಂದು, ತಮಿಳುನಾಡಿನ ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ರಥಯಾತ್ರೆಯು ಕೊನೆಗೊಳ್ಳಲಿದೆ.

# ಮಥುರಾದಲ್ಲಿ ಆಯೋಜಿಸಿದ್ದ ಸನ್ನಿ ಲಿಯೋನ್ ಕಾರ್ಯಕ್ರಮ ರದ್ದು!

ಮಥುರಾ: ಹೊಸ ವರ್ಷಾಚರಣೆ ಪ್ರಯುಕ್ತ ಉತ್ತರ ಪ್ರದೇಶದ ಮಥುರಾದಲ್ಲಿ ಬಾಲಿವುಡ್ ನಟಿ ಸನ್ನಿ ಲಿಯೋನ್ ಅವರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಆದರೆ, ಸ್ಥಳೀಯ ಮಠಾಧೀಶರ ಆಕ್ಷೇಪಣೆ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ನಾವು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಪತ್ರ ಬರೆದಿದ್ದೇವೆ. ಇದು ಶ್ರೀಕೃಷ್ಣನ ಜನ್ಮಸ್ಥಳವಾಗಿದೆ. ಇಲ್ಲಿ ಶ್ರೀಕೃಷ್ಣ ಲೀಲೆ ಪ್ರದರ್ಶನ ನಡೆಯುತ್ತದೆ. ಜತೆಗೆ, ಪ್ರಾರ್ಥನೆ ಸಲ್ಲಿಸಲು ಧರ್ಮಗುರುಗಳು ಇಲ್ಲಿಗೆ ಬರುತ್ತಾರೆ. ಇಂತಹ ಸ್ಥಳದಲ್ಲಿ ಸನ್ನಿ ಲಿಯೋನ್ ಅವರನ್ನು ಕರೆಸಿ ಡಿಜೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಸನ್ನಿ ಲಿಯೋನ್ ಅವರನ್ನು ಮಥುರಾಕ್ಕೆ ಆಹ್ವಾನಿಸುವ ಮೂಲಕ ಕೆಲವರು ಸನಾತನ ಧರ್ಮದ ಬಗ್ಗೆ ಅಪಪ್ರಚಾರ ಮಾಡಲು ಬಯಸುತ್ತಿದ್ದಾರೆ ಎಂದು ಶ್ರೀ ಕೃಷ್ಣ ಜನ್ಮಭೂಮಿ ಸಂಘರ್ಷ ನ್ಯಾಸ್‌ನ ದಿನೇಶ್ ಫಲಹರಿ ತಿಳಿಸಿದ್ದಾರೆ. ಸನ್ನಿ ಲಿಯೋನ್ ಅವರು ಅಶ್ಲೀಲತೆಯನ್ನು ಪ್ರಚಾರ ಮಾಡುತ್ತಾರೆ. ಅಂತವರನ್ನು ಬ್ರಿಜ್ ಭೂಮಿಯಿಂದ ದೂರವಿಡಬೇಕು ಎಂದೂ ದಿನೇಶ್ ಹೇಳಿದ್ದಾರೆ.

ಜನವರಿ 1ರಂದು ನಡೆಯಲಿದ್ದ ಲೈವ್ ಡಿಜೆ ಪ್ರದರ್ಶನದಲ್ಲಿ ಸನ್ನಿ ಲಿಯೋನ್ ಭಾಗವಹಿಸಬೇಕಿತ್ತು. ಆದರೆ, ಮಠಾಧೀಶರು ಮತ್ತು ಭಕ್ತಾದಿಗಳ ಭಾವನೆಗಳನ್ನು ಪರಿಗಣಿಸಿ ಕಾರ್ಯಕ್ರಮವನ್ನು ರದ್ದುಗೊಳಿಸಲು ನಿರ್ಧರಿಸಿದ್ದು, ಟಿಕೆಟ್ ದರ ಮರುಪಾವತಿ ಮಾಡುತ್ತಿದ್ದೇವೆ ಎಂದು ಆಯೋಜಕರಲ್ಲಿ ಒಬ್ಬರಾದ ಮಿಥುಲ್ ಪಾಠಕ್ ಹೇಳಿದ್ದಾರೆ.

# ಬದುಕು ನಾಜೂಕು

## ಶಿಥಿಲವಾಗುತ್ತಿರುವ ಸಂಬಂಧಗಳು

ಮೂರು ನಾಲ್ಕು ದಶಕಗಳ ಹಿಂದೆ ಕುಟುಂಬವೆಂದರೆ ಕೂಡು ಕುಟುಂಬ. ಅದು ಕೇವಲ ಒಂದೇ ಮನೆಯಲ್ಲಿ ಹೆಚ್ಚು ಜನರು ವಾಸಿಸುವ ವ್ಯವಸ್ಥೆಯಲ್ಲ; ಅದು ಬದುಕನ್ನು ಹಂಚಿಕೊಳ್ಳುವ ಸಂಸ್ಕೃತಿ. ಅಜ್ಜಅಜ್ಜಿ ಮನೆಯ ಅನುಭವದ ಶಕ್ತಿಯಾಗಿದ್ದರು. ಅಪ್ಪಅಮ್ಮ ಕುಟುಂಬದ ಹೊಣೆಗಾರಿಕೆಯ ಕಂಬಗಳಾಗಿದ್ದರು . ಮಕ್ಕಳು, ಅಣ್ಣತಮ್ಮಂದಿರು, ಅಕ್ಕತಂಗಿಯರು ಎಲ್ಲರೂ ಒಂದೇ ಜೀವನದ ನಾಡಿ. ಆ ದಿನಗಳಲ್ಲಿ ಮನೆ ಎಂದರೆ , ಬೆಳಿಗ್ಗೆಯಿಂದ ರಾತ್ರಿ ವರೆಗೆ ಮಾತು, ನಗು, ಗದ್ದಲ, ಉಪದೇಶ, ಕೋಪ, ಕ್ಷಮೆಎಲ್ಲವೂ ಒಟ್ಟಾಗಿ ಹರಿಯುತ್ತಿತ್ತು.

ಆ ದಿನಗಳಲ್ಲಿ ಹಣ ಕಡಿಮೆ ಇತ್ತು , ಆದರೆ ಮನಸ್ಸುಗಳು ಶ್ರೀಮಂತವಾಗಿತ್ತು. ಸೌಲಭ್ಯಗಳು ಅಲ್ಪವಾಗಿದ್ದರೂ, ಹೊಂದಿಕೊಳ್ಳುವ ಮನಸ್ಸು ಅಪಾರವಾಗಿತ್ತು. ಒಂದೇ ಕೋಣೆಯಲ್ಲಿ ಹೆಚ್ಚು ಜನ ಮಲಗಿದರೂ ಯಾರಿಗೂ ತೊಂದರೆ ಅನ್ನಿಸುತ್ತಿರಲಿಲ್ಲ. ನೆಲದ ಮೇಲೆ ಹಾಸಿದ ಚಾಪೆ, ತಲೆಗೊಂದು ದಿಂಬು , ಒಂದು ಬೆಡ್‌ಶೀಟ್‌ಇಷ್ಟೇ ಸಾಕು. ಒಂದೇ ಕೋಣೆಯಲ್ಲೊ , ಹಜಾರದಲ್ಲೊ , ಸಾಲಾಗಿ ಎಲ್ಲರೂ ಮಲಗುತ್ತಿದ್ದರು . ಆಗ ಪ್ರೈವಸಿ ಎಂಬ ಶಬ್ಧವೇ ಯಾರಿಗೂ ಗೊತ್ತಿರಲಿಲ್ಲ . ಅದರಲ್ಲಿ ನೆಮ್ಮದಿ ಇತ್ತು, ತೃಪ್ತಿ ಇತ್ತು. ಆರಾಮದ ಬಗ್ಗೆ ಹೆಚ್ಚು ಯೋಚನೆ ಇರಲಿಲ್ಲ; ಒಟ್ಟಿಗಿರುವುದೇ ಆರಾಮವಾಗಿತ್ತು.

ನೆಂಟರು, ಬಂಧುಗಳು ಮನೆಗೆ ಬಂದರೆ ಅದು ಅತಿಥಿ ಪ್ರವೇಶವಲ್ಲ; ಮನೆಯವರೇ ಬಂದಂತೆ. ಇವತ್ತು ಬರ್ತೀವಿ ಎಂದು ಮುಂಚಿತವಾಗಿ ಹೇಳಬೇಕಾಗಿರಲಿಲ್ಲ. ಬಂದವರು ಎಷ್ಟು ದಿನ ಉಳಿದರೂ ಪ್ರಶ್ನೆಯಿರಲಿಲ್ಲ. ಅವರ ಜೊತೆ ಊಟ, ಮಾತು, ನಗು . ಎಲ್ಲವೂ ಸಹಜ, ಸುಂದರ . ಏನು ಬಡಿಸಿದರೂ ಅದೇ ಸಂತೋಷ. ಆಹಾರದ ಬಗ್ಗೆ, ವ್ಯವಸ್ಥೆಯ ಬಗ್ಗೆ, ಆರಾಮದ ಬಗ್ಗೆ ದೂರುಗಳಿರಲಿಲ್ಲ. ಏಕೆಂದರೆ ಆ ಕಾಲದ ಬದುಕು ಏನು ಇದೆ ಎಂಬುದರ ಮೇಲೆ ನಿಂತಿತ್ತು, ಏನು ಇಲ್ಲ ಎಂಬುದರ ಮೇಲೆ ಅಲ್ಲ.

ಕುಟುಂಬದ ಯಾವುದೇ ಕಾರ್ಯಕ್ರಮ, ಅದು ದೊಡ್ಡ ಮದುವೆಯಾಗಿರಲಿ ಅಥವಾ ಸಣ್ಣ ಪೂಜೆಯಾಗಿರಲಿ, ಎಲ್ಲರೂ ಕೈಜೋಡಿಸುತ್ತಿದ್ದರು. ಕೆಲಸ ಯಾರದು ಎಂಬ ಪ್ರಶ್ನೆಯೇ ಇರಲಿಲ್ಲ. ಯಾರು ಏನು ಮಾಡಬಹುದು, ಅದನ್ನೇ ಮಾಡುತ್ತಿದ್ದರು. ಅಡುಗೆ ಮನೆಯಲ್ಲಿ ಮಹಿಳೆಯರು, ಹೊರಗಡೆ ಪುರುಷರು ಎಂಬ ಗಡಿ ಕಡಿಮೆ. ಮಕ್ಕಳು ಸಹ ತಮ್ಮ ಶಕ್ತಿಗೆ ತಕ್ಕಂತೆ ಕೆಲಸ ಮಾಡುತ್ತಿದ್ದರು. ಆ ಕಾರ್ಯಕ್ರಮಗಳು ಕೇವಲ ವಿಧಿವಿಧಾನಗಳಲ್ಲ; ಸಂಬಂಧಗಳನ್ನು ಗಟ್ಟಿಗೊಳಿಸುವ ಸಂದರ್ಭಗಳು.

ಒಬ್ಬರ ಸಂತೋಷ ಎಲ್ಲರ ಸಂತೋಷವಾಗಿತ್ತು. ಒಬ್ಬರ ನೋವು ಎಲ್ಲರ ನೋವಾಗಿತ್ತು. ಯಾರಾದರೂ ಸಂಕಷ್ಟದಲ್ಲಿದ್ದರೆ, ಅದನ್ನು ಒಬ್ಬನೇ ಹೊತ್ತುಕೊಳ್ಳಬೇಕಾಗಿರಲಿಲ್ಲ. ಕುಟುಂಬವೇ ಆ ಭಾರವನ್ನು ಹಂಚಿಕೊಳ್ಳುತ್ತಿತ್ತು. ಅದೇ ಕೂಡು ಕುಟುಂಬದ ದೊಡ್ಡ ಶಕ್ತಿ.

ಆದರೆ ಇಂದೇನಾಗುತ್ತಿದೆ ಬದುಕು ನಾಜೂಕಾಗುತ್ತಿದೆ, ಸಂಬಂಧಗಳು ಶಿಥಿಲವಾಗುತ್ತಿವೆ. ಇದು ಇಂದಿನ ಸಮಾಜದ ವಾಸ್ತವ ಚಿತ್ರಣ. ಇದು ಕೇವಲ ಭಾವನಾತ್ಮಕ ವಾಕ್ಯವಲ್ಲ; ನಮ್ಮ ದಿನನಿತ್ಯದ ಬದುಕಿನಲ್ಲಿ ಅನುಭವಿಸುವ ಮೌನ ಸತ್ಯ. ಬೆಳೆಯುತ್ತಿರುವ ತಂತ್ರಜ್ಞಾನ, ವೇಗ ಪಡೆಯುತ್ತಿರುವ ಜೀವನಶೈಲಿ, ಹೆಚ್ಚುತ್ತಿರುವ ಆಕಾಂಕ್ಷೆಗಳುಈ ಎಲ್ಲದ ನಡುವೆಯೂ ನಾವು ಕಳೆದುಕೊಳ್ಳುತ್ತಿರುವುದು ಅತಿ ಅಮೂಲ್ಯವಾದದ್ದು: ಮಾನವ ಸಂಬಂಧಗಳ ಕೊಂಡಿಗಳು ಕಳಚುತ್ತಿರುವುದು .



ಇಂದಿನ ಬದುಕು ನೋಡಿದರೆ ಎಲ್ಲವೂ ಇದೆ. ಸೌಲಭ್ಯಗಳು, ಸಂಪರ್ಕ ಸಾಧನಗಳು, ಮಾಹಿತಿ, ವೇಗ. ಆದರೆ ಒಳಗೆ ಒಮ್ಮೆ ನೋಡಿಕೊಂಡರೆ, ಎಂದು ಮನಸ್ಸುಗಳು ಖಾಲಿಯಾಗಿವೆ. ಮನೆಗಳಿವೆ, ಆದರೆ ಮನೆತನ ಕಡಿಮೆಯಾಗಿದೆ. ಕುಟುಂಬಗಳಿವೆ, ಆದರೆ ಕುಟುಂಬ ಭಾವನೆಗಳು ನಿಧಾನವಾಗಿ ಮಸುಕಾಗುತ್ತಿವೆ.

ಆದರೆ ಕಾಲ ಬದಲಾಗಿದೆ. ಆರ್ಥಿಕ ಬದಲಾವಣೆಗಳು, ನಗರೀಕರಣ, ಉದ್ಯೋಗದ ಅನಿವಾರ್ಯತೆಗಳು, ಶಿಕ್ಷಣದ ಒತ್ತಡ, ಇವುಗಳ ನಡುವೆ ಕೂಡು ಕುಟುಂಬಗಳು ನಿಧಾನವಾಗಿ ಚದುರಿ ಹೋಗಿದೆ . ಇದು ಸಂಪೂರ್ಣ ತಪ್ಪೆಂದು ಹೇಳಲಾಗದು. ಬದಲಾವಣೆ ಅನಿವಾರ್ಯ. ಆದರೆ ಆ ಬದಲಾವಣೆಯ ಜೊತೆ ನಾವು ಕಳೆದುಕೊಂಡಿದ್ದು ಬಹಳ ಅಮೂಲ್ಯವಾದದ್ದು. ಇಂದು ಮನೆಗಳು ದೊಡ್ಡದಾಗಿದೆ , ಎಲ್ಲರೂ 3–4 ರೂಮುಗಳಿರುವ ಮನೆಯ ಒಡೆಯರೆ. ಆದರೆ ಅಷ್ಟು ದೊಡ್ಡ ಮನೆಯಲ್ಲಿ ಇರುವವರು ಇಬ್ಬರು ಹೆಚ್ಚೆಂದರೆ ಮೂವರು . ನಗರಗಳ ಅಪಾರ್ಟ್‌ಮೆಂಟ್‌ಗಳಲ್ಲಿ ಜೀವನ ಸೀಮಿತವಾಗಿದೆ. ಬದುಕು ವೇಗವಾಗಿದೆ; ಆದರೆ ಸಂಬಂಧಗಳಿಗೆ ಸಮಯ ಕಡಿಮೆಯಾಗಿದೆ. ಒಟ್ಟಿಗೆ ಹುಟ್ಟಿ ಬೆಳೆದ ಅಣ್ಣತಮ್ಮಂದಿರು ಇಂದು ಅಪರೂಪದ ಭೇಟಿಗಳ ಸಂಬಂಧಿಗಳಾಗಿದ್ದಾರೆ. ಬಾಲ್ಯದ ನೆನಪುಗಳು ಮಾತ್ರ ಹೃದಯದಲ್ಲಿ ಉಳಿದಿವೆ; ಹಂಚಿಕೊಳ್ಳುವ ಅವಕಾಶಗಳು ಕಡಿಮೆಯಾಗಿದೆ. ಅಕ್ಕತಂಗಿಯರು ತಮ್ಮ ತಮ್ಮ ಸಂಸಾರದ ಜವಾಬ್ದಾರಿಗಳಲ್ಲಿ ಮುಳುಗಿ, ಹಳೆಯ ನಂಟುಗಳಿಗೆ ಸಮಯವಿಲ್ಲದವರಾಗಿದ್ದಾರೆ.



ಹಿಂದೆ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುತ್ತಿದ್ದ ಅಪ್ಪಅಮ್ಮ ಇಂದು ಮಾತ್ರ ಗೋಡೆಯ ಮೇಲೆ ತೂಗಿರುವ ಫೋಟೋಗಳಲ್ಲಿ ನಗುತ್ತಿದ್ದಾರೆ. ಅವರ ಕಣ್ಣುಗಳಲ್ಲಿ ಒಂದು ಮೌನ ಪ್ರಶ್ನೆನಾವು ಕಟ್ಟಿದ ಈ ಕುಟುಂಬ ಇಷ್ಟು ಬೇಗ ಹೇಗೆ ದೂರವಾಯಿತು ಅವರ ಜೀವಿತಾವಧಿಯಲ್ಲಿ ನೋಡಿದ ತ್ಯಾಗ, ಹೊಂದಾಣಿಕೆ, ಸಹನೆ ಇವುಗಳ ಮೌಲ್ಯವನ್ನು ಇಂದಿನ ಕಾಲ ಸರಿಯಾಗಿ ಅರ್ಥಮಾಡಿಕೊಳ್ಳುತ್ತಿಲ್ಲ ಎಂಬ ಭಾವನೆ ಮೂಡುತ್ತದೆ.

ಹಬ್ಬಗಳ ಸ್ವರೂಪವೂ ಬದಲಾಗಿದೆ. ಒಂದು ಕಾಲದಲ್ಲಿ ಹಬ್ಬವೆಂದರೆ ಕುಟುಂಬವನ್ನು ಒಟ್ಟಿಗೆ ಸೇರಿಸುವ ನೆಪ. ದೂರದೂರಿನಿಂದ ನೆಂಟರು ಬರಬೇಕು, ಮನೆ ತುಂಬಬೇಕು, ಅಡುಗೆ ಮನೆಯ ಬೆಂಕಿ ಆರದೇ ಇರಬೇಕು. ಹಬ್ಬಗಳು ಜೀವನಕ್ಕೆ ಉಸಿರಾಗಿದ್ದವು. ಇಂದೋ ಹಬ್ಬಗಳು ಕ್ಯಾಲೆಂಡರ್‌ನ ಒಂದು ದಿನ, ಸಾಮಾಜಿಕ ಜಾಲತಾಣದ ಒಂದು ಪೋಸ್ಟ್, ಎರಡುಮೂರು ಫೋಟೋಗಳ ಮಟ್ಟಿಗೆ ಸೀಮಿತವಾಗಿವೆ. ಎಲ್ಲರೂ ಸೇರಿ ಅಬ್ಬಬ್ಬಾ ಎನಿಸುವಂತೆ ಆಚರಿಸುತ್ತಿದ್ದ ಹಬ್ಬಗಳು ಇಂದು ಸಮಯದ ಕೊರತೆಯಲ್ಲಿ, ವ್ಯವಸ್ಥೆಯ ಒತ್ತಡದಲ್ಲಿ, ತಕ್ಷಣ ಮುಗಿಸಬೇಕಾದ ಕರ್ತವ್ಯಗಳಾಗಿವೆ. ಸ್ವಿಗ್ಗಿ , ಜೊಮ್ಯಾಟೋ ಗಳಲ್ಲೋ ಅಥವಾ ಯಾವುದೋ ಹೋಟೆಲ್ಗಳಲ್ಲೋ ಊಟ ಮಾಡಿ ಹಬ್ಬ ಮಾಡುವಷ್ಟಕ್ಕೆ ಹಬ್ಬಗಳು ಸೀಮಿತವಾಗಿವೆ .

ನೆಂಟರು, ಬಂಧುಗಳ ಸಂಬಂಧಗಳೂ ತೆಳ್ಳಗಾಗಿವೆ. ಒಮ್ಮೆ ಕರೆದರೂ ಸಂತೋಷವಾಗಿ ಬರುತ್ತಿದ್ದವರು ಇಂದು ಕರೆದರೂ ಬಾರದಂತಾಗಿದ್ದಾರೆ. ಮದುವೆಗೋ ಮುಂಜಿಗೋ ಕರೆದಾಗ ಬಂದು, ಊಟ ಮಾಡಿ ಹೋಗುವುದೇ ಸಂಬಂಧದ ಗಡಿ. ಮಾತನಾಡಲು ಸಮಯವಿಲ್ಲ, ಕೇಳಲು ತಾಳ್ಮೆಯಿಲ್ಲ. ಇದರ ಹಿಂದೆ ಕೇವಲ ಸಮಯದ ಕೊರತೆಯಲ್ಲ; ಒಣ ಪ್ರತಿಷ್ಠೆ, ಅಹಂ, ಅಸ್ಪಷ್ಟ ಅಸಮಾಧಾನಗಳು ಸಂಬಂಧಗಳನ್ನು ನಿಧಾನವಾಗಿ ಒಳಗೊಳಗೆ ಕೊರೆಯುತ್ತಿದೆ .

ಸ್ನೇಹಿತರ ಸ್ಥಿತಿಯೂ ಭಿನ್ನವಲ್ಲ. ಜೀವನದ ಒತ್ತಡ, ಉದ್ಯೋಗದ ಭಾದ್ಯತೆ , ವೈಯಕ್ತಿಕ ಕಾರಣಗಳು, ಆರೋಗ್ಯ ಸಮಸ್ಯೆ ಇವೆಲ್ಲವೂ ಸ್ನೇಹಕ್ಕೆ ಸಮಯವಿಲ್ಲದಂತೆ ಮಾಡಿವೆ. ಬರಬೇಕೆಂದರೂ ಕೈಲಾಗಲ್ಲ ಎಂಬ ವಾಕ್ಯ ಸಾಮಾನ್ಯವಾಗಿದೆ. ಸ್ನೇಹವೂ ಸಂದೇಶಗಳಿಗೆ, ಶುಭಾಶಯಗಳಿಗೆ ಸೀಮಿತವಾಗುತ್ತಿದೆ.

ಗೂಡು ಬಿಟ್ಟ ಮಕ್ಕಳು ಇಂದಿನ ಕಾಲದ ಒಲಸೆ ಹಕ್ಕಿಗಳಾಗಿದ್ದಾರೆ . ಶಿಕ್ಷಣ ಮತ್ತು ಉದ್ಯೋಗದ ಹುಡುಕಾಟದಲ್ಲಿ ದೂರ ಹಾರಿದ ಅವರು, ವರುಷಕ್ಕೊಮ್ಮೆ ಮನೆಗೆ ಬಂದು ಹೋಗುತ್ತಾರೆ. ಆ ಕೆಲ ದಿನಗಳು ಮನೆ ಮತ್ತೆ ಜೀವಂತವಾಗುತ್ತದೆ. ಮಾತು, ನಗು, ಚಲನೆ ಎಲ್ಲ ಮರಳಿ ಬರುತ್ತವೆ. ಆದರೆ ಅವರು ಹೊರಟ ನಂತರ ಉಳಿಯುವುದು ಮೌನ. ಹೆತ್ತವರ ಮನಸ್ಸಿನಲ್ಲಿ ಮಾತ್ರ ಆ ಮೌನ ಬಹುಕಾಲ ನೆಲಸಿರುತ್ತದೆ.

ವಾಟ್ಸಪ್, ಫೇಸ್ಬುಕ್, ಇನ್ಸ್ಟಾಗ್ರಾಂ ಇವೆಲ್ಲಾ ನಮ್ಮನ್ನು ಸಂಪರ್ಕದಲ್ಲಿಟ್ಟಿವೆ ಎಂಬ ಭ್ರಮೆಯನ್ನು ಹುಟ್ಟಿಸುತ್ತಿವೆ. ಆದರೆ ನಿಜವಾದ ಸಂಪರ್ಕವನ್ನು ಕಡಿಮೆ ಮಾಡಿವೆ. ಒಂದು ಲೈಕ್, ಒಂದು ಕಾಮೆಂಟ್, ಒಂದು ಹುಟ್ಟುಹಬ್ಬದ ಶುಭಾಶಯಇವಷ್ಟೇ ಸಂಬಂಧಗಳ ಪ್ರತಿನಿಧಿಗಳಾಗಿವೆ. ಮುಖಾಮುಖಿ ಕುಳಿತು ಆಡುವ ಬೆಚ್ಚನೆ ಮಾತು , ಒಟ್ಟಿಗೆ ಕುಳಿತು ಊಟ ಮಾಡುವ ಸಂತೋಷ, ಕಷ್ಟ ಸುಖ ಹಂಚಿಕೊಳ್ಳುವ ಮನಸ್ಸುಗಳು ನಿಧಾನವಾಗಿ ಮಸುಕಾಗುತ್ತಿದೆ.

ಬದುಕು ನಿಜಕ್ಕೂ ನಾಜೂಕಾಗಿದೆ. ಸಂಬಂಧಗಳು ಇನ್ನೂ ಹೆಚ್ಚು ನಾಜೂಕು. ಅವು ಉಳಿಯಬೇಕೆಂದರೆ ತಂತ್ರಜ್ಞಾನ ಸಾಕಾಗುವುದಿಲ್ಲ. ಬೇಕಾಗಿರುವುದು ಸಮಯ, ಸಹನೆ, ಹೊಂದಾಣಿಕೆ ಮತ್ತು ಒಬ್ಬರಿಗಾಗಿ ಮತ್ತೊಬ್ಬರು ಇಳಿದು ಬರುವ ಮನಸ್ಸು. ಹಿಂದಿನ ಕಾಲದ ಸರಳತೆಯನ್ನು ಸಂಪೂರ್ಣವಾಗಿ ಮರಳಿ ತರಲಾಗದಿದ್ದರೂ, ಅದರ ಸತ್ವವನ್ನು ಉಳಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ.

ಒಂದು ಸರಳ ಫೋನ್ ಕರೆ, ಆಗಿಂದಾಗ್ಗೆ ಭೇಟಿ, ಜೊತೆಯಲ್ಲಿ ಊಟ ತಿಂಡಿ ಮಾಡುವುದು , ಮನದಾಳದಿಂದ ಒಂದಷ್ಟು ನಿಜವಾದ ಮಾತುಇವಷ್ಟೇ ಸಾಕು, ಮಸುಕಾಗಿರುವ ಸಂಬಂಧಗಳಿಗೆ ಮತ್ತೆ ಜೀವ ತುಂಬಲು.

ಮನೆ ಮತ್ತೆ ನಗುವಿನ ಶಬ್ದಗಳಿಂದ ಝುಣಝುಣ ಎನ್ನುತ್ತಿರಲಿ. ಅತಿಥಿ ಹೊರೆಯಿನಿಸದೆ ಹೃದಯಕ್ಕೆ ಹರ್ಷ ತರುವ ಸಾನ್ನಿಧ್ಯವಾಗಿರಲಿ. ಸಂಬಂಧಗಳು ಬಾಧ್ಯತೆಯಾಗಿ ಅಲ್ಲ, ಸಂಕಷ್ಟದಲ್ಲಿ ನಿಲ್ಲುವ ಆಸರೆಯಾಗಿರಲಿ. ಇದು ಕೇವಲ ಓದಿ ಮುಗಿಸುವ ಲೇಖನವಾಗದಿರಲಿ , ನಾವು ಬದುಕುತ್ತಿರುವ ರೀತಿಯನ್ನೇ ಮೌನವಾಗಿ ಪ್ರಶ್ನಿಸುವ ಒಂದು ಆತ್ಮಪರಿಶೀಲನೆಯಾಗಲಿ .




ಸ್ವಾಮಿನಾಥನ್
ಬೆಂಗಳೂರು

# ಹೆಲೋ ಕೇಳಿಲ್ಲಿ ನಿನಗೊಂದು ಪ್ರೀತಿಯ ಪತ್ರ




ಹೆಲೋ ಹಳೆಯ ವರ್ಷ 2025, ನಿನಗೊಂದು ಕೊನೆಯ ಪತ್ರ. ನಿನ್ನನ್ನು ಮರೆಯುವ ಮುನ್ನ, ಮರೆವಾಗುವ ಮುನ್ನ ಒಂದಷ್ಟು ಸಾಲು, ಒಂದಷ್ಟು ಮಾತು. ಜೀವನದಲ್ಲಿ ಒಂದು ಸುಮಧುರ–ಸುಂದರ ಸೋಲನ್ನು ಒಪ್ಪಿಕೊಳ್ಳುತ್ತಿದ್ದೇನೆ. ನಿನ್ನನ್ನು ಎಷ್ಟು ಪ್ರೀತಿಸಿದೆನೆಂದರೆ ಈ ಸೋಲು ಬಹಳ ವಿಶೇಷ ಅನಿಸುತಿದೆ. ನೀನು ಗೆದ್ದ ಗೆಲುವಿಗೊಂದು ಅಭಿನಂದನೆ. ನನ್ನ ಸೋತ ಸೋಲಿಗೊಂದು ಮೆಚ್ಚುಗೆ. ನಂಗೆ ನೀನು ಏನೂ ಮಾಡಲಿಲ್ಲ ಅಂತ ಒಂದು ಕ್ಷಣಕ್ಕೂ ನೋವಾಗುತ್ತಿಲ್ಲ. ಆದರೆ ನಿನ್ನನ್ನು ನಾನು ಎಷ್ಟು ಪ್ರೀತಿಸಿದೆ, ನೋಯಿಸಿದೆ ಅಂತ ಹೇಳಲೇ ಆಗಲಿಲ್ಲವಲ್ಲ ಅದು ಈಗ ನೋವು ಕೊಡುತ್ತಿದೆ. ಆದರೆ ಹಳೆ ವರ್ಷ, ನಿನ್ನೆದುರು ನಿಂತು ಸೋಲುವ ಈ ಸೋಲೂ ಅದ್ಭುತವಾದದ್ದೇ. ನನಗೆ ಪ್ರತಿಯೊಂದು ನೆನಪಿದೆ.



ಮೊಟ್ಟ ಮೊದಲ ದಿನದಿಂದ ನೋಡಿದಾಗಿನಿಂದ, ಕಟ್ಟ ಕಡೆಯ ದಿನ ನಿನ್ನಲ್ಲಿ ನಿರಾಕರಣೆ ಎದ್ದು ಬಂದ ಘಳಿಗೆಯ ತನಕ. ಯಾವುದನ್ನೂ ಮರೆತಿಲ್ಲ. ನಿನ್ನನ್ನು ನೋಡಿದೆ, ಆರಾಧಿಸಿದೆ, ಸುಮ್ಮನೆ ಬೆನ್ನತ್ತಿದೆ, ಬೊಗಸೆಯೊಡ್ಡಿ ಬೇಡಿದೆ, ಅಂಗಲಾಚಿದೆ, ಗೋಗೆರೆದೆ, ಹಠ ಮಾಡಿದೆ, ಅತ್ತೆ! ಆದರೆ ನೀನು ಯಾವುದಕ್ಕೂ ಸಂಬಂಧ ಇಲ್ಲ ಎಂದು ನಿರ್ಧರಿಸಿ ಪ್ರೀತಿಯಿಂದ ಎದುರಿಗೆ ತಂದಿಟ್ಟ ಪ್ರಸಾದವನ್ನೂ ಮುಟ್ಟದಂತೆ ಕುಳಿತು ಬಿಟ್ಟಿರುತ್ತಾನಲ್ಲ ಆ ದೇವರು! ಹಾಗಿದ್ದೆ. ಇವತ್ತು ಸುಮ್ಮನೆ ಕೈಚೆಲ್ಲಿ ವಿದಾಯ ಹೇಳುತ್ತಿದ್ದೇನೆ. ಒಂದು ವರ್ಷದ ಸುಧೀರ್ಘ ಕನಸಿದು. ಹಳೆ ವರ್ಷಕ್ಕೆ ಚರಮಗೀತೆ ಹಾಡಿ ಹೊಸ ವರ್ಷವನ್ನು ಸ್ವಾಗತಿಸುತ್ತಿದ್ದೇನೆ. ನಿನಗೋಸ್ಕರ ನಾನು ಏನೇನು ಮಾಡಿದೆ ಅಂತ ಪಟ್ಟಿ ಕೊಡಲಾರೆ. ಹೌದು ಒಂದು ವರ್ಷ ನಿನ್ನಲ್ಲಿನ ಎಲ್ಲಾ ಹಾಗೂ ಹೋಗುಗಳನ್ನು, ಪ್ರೀತಿಸುವದನ್ನು ಬಿಟ್ಟು ಬೇರೆ ಏನನ್ನು ಮಾಡಲೇ ಇಲ್ಲ. ಕಾಲ ಉರುಳಿದ್ದೆ ಗೊತ್ತಾಗಲಿಲ್ಲ. ಕಾಲ ಎಲ್ಲಾವನ್ನು ಸೇರಿಸಿ ಕೊಂದು ಮುಗುಳ್ನಕ್ಕಿತಾ ಈಗ ಯೋಚಿಸಿ ಪ್ರಯೋಜನವಿಲ್ಲ. ತುಂಬಾ ಸುಂದರಳಾದ, ತುಂಬಾ ಒಳ್ಳೆಯದಾದ ಒಂದು ವರ್ಷ ಹೀಗೆ ಪ್ರೀತಿಸಿದ್ದೆ, ನೋವು ತಿಂದಿದ್ದೆ, ಜಗಳವಾಡಿದ್ಧೆ, ಬೈದಿದ್ದೆ, ಸಂತೋಷ ಪಟ್ಟಿದ್ದೆ ಎಂಬ ಹೆಮ್ಮೆಯೊಂದು ನನ್ನಲ್ಲಿ ಈಗಲೂ ಇದೆ. ನೀನು ಕೊಟ್ಟ ಒಂದು ವರ್ಷದ ಕನಸಿಗೆ, ಖುಷಿಗೆ, ನೋವಿಗೆ, ಕಸುವಿಗೆ ಥ್ಯಾಂಕ್ಸ್ ಹೇಳುತ್ತಾ.

ಕೊನೆಯ ಪತ್ರ ಮುಗಿಸಿ ಹೊಸ ವರ್ಷ 2026ಕ್ಕೆ ಕಾಲಿಡುತ್ತಿದ್ದೇನೆ.



ಪುಷ್ಪ ಪ್ರಸಾದ್

# ಕಲ್ಪತರು ದಿನ

ಹತ್ತೊಂಬತ್ತನೆಯ ಶತಮಾನದಲ್ಲಿ ಪಾಶ್ಚಾತ್ಯದ ಪ್ರಭಾವದಿಂದ ಭಾರತೀಯ ಆಚರಣೆಗಳೆಲ್ಲವೂ ಅರ್ಥಹೀನವೆಂದೇ ಖಂಡಿಸಿ ಆಧ್ಯಾತ್ಮಿಕ ನೆಲೆಯನ್ನೇ ಕಳೆದುಕೊಂಡು ಮುಂದೇನು ಎಂದು ತೋಚದ ಅಂಧಕಾರ ಕವಿದಿದ್ದ ಭಾರತದ ದಿಗಂತದಲ್ಲಿ ಮೂಡಿದ ಆಶಾಕಿರಣದ ಹೊಂಗಿರಣವೇ "ಭಗವಾನ್ ಶ್ರೀರಾಮಕೃಷ್ಣರು ಪರಮಹಂಸರು".

ಪ್ರಾಚೀನಕಾಲದಿಂದಲೂ ರಾಮ, ಕೃಷ್ಣ, ಬುದ್ಧ, ಶಂಕರರಂತಹ ಅವತಾರಪುರುಷರಿಗೆ ಜನ್ಮನೀಡಿ ಜಗತ್ತಿಗೆ ಮಾರ್ಗದರ್ಶನ ನೀಡಿದ್ದ ಭಾರತದ ಆಧ್ಯಾತ್ಮಿಕ ಚೇತನ ಪುನಃ ಚೇತರಿಸಿಕೊಂಡು ಆತ್ಮವಿಶ್ವಾಸದಿಂದ ತನ್ನ ಎಲ್ಲ ಸಂಕೋಲೆಗಳನ್ನು ಕೊಡವಿಹಾಕಿ ಆತ್ಮಬಲದ ಅಭಯವಾಣಿಯನ್ನು ಸ್ವಾಮಿ ವಿವೇಕಾನಂದರ ಸಿಂಹಗರ್ಜನೆಯ ಮೂಲಕ ಜಗತ್ತಿಗೆ ನೀಡಿ ಕುಗ್ಗಿಹೋಗಿದ್ದ ಭಾರತಮಾತೆ ಮತ್ತೆ ತಲೆಯೆತ್ತಿ ನಿಲ್ಲುವಂತೆ ಮಾಡಿದ ಅವತಾರ ಪುರುಷರು.


ಜನವರಿ1 ಬಂತೆಂದರೆ, ಇಡೀ ಲೋಕವೆಲ್ಲ ಹೊಸವರ್ಷದ ಸಂಭ್ರಮದಲ್ಲಿರುತ್ತದೆ. ಆದರೆ ಜನವರಿ1 ಶ್ರೀ ರಾಮಕೃಷ್ಣ ಪರಮಹಂಸರನ್ನು ನೆನಪಿನಲ್ಲಿಡುವ ಪುಣ್ಯದಿನವಾದ ಕಲ್ಪತರು ದಿನ. ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಗೃಹಸ್ಥ ಭಕ್ತರಿಗೆಲ್ಲ ಅವರು ಕೇಳಿದ್ದನ್ನೆಲ್ಲ ಅನುಗ್ರಹಿಸಿದ ದಿನ. ಅದು ಸಂಭವಿಸಿದ್ದು ತೀರಾ ಅನಿರೀಕ್ಷಿತವಾದರೂ ಈ ದಿನ ಕೇಳಿದ್ದನ್ನೆಲ್ಲ ಕರುಣಿಸುವ ಕಲ್ಪತರು ದಿನವಾಗಿದೆ. ವಾಸ್ತವವಾಗಿ ರಾಮ ಕೃಷ್ಣರ ಜನ್ಮದಿನ ಫೆಬ್ರವರಿಯಲ್ಲೇ ಇದ್ದರೂ ಕಲ್ಪತರು ದಿನವು ರಾಮಕೃಷ್ಣರ ಅವತರಣದಲ್ಲಿ ಘಟಿಸಿದಂತಹ ಸ್ಮರಣೀಯ ಘಟನೆಗಳಲ್ಲಿ ಅತ್ಯಂತ ಮಹತ್ವದ್ದೂ ಹಾಗು ಸ್ಮರಣೀಯವಾಗಿದೆ.



ಭಾರತದ ಬೆನ್ನೆಲುಬಾದ ಧರ್ಮವು ಕುಂಟುತ್ತಿದ್ದ ಕಾಲ. ಪರಕೀಯರ ಆಕ್ರಮಣ, ಇಂಗ್ಲೀಷ್ ಶಿಕ್ಷಣ ಪಡೆದ ಯುವಕರಿಂದಾಗಿ, ಅನೇಕ ಭಾರತೀಯರು ತಮ್ಮ ಸಂಸ್ಕೃತಿ, ಆಚಾರ–ವಿಚಾರಗಳನ್ನು ಸಂಶಯಾತ್ಮಕ ದೃಷ್ಟಿಯಿಂದ ಕಾಣತೊಡಗಿದ್ದರು. ತಮ್ಮ ಧರ್ಮದಲ್ಲಿ ಶ್ರದ್ಧೆಯನ್ನು ಕಳೆದುಕೊಂಡಿದ್ದರು. ಸತತವಾಗಿ ಪರಕೀಯರ ಆಳ್ವಿಕೆಯಿಂದ ಜರ್ಜರಿತವಾಗಿ, ನಾವು ಭಾರತೀಯರು ಎಂದು ಆತ್ಮವಿಶ್ವಾಸದಿಂದ ಹೇಳಲು ಸಂಕೋಚಪಡುತ್ತಿದ್ದರು. ತಮ್ಮ ಹಿರಿಯರ ಕುರಿತು ಶ್ರದ್ಧಾಹೀನರಾಗಿದ್ದರು. ಅಂತಹ ವಿಷಮ ಪರಿಸ್ಥಿತಿಯಲ್ಲಿ ಅಮೃತ ಕಲಶವೆಂಬಂತೆ ಯುಗಾವತಾರಿ ಭಗವಾನ್ ಶ್ರೀರಾಮಕೃಷ್ಣರ ಅವತರಣವಾಯಿತು.

ಶ್ರೀ ರಾಮಕೃಷ್ಣ ಪರಮಹಂಸರು ಭಾರತೀಯ ಧರ್ಮದ ವಿವಿಧ ಮತಗಳಾದ ಶಾಕ್ಯ, ವೈಷ್ಣವ, ತಂತ್ರ ಮುಂತಾದ ಮತಗಳ ಸಾಧನೆ ಮಾಡಿ ದೇವರ ದರ್ಶನವನ್ನು ಪಡೆದರು. ಶಾಸ್ತ್ರಗಳು ಬರಿಯ ಪುಸ್ತಕಗಳು, ಬೌದ್ಧಿಕ ವಿಚಾರಗಳಲ್ಲದೆ, ಋಷಿಮುನಿಗಳ ಅನುಭವಗಳು, ಅವು ಸತ್ಯ ಎಂದು ನಮಗೆ ಹಾಗೂ ವಿಶ್ವಕ್ಕೆ ಮನಗಾಣಿಸಿದರು. ಧರ್ಮ–ಅಧ್ಯಾತ್ಮಗಳಿಗೆ ತಮ್ಮ ಸಾಧನೆ–ತಪಸ್ಸಿನಿಂದ ನವಚೇತನವನ್ನು ತುಂಬಿದರು. ಅನ್ಯದೇಶದ ಧರ್ಮಗಳ ಸಾಧನೆಯನ್ನು ಮಾಡಿದರು. ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವುದೋ ಅಂಥ ಜ್ಞಾನವನ್ನು ಪಡೆದರು. ಇಷ್ಟೇ ಅಲ್ಲದೇ ಒಂದು ಇಡೀ ಯುಗ ಚಲಿಸುತ್ತಿದ್ದ ದಿಕ್ಕನ್ನೇ ಬದಲಿಸಿ ,ವಿವಿಧ ಕಠೋರ ಸಾಧನೆಗಳನ್ನು ಮಾಡಿ, ತಪಸ್ಸಿನ ಫಲವನ್ನು, ತಾವು ಕಂಡ ಸತ್ಯವನ್ನು ಆಧ್ಯಾತ್ಮಿಕ ಪಿಪಾಸುಗಳಿಗೆ ಉಣಬಡಿಸಿ ಭಕ್ತಿ ಶ್ರದ್ಧೆ, ವ್ಯಾಕುಲತೆ ಇದ್ದರೆ ಎಲ್ಲವನ್ನೂ ಪಡೆಯಬಲ್ಲಿರಿ ಎಂಬುದನ್ನು ಸಾಧಿಸಿ ತೋರಿಸಿದರು.

ಬೆಳಗ್ಗೆ–ರಾತ್ರಿಯೆನ್ನದೆ ಬಂದ ನೂರಾರು ಭಕ್ತರಿಗೆ ಪ್ರತಿನಿತ್ಯ ಮಾರ್ಗದರ್ಶನ ನೀಡಿದವರು ಶ್ರೀ ರಾಮಕೃಷ್ಣ ಪರಮಹಂಸರು. ಮಂತ್ರೋಪದೇಶದ ಅನುಗ್ರಹ ಮಾಡಿದರು, ಭಕ್ತರ ಪಾಪಗಳನ್ನು ಸ್ವೀಕರಿಸಿದರು. ಪ್ರತಿಫಲವಾಗಿ ಅವರಿಗೆ ಗಂಟಲಿನಲ್ಲಿ ನೋವು ಕಾಣಲಾರಂಭಿಸಿತು. ವೈದ್ಯರು ಹೆಚ್ಚು ಮಾತನಾಡದಿರಲು ತಿಳಿಸಿದರು. ಭಕ್ತರು ಅವರ ಕಾಲುಗಳನ್ನು ಮುಟ್ಟಿ ನಮಸ್ಕಾರವನ್ನು ಮಾಡದಿದ್ದರೆ ಒಳಿತು ಎಂದು ವೈದ್ಯರು ನಿರ್ದೇಶನ ನೀಡಿದ್ದರು. ಆದರೆ ಶ್ರೀರಾಮಕೃಷ್ಣರು ನನ್ನಿಂದ ಒಬ್ಬ ವ್ಯಕ್ತಿಗೆ ಮುಕ್ತಿ ಸಿಗುವುದಾದರೆ, ಒಳ್ಳೆಯದಾಗುವುದಾದರೆ ಎಷ್ಟು ಜನ್ಮಗಳನ್ನು ಬೇಕಾದರೂ ಎತ್ತಿ ಬರುವೆ ಎಂದರು. ವ್ಯಭಿಚಾರಿ, ಕಳ್ಳ, ಬಡವ, ಶ್ರೀಮಂತ, ಕುಡುಕ ಎಂಬ ಭೇದಭಾವ ಮಾಡದೆ ಪ್ರತಿಯೊಬ್ಬ ಜೀವಿಗೂ ಅವರಿಗೆ ಬೇಕಾಗುವ ರೀತಿಯಲ್ಲಿ ನೆರವನ್ನು ನೀಡಿದರು. ಅವರ ಗಂಟಲುನೋವು ದಿನೇದಿನೆ ಹೆಚ್ಚಾಗುತ್ತಾ ಬಂದಿತು. ವೈದ್ಯಕೀಯ ತಪಾಸಣೆಗೆ ಅನುಕೂಲವಾಗಲೆಂದು ದಕ್ಷಿಣೇಶ್ವರದಿಂದ ಕಲ್ಕತ್ತೆಯ ಹೊರವಲಯದ ಕಾಶೀಪುರದಲ್ಲಿದ್ದ ಒಂದು ತೋಟದ ಮನೆಗೆ ಶ್ರೀ ರಾಮಕೃಷ್ಣರನ್ನು



ಕರೆತಂದರು. ಭಕ್ತರು ಹಗಲು–ರಾತ್ರಿ ಶ್ರದ್ಧೆಯಿಂದ ಸೇವೆ ಮಾಡುತ್ತಿದ್ದರು. ಗಂಟಲು ನೋವಿನಿಂದ ಆಹಾರ ಸೇವಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಕ್ರಮೇಣ ಅವರ ಶರೀರವು ಕೃಶಗೊಂಡಿತು. ಅಂತಹ ಅನಾರೋಗ್ಯದ ಸಮಯದಲ್ಲಿ ಒಂದು ಮುಖ್ಯವಾದ ಘಟನೆ ಸಂಭವಿಸಿತು. ಅದು ಶಿಷ್ಯರ ಬಗ್ಗೆ ಶ್ರೀರಾಮಕೃಷ್ಣರಿಗಿದ್ದ ಅಪಾರ ಕರುಣೆಯನ್ನೂ, ಅವರ ವಿಶಿಷ್ಟ ಆಧ್ಯಾತ್ಮಿಕ ಶಕ್ತಿಯನ್ನೂ ತೋರಿಸುತ್ತದೆ. ಅಂದು 1886ರ ಜನವರಿಯ ಮೊದಲನೇ ದಿನ ಶ್ರೀರಾಮಕೃಷ್ಣರು ಆರೋಗ್ಯ ಸುಧಾರಿಸಿದೆ ಎಂದೆನಿಸಿ ತೋಟದಲ್ಲಿ ನಡೆದಾಡಲು ಇಷ್ಟಪಟ್ಟರು. ಆಗ ಅಪರಾಹ್ನ 3 ಘಂಟೆ ಸಮಯವಾಗಿತ್ತು. ಅಂದು ರಜಾದಿನವಾದ್ದರಿಂದ ಸುಮಾರು 30 ಜನ ಗೃಹಸ್ಥ ಭಕ್ತರು ಅಲ್ಲಿ ಇದ್ದರು. ಕೆಲವರು ಕೆಳಗಿನ ಹಜಾರದಲ್ಲಿ ಹಾಗೂ ಇನ್ನು ಕೆಲವರು ಮರಗಳ ಕೆಳಗೆ ಕುಳಿತಿದ್ದರು. ಶ್ರೀರಾಮಕೃಷ್ಣರು ಕೆಳಗಿಳಿದು ಬಂದಾಗ ಹಜಾರದಲ್ಲಿದ್ದವರಿಗೆ ಅವರು ನಡೆದುಬರುತ್ತಿರುವುದನ್ನು ಕಂಡು ಆನಂದ ಉಂಟಾಯಿತು. ಕಲ್ಕತ್ತೆಯ ಪ್ರಸಿದ್ಧ ನಾಟಕಕಾರ, ಸಾಹಿತಿ ಗಿರೀಶ್ ಚಂದ್ರ ಘೋಷರು ಶ್ರೀರಾಮಕೃಷ್ಣರ ಪರಮ ಭಕ್ತ. ಅವರ ಬಳಿ ಬಂದು ಶ್ರೀರಾಮಕೃಷ್ಣರು, ಏನು ತನ್ನ ಬಗ್ಗೆ ಅವತಾರಪುರುಷ, ದೇವರು ಎಂದು ಹೇಳುತ್ತಿದ್ದೀಯಂತೆ! ತನ್ನಲ್ಲಿ ಅಂತಹದ್ದು ಏನು ಕಂಡೆ, ಎಂದರು.

ಭಾವ ಜೀವಿಯಾದ ಗಿರೀಶರು ಮಂಡಿಯೂರಿ ಗದ್ಗದಿತನಾಗಿ, ವಾಲ್ಮೀಕಿ, ವ್ಯಾಸ ಮಹರ್ಷಿಗಳಂತಹ ಮಹಾಮಹಿಮರು ತಮ್ಮನ್ನು ರಾಮನಾಗಿ, ಕೃಷ್ಣನಾಗಿ ಅವತರಿಸಿ ಬಂದಾಗ ವರ್ಣಿಸಲು ಸಂಪೂರ್ಣವಾಗಿ ಸಾಧ್ಯವಾಗಲಿಲ್ಲ. ಈಗ ಅವರೇ ಶ್ರೀರಾಮಕೃಷ್ಣರಾಗಿ ಬಂದಿದ್ದಾರೆ. ಇನ್ನು ಈ ಪಾಮರ ಏನು ತಾನೇ ಹೇಳಲು ಸಾಧ್ಯ ಎಂದು ನಮಸ್ಕರಿಸಿದರಂತೆ. ಅವರ ನಿಷ್ಕಲ್ಮಶ, ಸರಳ ಭಕ್ತಿಯನ್ನು ಕಂಡ ಶ್ರೀರಾಮಕೃಷ್ಣರು ಭಾವಾವಿಷ್ಟರಾದರು, ಭಾವಸಮಾಧಿಗೆ ಹೋದರು. ಆ ಉನ್ನತ ಭಾವದಲ್ಲಿ ಅವರು ಭಕ್ತರನ್ನು ಉದ್ದೇಶಿಸಿ, ನಿಮಗೆ ನಾನಿನ್ನೇನು ತಾನೆ ಹೇಳಲಿ ನೀವು ಚೈತನ್ಯವಂತರಾಗಿ ಎಂದು ಹರಸಿದರು. ಅತ್ಯುನ್ನತ ಆಧ್ಯಾತ್ಮಿಕದ ಭಾವದಲ್ಲಿ ಆಡಿದ ಮಾತುಗಳು ವಿದ್ಯುಚ್ಛಕ್ತಿಯಂತೆ ಎಲ್ಲರ ಮನಸ್ಸನ್ನು ಉನ್ನತ ಮಟ್ಟಕ್ಕೆ ಏರಿಸಿತು. ಅಲ್ಲೆಲ್ಲ ಒಂದು ದಿವ್ಯ ವಾತಾವರಣ ನಿರ್ಮಾಣವಾಯಿತು. ಗಿರೀಶರು ಜೈ ರಾಮಕೃಷ್ಣ! ಜೈ ರಾಮಕೃಷ್ಣ! ಎಂದು ಕೂಗುತ್ತಾ ಶ್ರೀರಾಮಕೃಷ್ಣರಿಗೆ ಸಾಷ್ಟಾಂಗ ಪ್ರಾಣಾಮ ಮಾಡಿದರು. ಆ ಭಕ್ತಿ ಭಾವದಲ್ಲಿ ಶ್ರೀರಾಮಕೃಷ್ಣರ ಕರುಣೆಯು ಮೇರೆ ಮೀರಿ ಎಲ್ಲರ ಮೇಲೂ ಹರಿಯಿತು. ಶ್ರೀರಾಮಕೃಷ್ಣರು ಪ್ರತಿಯೊಬ್ಬರ ತಲೆಯನ್ನು ಸ್ಪರ್ಶಿಸಿ ಹರಸಿದರು. ಆ ಶಕ್ತಿಯುತ ಸ್ಪರ್ಶವು ಅವರ ಮನಸ್ಸುಗಳನ್ನು ಉದ್ದೀಪನಗೊಳಿಸಿತು. ಈ ರೀತಿ ಆಶೀರ್ವಚನ ಪಡೆದ ಭಕ್ತರೆಲ್ಲರೂ ವಿಶಿಷ್ಟವಾದ ಆಧ್ಯಾತ್ಮಿಕ ಅನುಭೂತಿಯನ್ನು ಪಡೆದರು ಆ ಸ್ಪರ್ಶವು ಪ್ರತಿಯೊಂದರ ಮೇಲೂ ವಿದ್ಯುನ್ಮಾನ ಪರಿಣಾಮವನ್ನು ಉಂಟುಮಾಡಿತು. ಕೆಲವರು ನಗತೊಡಗಿದರು. ಕೆಲವರು ಅಳಲು ಪ್ರಾರಂಭಿಸಿದರು; ಕೆಲವರು ಧ್ಯಾನದಲ್ಲಿ ಕುಳಿತುಕೊಂಡರು. ಭಾವೋದ್ವೇಗಕ್ಕೆ ಒಳಗಾದ ಭಕ್ತರು ಶ್ರೀರಾಮಕೃಷ್ಣರ ಸ್ಪರ್ಶದಿಂದ ತಮಗಾದ ಅನುಭವಗಳನ್ನು ತಕ್ಷಣ ಇತರರೊಂದಿಗೆ ಹಂಚಿಕೊಂಡರು. ಕೆಲವರು ಅವರು ಅಗಾಧವಾದ ಆನಂದವನ್ನು ಅನುಭವಿಸಿದರು, ಕೆಲವರು ದೈವಿಕ ಬೆಳಕನ್ನು ಕಂಡರು, ಕೆಲವರು ತಮ್ಮ ವೈಯಕ್ತಿಕ ದೇವರ ದರ್ಶನವನ್ನು ಪಡೆದರು. ಈ ಅನುಭವದ ಆನಂದ ವರ್ಣನಾತೀತ ಎಂದು ಎಲ್ಲರಿಗೂ ಅನಿಸಿತು. ಅಂದು ಗುರು ಕೃಪೆಗೆ ಪಾತ್ರನಾಗಿದ್ದ ರಾಮಕುಮಾರೆಂಬ ಭಕ್ತರು ತನ್ನ ಅನುಭವವನ್ನು ಮುಂದೆ ಹೀಗೆ ಹೇಳುತ್ತಾರೆ : ನನಗೆ ಧ್ಯಾನಕ್ಕೆ ಕುಳಿತಾಗ ನನ್ನ ಇಷ್ಟದೇವರ ಮೂರ್ತಿಯ ಯಾವುದಾದರೂ ಒಂದು ಭಾಗ ಮಾತ್ರ ಕಾಣುತ್ತಿತ್ತು. ಧ್ಯಾನ ಮಾಡಲು ತುಂಬಾ ಶ್ರಮಿಸುತ್ತಿದ್ದೆ. ಆದರೆ ಅಂದು ಶ್ರೀರಾಮಕೃಷ್ಣರ ಕೃಪೆ ದೊರೆತ ಮೇಲೆ ಧ್ಯಾನಕ್ಕೆ ಕುಳಿತಾಗ ನನ್ನ ಇಷ್ಟದೇವರ ಮೂರ್ತಿ ಸಂಪೂರ್ಣವಾಗಿ ಕಾಣಲು ಪ್ರಾರಂಭವಾಯಿತು. ಅದು ಚಿನ್ಮಯವಾಗಿ, ಜೀವಂತವಾಗಿರುವ ಅನುಭವವೂ ಉಂಟಾಯಿತು. ಅಂದಿನಿಂದ ಇಂದಿಗೂ ನಾನು ಧ್ಯಾನದ ಸಮಯದಲ್ಲಿ ಅಲೌಕಿಕ ಆನಂದವನ್ನು ಅನುಭವಿಸುತ್ತಿದ್ದೇನೆ.

ಕಲಿಯುಗದಲ್ಲಿ 19ನೆಯ ಶತಮಾನದಲ್ಲಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು ಅವರ ಅವತರಣದಲ್ಲಿ ಕಲ್ಪತರುವಾಗಿ, (ಬೇಡಿದ್ದನ್ನು ಕೊಡುವುದು ಎಂದು) ಭಕ್ತರ ಮನೋಕಾಮನೆಗಳನ್ನು, ಆಧ್ಯಾತ್ಮಿಕ ಜಾಗೃತಿಯನ್ನು ಸಾರ್ವತ್ರಿಕವಾಗಿ ಕರುಣಿಸಿದ ಸುದಿನ, ಅಂದು ತಮ್ಮ ನಿಜಸ್ವರೂಪವನ್ನು ಪ್ರಕಟಿಸಿ ಗುರುಕರುಣೆ, ಪತಿತ ಪಾವನರೆಂದು ತಾರತಮ್ಯ ಮಾಡದೆ ಕಲ್ಪತರುವಿನಂತೆ ಪ್ರತಿಯೊಬ್ಬರಿಗೂ ಪರಮಾನುಗ್ರಹ ನೀಡಿದ ಅಪರೂಪದ ಸಂದರ್ಭವಿದು. ಇದರ ನೆನಪಿಗೆ ಅವರ ಶಿಷ್ಯರಲ್ಲಿ ಒಬ್ಬರಾದ ರಾಮಚಂದ್ರ ದತ್ತ ಮೊದಲಿಗೆ "ಕಲ್ಪತರು ದಿನ"ದ ಆಚರಣೆ ಆರಂಭಿಸಿದರು .ಇಂದು ಅದು ಬೃಹದಾಚರಣೆಯಾಗಿ ಬೆಳೆದಿದೆ. ರಾಮಕೃಷ್ಣರು ತಮ್ಮ ಈ ದಿವ್ಯತ್ವವನ್ನು ತೋರಿದ ಕಾಶೀಪುರದ ಉದ್ಯಾನದಲ್ಲಂತೂ ಈ ದಿವಸ ಬಂತೆಂದರೆ, ಲಕ್ಷಾಂತರ ಜನ ಸೇರುತ್ತಾರೆ.

ಜನವರಿಯ ಮೊದಲ ದಿನದಂದು ಮಧ್ಯಾಹ್ನ 3 ರಿಂದ 4 ರವರೆಗೆ ಧ್ಯಾನದ ಅವಧಿಯಲ್ಲಿ ಅಸಾಧಾರಣವಾದ ಶಾಂತಿಯನ್ನು ಅನುಭವಿಸಬಹುದೆಂದು ಶ್ರೀ ರಾಮಕೃಷ್ಣ ಮಠಗಳಲ್ಲಿ ಈ ಮಂಗಳಕರ ಅವಧಿಯಲ್ಲಿ ಶ್ರೀ ರಾಮಕೃಷ್ಣರ ಅನುಯಾಯಿಗಳು ಧ್ಯಾನವನ್ನು ಕೈಗೊಳ್ಳುತ್ತಾರೆ.



ಸೌಮ್ಯಸನತ್

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,